ಉಲುಚುಕಮ್ಮೆ ಪ್ರಕಾಶನ ಮಾಲೆ

ನಟರತ್ನ

ಕೆ.ಎಸ್. ಅಶ್ವತ್ಥ್

ಎನ್. ಆನಂದ ರಾಮರಾವ್



ಉಲುಚುಕಮ್ಮೆ ಬ್ರಾಹ್ಮಣ ಮಹಾಸಭಾ

ನಂ.33, ಹೆಚ್. ಸಿದ್ದಯ್ಯ ರಸ್ತೆ, ವಿಲ್ಸನ್ ಗಾರ್ಡನ್, ಬೆಂಗಳೂರು-27.

ಉಲುಚುಕಮ್ಮೆ ಸಾಧಕರ ಮಾಲೆ

ನಟರತ್ನ

ಕೆ.ಎಸ್. ಅಶ್ವತ್ಥ್

ಎನ್. ಆನಂದ ರಾಮರಾವ್

ಉಲುಚುಕಮ್ಮೆ ಬ್ರಾಹ್ಮಣ ಮಹಾಸಭಾ
ನಂ.33, ಹೆಚ್. ಸಿದ್ಧಯ್ಯ ರಸ್ತೆ, ವಿಲ್ಸನ್ ಗಾರ್ಡನ್,
ಬೆಂಗಳೂರು-560 027. ದೂರವಾಣಿ: 080-2223 3049

NATARATNA K.S. ASHWATH written by N. Ananda Ramarao,
'Sri Narasimha Krupa', # 88, Nehru Road, Girinagar, Bangalore-560 085.
Ph: 080-2672 2575, 99802 04351.

Published by Uluchukamme Brahmana Mahasabha, # 33, H. Siddhaiah Road,
Wilson Garden, Bangalore-560 027, Ph: 080-22233049

First Edition	:	2010
Copy Right	:	Author
Pages	:	68
Paper used	:	70 GSM Maplitho
Copies	:	1000
Price	:	₹ **50/-**


ನಟರತ್ನ ಕೆ.ಎಸ್. ಅಶ್ವತ್ಥ್ ಲೇಖಕರು ಎನ್. ಆನಂದ ರಾಮರಾವ್,
'ಶ್ರೀ ನರಸಿಂಹಕೃಪ', ನಂ.88, ನೆಹರು ರಸ್ತೆ, ಗಿರಿನಗರ, ಬೆಂಗಳೂರು-560 085.
ದೂರವಾಣಿ: 080-2672 2575, 99802 04351.

ಪ್ರಕಾಶಕರು: ಉಲುಚುಕಮ್ಮೆ ಬ್ರಾಹ್ಮಣ ಮಹಾಸಭಾ, ನಂ.33, ಹೆಚ್. ಸಿದ್ಧಯ್ಯ ರಸ್ತೆ,
ವಿಲ್ಸನ್ ಗಾರ್ಡನ್, ಬೆಂಗಳೂರು-560 027. ದೂರವಾಣಿ: 080-2223 3049

ಮೊದಲ ಮುದ್ರಣ	:	2010
ಕೃತಿ ಸ್ವಾಮ್ಯ	:	ಲೇಖಕರು
ಪ್ರತಿಗಳು	:	1000
ಬೆಲೆ	:	₹ **50/-**

ಮುದ್ರಕರು : ಪರಿಶ್ರೀ ಪ್ರಿಂಟರ್ಸ್
9, 4ನೇ ಅಡ್ಡರಸ್ತೆ, ನಾಗಪ್ಪ ಬ್ಲಾಕ್, ಶ್ರೀರಾಮಪುರಂ, ಬೆಂಗಳೂರು-560 021.
© 23128286, 32016398, Email: parishree@yahoo.com; parishree@gmail.com

ಅಧ್ಯಕ್ಷರ ನುಡಿ



ಉಲುಚುಕಮ್ಮೆಯು ಕರ್ನಾಟಕದಲ್ಲಿ ಬಹು ಪ್ರಾಚೀನ ಕಾಲದಿಂದಲೂ ನೆಲೆಸಿರುವ ಸಮುದಾಯಗಳಲ್ಲಿ ಒಂದು. ಕಮ್ಮೆ ಎಂಬ ಸಾಮಾನ್ಯ ಸಮುದಾಯಕ್ಕೆ ಸೇರಿದ ಅನೇಕ ಬ್ರಾಹ್ಮಣ ಪಂಗಡ ಸುಮಾರು ಸಾವಿರ ವರ್ಷಗಳ ಹಿಂದಿನಿಂದಲೂ ಕಂಡುಬರುತ್ತದೆ. ಉದಾಹರಣೆಗೆ ಚಾಲುಕ್ಯದೊರೆ ಅರಿಕೇಸರಿಯ ಆಸ್ಥಾನದಲ್ಲಿ ದಂಡನಾಯಕನಾಗಿದ್ದ ಕವಿ ಪಂಪ, ಬಿಜ್ಜಳನ ಆಸ್ಥಾನದಲ್ಲಿ ಭಂಡಾರಿಯಾಗಿದ್ದ ವೀರಶೈವಧರ್ಮ ಪ್ರತಿಪಾದಕ ಬಸವಣ್ಣ, ಹೊಯ್ಸಳ ರಾಜರ ಆಶ್ರಯದಲ್ಲಿದ್ದ ಜನ್ನ, ಸುಮನೋಭಾಣ ಇತ್ಯಾದಿ ದಿಗ್ಗಜರೆಲ್ಲಾ ಕಮ್ಮೆಕುಲದವರೇ. ಅದರಲ್ಲೂ ವಿಜಯನಗರ ಸಾಮ್ರಾಜ್ಯ ಸ್ಥಾಪಕರಾದ ವಿದ್ಯಾರಣ್ಯರು ಉಲುಚುಕಮ್ಮೆ ಸಮುದಾಯದವರೆಂದೇ ನಂಬಲಾಗಿದೆ. ಈ ಸಮುದಾಯ ಮೂಲತಃ ಬ್ರಾಹ್ಮಣ ಕರ್ಮಗಳನ್ನು ನಡೆಸಿಕೊಂಡು ಹೋಗುತ್ತಿದ್ದರಲ್ಲದೆ ರಾಜ್ಯದ ಆಡಳಿತದಲ್ಲಿ ಅಧಿಕಾರವರ್ಗದವರೂ ಆಗಿರುತ್ತಿದ್ದರು. ಈ ಸಂಪ್ರದಾಯ ನಮ್ಮ ಉಲುಚುಕಮ್ಮೆ ಸಮುದಾಯದಲ್ಲಿ ಈಗಲೂ ಕಂಡುಬರುತ್ತಿದೆ. ಇತ್ತೀಚಿನ ದಿನಗಳಲ್ಲಿ ಆಗಿರುವ ಸಾಮಾಜಿಕ ಬೆಳವಣಿಗೆಗೆ ಅನುಗುಣವಾಗಿ ತಮ್ಮ ಜೀವನಕ್ರಮವನ್ನು ವಿಸ್ತರಿಸಿಕೊಂಡಿದ್ದಾರೆ. ಅಂದರೆ ಸಾಹಿತ್ಯ, ಸಂಗೀತ, ಸಮಾಜ ಸೇವೆ, ಇತಿಹಾಸ, ಆಡಳಿತ, ಕ್ರೀಡೆ, ವಿಜ್ಞಾನ, ವೈದ್ಯಕೀಯ, ತಂತ್ರಜ್ಞಾನ ಉದ್ಯಮ ಮುಂತಾದ ಕ್ಷೇತ್ರಗಳಲ್ಲಿ ಅನುಪಮ ಸೇವೆ ಮಾಡಿ ರಾಜ್ಯ, ರಾಷ್ಟ್ರ, ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಖ್ಯಾತರಾಗಿದ್ದಾರೆ. ಅಂತಹ ಮಹನೀಯರ ಸಂಕ್ಷಿಪ್ತ ಜೀವನಚರಿತ್ರೆಯನ್ನು ನಮ್ಮ ಮುಂದಿನ ಪೀಳಿಗೆಯವರಿಗೆ ಪರಿಚಯ ಮಾಡಿಸುವ ಪ್ರಯುಕ್ತ ಉಲುಚುಕಮ್ಮೆ ಸಾಧಕರ ಮಾಲೆ ಪ್ರಕಟಿಸಲು ಮಹಾಸಭೆಯು ನಿಶ್ಚಯಿಸಿತು. ಈ ಕಾರ್ಯದಲ್ಲಿ ನಮ್ಮ ಸಮುದಾಯದ ಅನೇಕ ಬಂಧುಗಳ ಹಾಗೂ ಮಹನೀಯರ ಉತ್ತಮ ಸಹಕಾರದಿಂದ ಸಾಧಕರ ಮಾಲೆಯನ್ನು ಪ್ರಕಟಿಸಲು ಸಾಧ್ಯವಾಗಿದೆ.


ನಮ್ಮ ಆಹ್ವಾನಕ್ಕೆ ಓಗೊಟ್ಟು ಸಾಧಕರ ಮಾಲೆಗೆ ಪ್ರಧಾನ ಸಂಪಾದಕರಾಗಲು ಪ್ರಸಿದ್ಧ ಇತಿಹಾಸ ತಜ್ಞರಾದ ಡಾ. ಎಸ್. ನಾಗರಾಜುರವರು ಒಪ್ಪಿಕೊಂಡಿರುವುದು ಸಂತೋಷದ ವಿಷಯ. ಈ ಕಾರ್ಯವನ್ನು ಸಾಧಿಸಲು ಈ ಮಾಲೆಯ ಸಂಚಾಲಕರಾಗಿ ಪ್ರಸಿದ್ಧ ಸಾಹಿತಿ ಮತ್ತು ವಿಜ್ಞಾನಿಯಾದ ಶ್ರೀ ಟಿ.ಆರ್. ಅನಂತರಾಮುರವರು ವಿಶೇಷ ಆಸ್ಥೆವಹಿಸಿದವರಾಗಿದ್ದಾರೆ. ಖ್ಯಾತ ಬರಹಗಾರರಾದ ಶ್ರೀ ಸುರೇಶ ಮೂನ, ಶ್ರೀ ಎನ್. ಆನಂದ ರಾಮರಾವ್ ಮತ್ತು ಶ್ರೀ ನೆ.ಲ. ರಾಮಮೂರ್ತಿ ಸಾಧಕರ ಮಾಲೆಯ ಸಂಪಾದಕ ಮಂಡಳಿಯ ಸದಸ್ಯರಾಗಿದ್ದಾರೆ. ಮಾಲೆಯ ಎಲ್ಲಾ ಲೇಖಕರ ಶ್ರದ್ಧೆ ಮತ್ತು ಶ್ರಮ ಶ್ಲಾಘನೀಯವಾದುದು.

ಶ್ರೀ ಬಿ.ವಿ. ಕುಮಾರ್, ಮತ್ತಿಕೆರೆ ಶ್ರೀ ಆರ್. ಅನಂತರಾಮನ್ ಮತ್ತು ಶ್ರೀ ಎಂ.ಎಸ್. ನಾಗರಾಜರಾವ್ ಈ ಮಹತ್ತರ ಕಾರ್ಯವನ್ನು ಅನುಷ್ಠಾನಕ್ಕೆ ತರಲು ಶ್ರಮಿಸಿದ್ದಾರೆ. ಈ ಕಾರ್ಯಕ್ರಮ ಅತ್ಯುತ್ತಮವಾಗಿ ಶೀಘ್ರವಾಗಿ ನೆರವೇರಿಸುವುದಕ್ಕೆ ಮಹಾಸಭೆಯ ಉಪಾಧ್ಯಕ್ಷರಾದ ಶ್ರೀ ಜಿ.ವಿ. ಪ್ರಭಾಕರ್‌ರವರು ಹಾಗೂ ಕಾರ್ಯದರ್ಶಿಗಳಾದ ವಿ. ಮಂಜುನಾಥ್‌ರವರ ಉತ್ಸಾಹ ಮತ್ತು ಶ್ರಮ ಶ್ಲಾಘನೀಯವಾದುದ್ದು.

"ಸಾಧಕರ ಮಾಲೆ"ಯನ್ನು ಪ್ರಕಟಿಸಲು ಕಾರ್ಯಕಾರಿ ಮಂಡಳಿ ಸದಸ್ಯರು ವಿಶೇಷವಾಗಿ ಶ್ರಮಿಸಿದ್ದಾರೆ ಮತ್ತು ಪರಿಶ್ರೀ ಪ್ರಿಂಟರ್ಸ್‌ನ ಮಾಲೀಕರಾದ ಶ್ರೀ ಶ್ರೀನಾಥ್‌ರವರು ಮುದ್ರಣ ಕೆಲಸವನ್ನು ಅಚ್ಚುಕಟ್ಟಾಗಿ ನೆರವೇರಿಸಿಕೊಟ್ಟಿರುವರು. ಇವರೆಲ್ಲರನ್ನು ಸ್ಮರಿಸುವದು ನನ್ನ ಆದ್ಯ ಕರ್ತವ್ಯ ಮತ್ತು ಇವರೆಲ್ಲರಿಗೂ ನಾನು ಆಭಾರಿ.

ಪಿ.ಎಸ್. ಅಶ್ವತ್ಥನಾರಾಯಣ ರಾವ್
ಗೌರವ ಅಧ್ಯಕ್ಷರು

ಸಾಧಕರ ಮಾಲೆ ಕುರಿತು ಎರಡು ಮಾತು




ಉಲುಚುಕಮ್ಮೆ ಬ್ರಾಹ್ಮಣ ಮಹಾಸಭೆಯು ಆಗಿಂದಾಗ್ಗೆ ಚಿಂತಕರೊಡನೆ ಚರ್ಚೆ ಮಾಡಿ ಮಹಾಸಭೆಯ ಸರ್ವಾಂಗೀಣ ಬೆಳವಣಿಗೆಗಾಗಿ ಸಲಹೆಗಳನ್ನು ಪಡೆಯುತ್ತ, ಅವುಗಳನ್ನು ಅನುಷ್ಠಾನ ಮಾಡುತ್ತಾ ಬಂದಿದೆ. ಸಂಸ್ಥೆಯ ಕಾರ್ಯಚಟುವಟಿಕೆಗಳ ಜೊತೆಗೆ ನಮ್ಮ ಸಮುದಾಯದಲ್ಲಿ ಬೇರೆ ಬೇರೆ ಕ್ಷೇತ್ರಗಳಲ್ಲಿ ಅನನ್ಯ ಸಾಧನೆ ಮಾಡಿರುವವರನ್ನು ಕುರಿತು ಕೃತಿರೂಪದಲ್ಲಿ ಪ್ರಕಟಣೆ ಮಾಡಬೇಕೆಂದು ಇಂತಹ ಚಿಂತಕರ ಸಭೆಯಲ್ಲಿ ಮೂಡಿಬಂದ ಒಂದು ಅಭಿಪ್ರಾಯ. ಇದನ್ನು ಸಭೆಯಲ್ಲಿ ಪ್ರಸ್ತಾಪಿಸಿದವರು ಸದಸ್ಯರಲ್ಲೊಬ್ಬರಾದ ಹಾಗೂ ಈ ಮಾಲೆಯ ಹಾಲಿ ಸಂಚಾಲಕರಾದ ಲೇಖಕ ಶ್ರೀ ಟಿ.ಆರ್. ಅನಂತರಾಮು. ಈ ಅಭಿಪ್ರಾಯಕ್ಕೆ ಒಡನೆಯೇ ಸಮ್ಮತಿಸಿ ಅದನ್ನು ಕಾರ್ಯಶೀಲವಾಗಿಸುವಲ್ಲಿ ಉತ್ತೇಜಿಸಿದವರು ಸಾಧಕರ ಮಾಲೆಯ ಪೋಷಕರಾದ ಶ್ರೀ ಬಿ.ವಿ. ಕುಮಾರ್ ಅವರು ಹಾಗೂ ಮಹಾಸಭೆಯ ಕಾರ್ಯದರ್ಶಿಗಳಾದ ಶ್ರೀ ವಿ. ಮಂಜುನಾಥ್‌ರವರು. ಈ ಪ್ರಸ್ತಾವನೆಯನ್ನು ತುಂಬು ಮನಸ್ಸಿನಿಂದ ಮಹಾಸಭಾದ ಕಾರ್ಯಕಾರಿ ಸಮಿತಿಯವರು ಸ್ವೀಕರಿಸಿದರು. ಒಡನೆಯೇ ಕಾರ್ಯೋನ್ಮುಖವಾಗುವ ಉತ್ಸಾಹವನ್ನು ಮಹಾಸಭೆ ವ್ಯಕ್ತಪಡಿಸಿತು.

ಯಾವುದೇ ಪ್ರಕಟಣೆಯ ಕೆಲಸ ಸುಲಭವಲ್ಲವಷ್ಟೇ. ಇದಕ್ಕಾಗಿ ಸಮಿತಿ ನೇಮಕವಾಗಿ ನನಗೆ ಮಹಾಸಭೆಯ ಗೌರವ ಉಪಾಧ್ಯಕ್ಷ ಸ್ಥಾನದ ಜೊತೆಗೆ 'ಸಾಧಕರ ಮಾಲೆ'ಯ ಕಾರ್ಯನಿರ್ವಹಣೆಯ ಹೊಣೆಯನ್ನು ಮಹಾಸಭೆ ವಹಿಸಿತು. ಇದೊಂದು ನನ್ನ ಪಾಲಿಗೆ ಬಂದ ಭಾಗ್ಯವೆಂದೇ ಭಾವಿಸಿದ್ದೇನೆ. ಹತ್ತಾರು ಮುದ್ರಣಾಲಯಗಳಿಗೆ ಹೋಗಿ, ಅತ್ಯಂತ ಕಡಿಮೆ ಬೆಲೆಯಲ್ಲಿ ಮುದ್ರಣ ಮಾಡುವ, ಆದರೆ ಗುಣಮಟ್ಟದಲ್ಲಿ ರಾಜಿ ಮಾಡಿಕೊಳ್ಳದ ಮುದ್ರಣಕಾರರನ್ನು ಗೊತ್ತು ಮಾಡುವ ಕೆಲಸದಲ್ಲಿ ನನ್ನೊಂದಿಗೆ ಮತ್ತೀಕೆರೆಯ ಶ್ರೀ ಚೌಡೇಶ್ವರಿ ಚಾರಿಟಬಲ್ ಟ್ರಸ್ಟ್‌ನ ಮ್ಯಾನೇಜಿಂಗ್ ಟ್ರಸ್ಟಿ ಹಾಗೂ ಸಾಧಕರ ಮಾಲೆಯ ಪೋಷಕರೂ ಆದ ಶ್ರೀ ಆರ್. ಅನಂತರಾಮನ್‌ರವರು ತುಂಬ ಆಸಕ್ತಿ ತೋರಿದರು. ಲೇಖಕರನ್ನು ಸಂಪರ್ಕಿಸುವ, ಸಾಧಕರ ಬಗ್ಗೆ ಬರೆಸಲು ಏರ್ಪಾಟು ಮಾಡುವ, ಆಗಿಂದಾಗ್ಗೆ ಸಂಪಾದಕ ಮಂಡಲಿಯ ಸಭೆ ಕರೆಯುವ ಈ ಹೊಣೆಗಾರಿಕೆಯಲ್ಲಿ ನಾನು ಕಲಿತದ್ದೇ ಹೆಚ್ಚು, ಇದೊಂದು ಸಂತೋಷದ ಅನುಭವ ಕೂಡ. ಪ್ರಥಮವಾಗಿ ಮಹಾಸಭೆ ಯೋಜಿಸಿದ ಇಂಥ ದೊಡ್ಡ ಯೋಜನೆಯೊಂದರಲ್ಲಿ ನಾನು ಪಾಲ್ಗೊಳ್ಳುವ ಅವಕಾಶವನ್ನು ಕಲ್ಪಿಸಿದ ಮಹಾಸಭೆಗೆ ಮತ್ತು ಉಲುಚುಕಮ್ಮೆ ಸಾಧಕರ ಮಾಲೆಯ ಸಂಪಾದಕ ವರ್ಗಕ್ಕೆ ಹಾಗೂ ಉಲುಚುಕಮ್ಮೆ ಬ್ರಾಹ್ಮಣ ಮಹಾಸಭೆಯ ಗೌರವ ಅಧ್ಯಕ್ಷರು, ಗೌರವ ಕಾರ್ಯದರ್ಶಿಗಳು ಮತ್ತು ಕಾರ್ಯಕಾರಿ ಮಂಡಳಿಯ ಎಲ್ಲ ಸದಸ್ಯರಿಗೆ ನನ್ನ ಕೃತಜ್ಞತೆಗಳು.

ಸಾಧಕರ ಮಾಲೆಯಲ್ಲಿ ಮೊದಲ ಕಂತಾಗಿ ಹತ್ತು ಮಂದಿ ಅನನ್ಯ ಸಾಧಕರ ಜೀವನ ಚರಿತ್ರೆ ಹೊರಬರುತ್ತಿದೆ. ಈ ಮಾಲೆಯಡಿ ಮುಂದೆಯೂ ನಮ್ಮ ಸಮುದಾಯದ ಅನೇಕ ಖ್ಯಾತರ ಜೀವನ ಚರಿತ್ರೆಗಳು ಪ್ರಕಟವಾಗಲಿವೆ. ಇಂಥದೊಂದು ಮಾಲೆ ಮಹಾಸಭೆಯ ಮೂಲಕ ಪ್ರಕಟವಾಗುತ್ತಿದೆಯೆಂಬ ಸುದ್ದಿಯೊಂದರಿಂದಲೇ ಅನೇಕ ಮಂದಿ ಸ್ಫೂರ್ತಿಗೊಂಡು ಕೆಲವರು ಪ್ರಕಟಣೆಯ ವೆಚ್ಚವನ್ನೂ ನೀಡಿದ್ದಾರೆ. ಇದರಲ್ಲಿ ಮೊದಲು ಉತ್ತೇಜನ ದೊರೆತದ್ದು ಹೊಸಕೆರೆ ಚಿದಂಬರಯ್ಯನವರನ್ನು ಕುರಿತು ಕೃತಿ ಹೊರತರಲು ಮುಂದೆ ಬಂದವರು ಅವರ ಮೊಮ್ಮಗನಾದ ನೆಲಮಂಗಲದ ವಾಸಿ ದಿವಂಗತ ಚಿದಂಬರರವರು. ಮಹಾಸಭೆ ಇದರಿಂದ ಇನ್ನಷ್ಟು ಉತ್ತೇಜಿತವಾಗಿದೆ. ಈ ಮಾಲೆಯ ಪ್ರಕಟಣೆಗಾಗಿ ತಾವೂ ಕೊಡುಗೆ ನೀಡಿ ತಮ್ಮ ಸಾರಸ್ವತ ಪ್ರೀತಿಯನ್ನು ತೋರಿಸಬಹುದು. ಸಾಧಕರ ಮಾಲೆಯ ಕೃತಿಗಳು ನಮ್ಮ ಸಮುದಾಯದವರಿಗೆ, ವಿಶೇಷವಾಗಿ ಮುಂದಿನ ಪೀಳಿಗೆಗೆ, ಸ್ಫೂರ್ತಿಯ ಸೆಲೆಯಾಗಲಿವೆ. ಇಂಥ ಒಂದು ಮಹತ್ತರ ಯೋಜನೆಗೆ ನಮ್ಮ ಮಹಾಸಭೆಯ ಸದಸ್ಯರು ಎಲ್ಲ ಬಗೆಯ ಸಹಕಾರವನ್ನು ನೀಡುತ್ತಾರೆಂಬ ಭರವಸೆ ನನಗಿದೆ.

ಜಿ.ವಿ. ಪ್ರಭಾಕರ್
ಕಾರ್ಯನಿರ್ವಾಹಕ ವ್ಯವಸ್ಥಾಪಕರು
ಸಾಧಕರ ಮಾಲೆ

ಸಂಪಾದಕೀಯ



ಉಲುಚುಕಮ್ಮೆ ಬ್ರಾಹ್ಮಣ ಮಹಾಸಭಾದಿಂದ ಚಾಲನೆಗೊಂಡಿರುವ ಈ ಪುಸ್ತಕಮಾಲೆಗೆ ಎರಡು ಮುಖ್ಯ ಉದ್ದೇಶಗಳಿವೆ. ಮೊದಲನೆಯದು ವಿವಿಧ ರಂಗಗಳಲ್ಲಿ ವಿಶೇಷ ಸಾಧನೆಗಳನ್ನು ಮಾಡಿ ಸಮುದಾಯಕ್ಕೆ ಹೆಮ್ಮೆ ತರುವಂತಹ ಸಾರ್ಥಕ ಜೀವನವನ್ನು ನಡೆಸಿದ ಎಲ್ಲಾ ಮಹನೀಯರನ್ನೂ ಗುರುತಿಸಿ ಈ ಮೂಲಕ ಗೌರವಿಸುವುದು. ಎರಡನೆಯದು ಇಂತಹ ಸಾಧಕರ ಜೀವನ ಸಾಧನೆಗಳು ಮುಂದಿನ ಪೀಳಿಗೆಗಳಿಗೆ ತೋರುದೀಪವಾಗಿ ಅವರಲ್ಲಿ ಸ್ಫೂರ್ತಿ, ಉತ್ಸಾಹ, ಆತ್ಮವಿಶ್ವಾಸಗಳನ್ನು ಹೆಚ್ಚಿಸಲು ಸಾಧ್ಯವಾಗುವಂತಾಗಬೇಕು ಎಂಬುದು. ಈಗ ಮೊದಲಿನ ಕಂತಿನಲ್ಲಿ ಹತ್ತು ಹಿರಿಯ ಸಾಧಕರ ಬಗ್ಗೆ ಕೃತಿಗಳನ್ನು ಹೊರತರಲಾಗುತ್ತಿದೆ. ಮುಂದಿನ ದಿನಗಳಲ್ಲಿ ಹಿರಿಯ-ಕಿರಿಯ ಎಂಬ ಭೇದವೆಣಿಸದೆ ಎಲ್ಲಾ ರಂಗದ ಸಾಧಕರ ಬಗ್ಗೆ ಕನಿಷ್ಠ ಒಂದುನೂರು ಪುಸ್ತಕಗಳನ್ನಾದರೂ ತರಬೇಕೆಂಬ ಆಶಯವಿದೆ. ಈ ದಿಶೆಯಲ್ಲಿ ಈ ಮಾಲೆಯ ಸಂಪಾದಕ ಮಂಡಲಿಯು ಈಗಾಗಲೇ ಗುರುತಿಸಿರುವ ಪಟ್ಟಿ ಆಶಾದಾಯಕವಾಗಿದೆ. ಪ್ರಸ್ತುತ ಮಾಲೆಯ ಪ್ರಥಮ ಪ್ರಯೋಗದ ಈ ಪುಸ್ತಕಗಳಲ್ಲಿ ಇರುವ ಅರೆಕೊರೆಗಳನ್ನು ಮನ್ನಿಸಿ ಹಂಸಕ್ಷೀರ ನ್ಯಾಯದಂತೆ ಇವನ್ನು ಸ್ವೀಕರಿಸಬೇಕೆಂದು ನಮ್ಮ ಓದುಗ ಬಾಂಧವರಲ್ಲಿ ಪ್ರಾರ್ಥನೆ. ಸಲಹೆ, ಸೂಚನೆಗಳಿಗೆ ಸದಾ ಸ್ವಾಗತವಿದೆ.

ಈ ಸಾಧಕರ ಮಾಲೆಯ ಉಪಯೋಗ ಮತ್ತು ಔಚಿತ್ಯ ಉಲುಚುಕಮ್ಮೆ ಸಮುದಾಯಕ್ಕಷ್ಟೇ ಸೀಮಿತವಲ್ಲ. ಈ ಸಾಧಕರೆಲ್ಲಾ ಸರ್ವ ಸಮಾಜದ ಹಿತ, ಅಭಿವೃದ್ಧಿ, ಶ್ರೇಯಸ್ಸುಗಳಿಗಾಗಿ ದುಡಿದವರು. ಹಾಗೂ ತಾವು ಆರಿಸಿಕೊಂಡ ರಂಗದಲ್ಲಿ ಚರಿತ್ರಾರ್ಹ ಸಾಧನೆಗಳನ್ನು ಮಾಡಿರುವವರು. ಹಾಗಾಗಿ ಇವರೆಲ್ಲರ ಜೀವನ ಚರಿತ್ರೆಗಳು ಇಡೀ ಸಮಾಜಕ್ಕೆ ಪ್ರಸ್ತುತ.

ಅಲ್ಲದೆ ಇದಕ್ಕೆ ಇನ್ನೂ ಒಂದು ಆಯಾಮವಿದೆ. ಇತಿಹಾಸಕಾರರು ಮತ್ತು ಸಮಾಜ ವಿಜ್ಞಾನಿಗಳ ಪ್ರಕಾರ ಮಾನವ ಜನಾಂಗದ ನಾಗರೀಕತೆಯ ಉಳಿವು ಮತ್ತು ವಿಕಾಸಕ್ಕೆ ಕೆಲವೇ ಬೆರಳೆಣಿಸುವಷ್ಟು ಮಂದಿ ಶ್ರದ್ಧಾವಂತ ವ್ಯಕ್ತಿಗಳ ಕಾರ್ಯಸಾಧನೆಗಳೇ ಮೂಲಧಾತುಗಳು; ಹಾಗೂ ಈ ರೀತಿಯ ಗುರಿಯನ್ನೂ, ಜನಹಿತಸಾಧನೆಯೇ ಜೀವನದ ಸಾರ್ಥಕ್ಯ ಎಂಬ ಮೌಲ್ಯವನ್ನೂ ಮನದಟ್ಟು ಮಾಡಿಸಿ, ಅವರನ್ನು ಕಾರ್ಯಪ್ರವೃತ್ತರನ್ನಾಗಿ ಮಾಡುವುದು ವಿಶೇಷವಾಗಿ ಸಣ್ಣ ಸಮುದಾಯಗಳು. ಇವುಗಳ ಜೀವನ ಮೌಲ್ಯಗಳು, ಅದಕ್ಕೆ ಪೂರಕವಾದ ಜೀವನ ವಿಧಾನ ಇವೆಲ್ಲಾ ಈ ಸಮುದಾಯಗಳ ವಿಶಿಷ್ಟ ಸಂಸ್ಕಾರವಾಗಿ ಪರಂಪರಾನುಗತವಾಗಿ ಮುಂದುವರಿಯುತ್ತಿರುತ್ತವೆ. ಇಂತಹ ಸಮುದಾಯಗಳು ವಿಶ್ವದ ಎಲ್ಲೆಡೆ ಅಲ್ಲಲ್ಲಿ ಕಂಡುಬರುವುದಾದರೂ, ಭಾರತದಲ್ಲಿ ಇದ್ದ ಇಂತಹ ಒಂದು ಚಿಕ್ಕ ಸಮುದಾಯ ಗುಣಕರ್ಮವಿಭಾಗಶಃ ಗುರುತಿಸಲ್ಪಡುತ್ತಿದ್ದ ಬ್ರಾಹ್ಮಣವರ್ಣ. ಆದರೆ ಕಳೆದ ಎರಡು ಸಾವಿರ ವರ್ಷಗಳಿಂದೀಚೆಗೆ ಕಾರಣಾಂತರಗಳಿಂದ ಈ ಬ್ರಾಹ್ಮಣವರ್ಣವು ಬ್ರಾಹ್ಮಣ ಜಾತಿಯಾಗಿ ಬದಲಾಗಿ

ಮುಂದೆ ಮತ್ತಷ್ಟು ಉಪಪಂಗಡಗಳಾಗಿ ವಿಭಜಿತಗೊಂಡಿದೆ. ಆದರೂ ಈ ಸಣ್ಣಸಮುದಾಯಗಳು ದಯೆ, ದಾನ, ಅಹಿಂಸೆ, ಜ್ಞಾನ, ಲೋಕಸಂಗ್ರಹ ಇತ್ಯಾದಿ ಮೂಲ ಬ್ರಾಹ್ಮಣಮೌಲ್ಯಗಳು ಹಾಗೂ ಅವುಗಳನ್ನು ರೂಢಿಸಿಕೊಳ್ಳಲು ಉಪಯುಕ್ತವಾದ ಸಂಪ್ರದಾಯಗಳನ್ನೂ ಉಳಿಸಿಕೊಂಡು ಬಂದಿವೆ. ಇಂತಹ ಸಂಸ್ಕಾರದಿಂದ ಪ್ರಭಾವಿತರಾದ ಸಾಧಕರ ಜೀವನಚರಿತ್ರೆಗಳು ಭಾರತೀಯ ಸಾಮಾಜಿಕಚರಿತ್ರೆಯ ದಾಖಲೆಗಳೂ ಹೌದು.

ಈ ಮಾಲೆಯ ಮಹತ್ಕಾರ್ಯವನ್ನು ನಡೆಸಿಕೊಡಲು ನನ್ನನ್ನು ಆಹ್ವಾನಿಸಿ ಹಾಗೂ ಇದರ ಸಾಧನೆಗೆ ಎಲ್ಲ ರೀತಿಯ ಸಹಕಾರವನ್ನು ಒದಗಿಸಿರುವ ಉಲುಚುಕಮ್ಮೆ ಬ್ರಾಹ್ಮಣ ಮಹಾಸಭೆಯ ಗೌರವ ಅಧ್ಯಕ್ಷರಾದ ಶ್ರೀ ಅಶ್ವತ್ಥನಾರಾಯಣರಾವ್, ಗೌರವ ಉಪಾಧ್ಯಕ್ಷರಾದ ಶ್ರೀ ಪ್ರಭಾಕರ್, ಉತ್ಸಾಹೀ ಕಾರ್ಯದರ್ಶಿ ಶ್ರೀ ಮಂಜುನಾಥ್ ಹಾಗೂ ಇತರೆ ಎಲ್ಲಾ ಪದಾಧಿಕಾರಿಗಳಿಗೂ ನಾನು ಆಭಾರಿಯಾಗಿದ್ದೇನೆ. ಈ ಮಾಲೆಯ ವಿಚಾರವನ್ನು ಮುಂದಿಟ್ಟು, ಅದರ ಸಾಧನೆಗೆ ಶ್ರಮಿಸಿರುವ ಮಾಲೆಯ ಸಂಚಾಲಕರಾದ ಶ್ರೀ ಟಿ.ಆರ್. ಅನಂತರಾಮು ಅವರಿಗೂ, ಆಸಕ್ತಿ, ಶ್ರದ್ಧೆಯಿಂದ ಸಂಪಾದನಾಕಾರ್ಯದಲ್ಲಿ ಭಾಗಿಗಳಾಗಿರುವ ಸಂಪಾದಕಮಂಡಳಿಯ ಎಲ್ಲಾ ಮಿತ್ರರಿಗೂ ನನ್ನ ಕೃತಜ್ಞತೆಗಳು.

ಈಗ ನಿಮ್ಮ ಕೈಯಲ್ಲಿ ಇರುವ ಕೃತಿ ನಾಡಿನ ಹೆಸರಾಂತ ಚಲನಚಿತ್ರ ನಟರಾದ ಕೆ.ಎಸ್. ಅಶ್ವತ್ಥ್ ಅವರನ್ನು ಕುರಿತದ್ದು. ಇದು ಅವರ ಬಗ್ಗೆ ಪ್ರಕಟವಾಗುತ್ತಿರುವ ಪ್ರಪ್ರಥಮ ಪುಸ್ತಕ. ಇದನ್ನು ಬರೆಯಲು ನಿಷ್ಣಾತ ಲೇಖಕರಾದ ಶ್ರೀ ಎನ್. ಆನಂದ ರಾಮರಾವ್ ಅವರು ಬಹು ಶ್ರಮವಹಿಸಿದ್ದಾರೆ. ಇದರ ತಯಾರಿಗೆ ಮೂಲ ಸಾಮಗ್ರಿಗಳನ್ನು, ಅಶ್ವತ್ಥ್‌ರವರ ಬಗ್ಗೆ ಸುಮಾರು ಕಳೆದ ಐವತ್ತು ವರ್ಷಗಳಿಂದಲೂ ಪ್ರಕಟವಾಗಿರುವ ಅನೇಕ ಪತ್ರಿಕಾ ಲೇಖನ, ವರದಿಗಳಿಂದಲೂ ಹಾಗೂ ಅಶ್ವತ್ಥ್‌ರವರ ಕುಟುಂಬ ಮತ್ತು ಸ್ನೇಹಿತವರ್ಗದವರಿಂದಲೂ ಸಂಗ್ರಹಿಸಿದ್ದಾರೆ. ಇಂತಹ ಶ್ಲಾಘನೀಯಕಾರ್ಯವನ್ನು ಉತ್ತಮವಾಗಿ ಸಾಧಿಸಿರುವ ಶ್ರೀ ಎನ್. ಆನಂದ ರಾಮರಾವ್‌ರವರಿಗೂ, ಹಾಗೂ ಈ ಕಾರ್ಯದಲ್ಲಿ ಅವರೊಡನೆ ಸಹಕರಿಸಿದ ಶ್ರೀ ಎಂ.ಎಸ್. ನಾಗರಾಜರಾವ್ ಮತ್ತು ಇತರರಿಗೂ ಅಭಿನಂದನೆಗಳು. ಈ ಪುಸ್ತಕದ ಕರಡನ್ನು ಓದಿ ಕೆಲವು ಉಪಯುಕ್ತ ಸಲಹೆಗಳನ್ನು ನೀಡಿದ ಶ್ರೀ ಟಿ.ಆರ್. ಅನಂತರಾಮು ಮತ್ತು ಸುರೇಶ ಮೂನ, ಹಾಗೂ ಅಚ್ಚುಕರಡನ್ನು ಪರಿಶೀಲಿಸುವಲ್ಲಿ ಸಹಕರಿಸಿದ ಮಿತ್ರರಾದ ನೆ.ಲ. ರಾಮಮೂರ್ತಿ ಮತ್ತು 'ಪತ್ರ ತ್ರಿವಿಕ್ರಮ' ಬಿ.ಎಸ್. ರಮೇಶ್ ಅವರಿಗೂ ನನ್ನ ಕೃತಜ್ಞತೆಗಳು.

ಈ ಬರಹವನ್ನು ಪುಸ್ತಕರೂಪದಲ್ಲಿ ತರಲು ನಮ್ಮ ಕಡೆಯಿಂದ ಆಗಾಗ್ಗೆ ಅನೇಕ ತೊಂದರೆಗಳು ಉಂಟಾಗುತ್ತಿದ್ದರೂ, ನಗುಮುಖದಿಂದ ಸಹಕರಿಸಿ, ಅಚ್ಚುರೂಪಕ್ಕೆ ಸುಂದರವಾಗಿ ಸಿದ್ಧಪಡಿಸಿದ ಚಿ.ಸೌ. ಆಶಾರವರಿಗೂ ಹಾಗೂ ಇದನ್ನು ಮುದ್ದಾಗಿ ಮುದ್ರಿಸಿದ ಪರಿಶ್ರೀ ಪ್ರಿಂಟರ್ಸ್‌ನ ಮಾಲೀಕರಾದ ಆರ್. ಶ್ರೀನಾಥ್ ರವರಿಗೂ ನನ್ನ ಅಭಿನಂದನೆಗಳು.

ಎಸ್. ನಾಗರಾಜು
ಪ್ರಧಾನ ಸಂಪಾದಕ
ಉಲುಚುಕಮ್ಮೆ ಸಾಧಕರ ಮಾಲೆ

ಲೇಖಕರ ಮಾತು

ಉಲುಚುಕಮ್ಮೆ ಬ್ರಾಹ್ಮಣ ಮಹಾಸಭೆಯು ಕಳೆದ ಅರವತ್ತೈದು ವರ್ಷಗಳಿಂದಲೂ ತನ್ನ ಸಮಾಜ ಬಾಂಧವರ ಏಳಿಗೆಗಾಗಿ ಹಲವಾರು ರಚನಾತ್ಮಕ ಕಾರ್ಯಗಳನ್ನು ಕೈಗೊಂಡು ತನ್ನದೆ ಆದ ರೀತಿಯಲ್ಲಿ ತನ್ನ ಅಳಿಲು ಸೇವೆಯನ್ನು ಸಲ್ಲಿಸುತ್ತಾ ಬಂದಿದೆ. ಈ ನಮ್ಮ ಸಮಾಜದ ಹಲವಾರು ಪ್ರತಿಭಾನ್ವಿತ ವ್ಯಕ್ತಿಗಳು ಕಲೆ, ಸಾಹಿತ್ಯ, ನಾಡು ನುಡಿಯ ಏಳಿಗೆಯಲ್ಲಿ ತಮ್ಮ ಕಾಣಿಕೆಯನ್ನು ಸಲ್ಲಿಸುತ್ತಾ ಬಂದಿದ್ದಾರೆ. ಅಂತಹ ಹಲವಾರು ಹಿರಿಯ ಮಹನೀಯರ ಸಿದ್ಧಿ - ಸಾಧನೆಗಳನ್ನು ಸ್ಮರಿಸಿಕೊಂಡು, ಅವುಗಳನ್ನು, ನಮ್ಮ ಸಮಾಜದ ಬಂಧುಗಳ, ಅದರಲ್ಲೂ ಇಂದಿನ ತರುಣ ಜನಾಂಗಕ್ಕೆ, ಪರಿಚಯಿಸಬೇಕೆನ್ನುವ ಸದುದ್ದೇಶದಿಂದ ಉಲುಚುಕಮ್ಮೆ ಸಾಧಕರ ಪುಸ್ತಕಮಾಲೆಯನ್ನು ಪ್ರಕಟಿಸುವ ಸದಾಶಯದಿಂದ ಪ್ರಥಮ ಹಂತದಲ್ಲಿ ಹತ್ತು ಮಹನೀಯರ ಬಗೆಗೆ ಪುಸ್ತಕಗಳನ್ನು ಪ್ರಕಟಿಸುವ ಯೋಜನೆಯನ್ನು ಕೈಗೊಂಡಿದೆ.

ಶ್ರೀ ಕೆ.ಎಸ್. ಅಶ್ವತ್ಥ್‌ರವರು ಅಂತಹ ಮಹನೀಯರಲ್ಲಿ ಒಬ್ಬರು. ಅವರು ಕನ್ನಡ ಚಿತ್ರರಂಗದಲ್ಲಿ ಐದು ದಶಕಗಳಿಗೂ ಮೀರಿ ತಮ್ಮ ಅದ್ಭುತ ನಟನೆಯಿಂದ, ಪೋಷಕ ನಟರಾಗಿ, ಚಿತ್ರರಸಿಕರ ಮನದಲ್ಲಿ ಶಾಶ್ವತ ಸ್ಥಾನವನ್ನು ಗಳಿಸಿಕೊಂಡವರಾಗಿದ್ದಾರೆ.

ಪೌರಾಣಿಕ, ಜಾನಪದ, ಐತಿಹಾಸಿಕ, ಸಾಮಾಜಿಕ ಹೀಗೆ ಯಾವುದೇ ಪ್ರಾಕಾರದ ಚಿತ್ರಗಳಲ್ಲಾಗಲೀ ತಮ್ಮ ಶ್ರೇಷ್ಠ ಅಭಿನಯದಿಂದ ಆ ಚಿತ್ರದ ಜನಪ್ರಿಯತೆಗೆ ಕಾರಣರಾಗುತ್ತಿದ್ದರು. ಶ್ರದ್ಧೆ, ಶಿಸ್ತು, ವಿನಯವಂತಿಕೆ, ಸಮಯ ಪರಿಪಾಲನೆಗಳಲ್ಲಿ ಅಶ್ವತ್ಥ್‌ರವರು ಎತ್ತಿದ ಕೈ. ಅಂತಹ ಸದ್ಗುಣಗಳ ಖಣಿಯಾಗಿದ್ದ ಅವರಿಗೆ ಅವರೇ ಸಾಟಿ. ಅವರನ್ನು ಮೀರಿಸುವವರು ಯಾರೂ ಇರಲಿಲ್ಲವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಸರಳರಲ್ಲಿ ಸರಳರು ಅಶ್ವತ್ಥ್‌ರವರು. ಮೈಸೂರಿನಲ್ಲಿದ್ದಾಗ ತಮ್ಮ ಸಂಚಾರಕ್ಕೆ ಟಾಂಗಾವನ್ನು ಉಪಯೋಗಿಸುತ್ತಿದ್ದರೆಂದರೆ ಅವರ ಸರಳತನಕ್ಕೆ ಬೇರೆ ನಿದರ್ಶನ ಬೇಕೇ?

ಶಿಸ್ತಿನ ಸಿಪಾಯಿಯಾಗಿದ್ದ ಅವರು ಚಿತ್ರ ನಿರ್ಮಾಪಕರಿಂದ ಯಾವತ್ತೂ ತಮಗೆ ಬರಬೇಕಾಗಿದ್ದುದಕ್ಕಿಂತ ಹೆಚ್ಚಿಗೆ ಸಂಭಾವನೆಯನ್ನು ಪಡೆಯುತ್ತಿರಲಿಲ್ಲ. ಅಕಸ್ಮಾತ್ ನಿರ್ಮಾಪಕರೇನಾದರೂ ಹೆಚ್ಚಿಗೆ ಕೊಟ್ಟಿದ್ದರೆ ಅದನ್ನು ತಕ್ಷಣವೇ ವಾಪಸು ಕೊಟ್ಟುಬಿಡುವ ನಿಃಸ್ಪೃಹತೆಯೂ ಅವರಲ್ಲಿ ಮನೆ ಮಾಡಿತ್ತು. ಇಂತಹ ಮಹಾ ಪುರುಷರ ಬಗ್ಗೆ ಉಲುಚುಕಮ್ಮೆ ಸಾಧಕರ ಪುಸ್ತಕಮಾಲೆಯಲ್ಲಿ ಪರಿಚಯಾತ್ಮಕ ಕೃತಿಯನ್ನು ಬರೆಯಲು ನನಗೆ ಮಹಾಸಭೆಯವರು ಅವಕಾಶ ಮಾಡಿಕೊಟ್ಟಿದ್ದಾರೆ. ಅದಕ್ಕಾಗಿ ಮಹಾಸಭೆಗೆ ನನ್ನ ಧನ್ಯವಾದಗಳು.

ಈ ಕೃತಿ ರಚನೆಯ ಮಾಹಿತಿಯ ಸಂಗ್ರಹಣೆಗಾಗಿ ದಿ. ಅಶ್ವತ್ಥ್‌ರವರ ಮನೆಯವರನ್ನು ಸಂಪರ್ಕಿಸಿ ಮಾಹಿತಿಯನ್ನು ಪಡೆಯಬೇಕಾಗಿ ಬಂದಾಗ ನನಗೆ ಈ ನಿಟ್ಟಿನಲ್ಲಿ ನೆರವು ನೀಡಿದವರು ಮಹಾಸಭೆಯ ಕಾರ್ಯಕಾರಿ ಮಂಡಲಿಯ ಸದಸ್ಯರು ಹಾಗೂ ಅಶ್ವತ್ಥ್‌ರವರ ನಿಕಟ ಸಂಬಂಧಿಗಳು

ಆದ ಶ್ರೀ ಎಮ್. ಎಸ್. ನಾಗರಾಜರಾವ್ ಅವರು. ಅಶ್ವತ್ಥ್‌ರವರ ಕುಟುಂಬದವರನ್ನು ಸಂಪರ್ಕಿಸಿ ನಮ್ಮ ಭೇಟಿಗೆ ಸೂಕ್ತ ವ್ಯವಸ್ಥೆಯನ್ನು ಮಾಡಿದರು. ಅದರಂತೆ ದಿನಾಂಕ ೧೦.೦೨.೨೦೧೦ರ ಬುಧವಾರದಂದು ಶ್ರೀ ನಾಗರಾಜರಾವ್ ಮತ್ತು ಮಹಾಸಭೆಯ ಮತ್ತೊಬ್ಬ ಕಾರ್ಯಕಾರಿ ಮಂಡಲಿಯ ಸದಸ್ಯರಾದ ಶ್ರೀ ಆರ್. ಗಣೇಶ ಪ್ರಸಾದ್‌ರವರೊಂದಿಗೆ ಮೈಸೂರಿಗೆ ತೆರಳಿ ಅಶ್ವತ್ಥ್‌ರವರ ನಿವಾಸ “ಕಲಾಶ್ರೀ” ಗೆ ಭೇಟಿ ನೀಡಿದೆವು. ಮೈಸೂರಿನಲ್ಲಿ ವಾಸವಿರುವ ಶ್ರೀ ನಾಗರಾಜರಾವ್ ಅವರ ಸಹೋದರರಾದ ಶ್ರೀ ಎಮ್. ಎಸ್. ಲಕ್ಷ್ಮೀ ನಾರಾಯಣರಾವ್ ರವರೂ ಸಹ ನಮ್ಮೊಂದಿಗೆ ಬಂದು ತಮ್ಮ ಸಹಕಾರ ಹಸ್ತವನ್ನು ನೀಡಿದರು.

“ಕಲಾಶ್ರೀ”ಗೆ ನಾವು ಹೋದಾಗ ಅಂದಿಗೆ ಸರಿಯಾಗಿ ಅಶ್ವತ್ಥ್‌ರವರು ನಿಧನರಾಗಿ ೨೫ ದಿನಗಳು ಸಂದಿದ್ದವು. ಅವರ ಅಗಲುವಿಕೆಯ ವೇದನೆ ಅವರ ಮನೆಯವರಿಂದ ಇನ್ನೂ ದೂರವಾಗಿರಲಿಲ್ಲ. ಅಂತಹ ಸಂದರ್ಭದಲ್ಲಿಯೂ ಸಹ ಅಶ್ವತ್ಥ್‌ರವರ ಪುತ್ರ ಶ್ರೀ ಶಂಕರ್ ಅಶ್ವತ್ಥ್ ಮತ್ತು ಪುತ್ರಿ ಶ್ರಿಮತಿ ವಿಜಯರವರು ಮಹಾ ಸಭೆಯ ಮೇಲಿನ ವಿಶ್ವಾಸದಿಂದ ತಮ್ಮ ನೋವನ್ನೂ ಮರೆತು, ತಮ್ಮ ತಂದೆಯವರ ಬಗ್ಗೆ ಸಾಕಷ್ಟು ವಿವರಗಳನ್ನು, ವಿಚಾರಗಳನ್ನು ತಿಳಿಸಿದರು. ಮಧ್ಯೆ ಮಧ್ಯೆ ತಮಗಾಗುತ್ತಿದ್ದ ಸಂಕಟ, ದುಃಖ, ಉಮ್ಮಳಿಸಿ ಬರುತ್ತಿದ್ದರೂ ತಡೆದುಕೊಂಡು ತಂದೆಯವರ ಜೀವನದ ಅನೇಕ ಘಟನೆಗಳನ್ನು ವಿವರಿಸಿದರು. ಪ್ರಾಯಶಃ ಅವರ ನೆರವು ಸಹಕಾರ ಇಲ್ಲದಿದ್ದಲ್ಲಿ ಈ ಪುಸ್ತಕದ ಪರಿಪೂರ್ಣತೆ ಸಾಧ್ಯವಾಗುತ್ತಿರಲಿಲ್ಲ.

ಅಶ್ವತ್ಥ್‌ರವರನ್ನು ಕಲಾರಂಗಕ್ಕೆ ಪರಿಚಯಿಸಿದ ಹಾಗು ಅಶ್ವತ್ಥ್‌ರವರು ತಮ್ಮ ಗುರುಗಳೆಂದು ಗೌರವಭಾವನೆ ಹೊಂದಿದ್ದ ಶ್ರೀ ಎನ್.ಎಸ್. ವಾಮನ್ ಅವರ ಪುತ್ರ ಮಡಿಕೇರಿ ಆಕಾಶವಾಣಿಯ ಕಾರ್ಯಕ್ರಮ ನಿರ್ವಾಹಕರಾಗಿರುವ ಶ್ರೀ ಎನ್.ವಿ. ರಮೇಶ್‌ರವರು ತಮ್ಮ ತಂದೆ ಹಾಗು ಅಶ್ವತ್ಥ್‌ರ ಬಾಂಧವ್ಯದ ಬಗ್ಗೆ ಲೇಖನವೊಂದನ್ನು ಬರೆದುಕೊಟ್ಟಿರುವುದೇ ಅಲ್ಲದೆ ಕೆಲವು ಅಪರೂಪದ ಚಿತ್ರಗಳನ್ನೂ ಒದಗಿಸಿ ಪುಸ್ತಕದ ಮೌಲ್ಯವನ್ನು ಹೆಚ್ಚಿಸಿದ್ದಾರೆ. ಅವರಿಗೆ ನನ್ನ ವಂದನೆಗಳು. ಅಶ್ವತ್ಥ್‌ರ ಬಗೆಗೆ ಸಾಕಷ್ಟು ಮಾಹಿತಿಯನ್ನು ನೀಡಿ ಸಹಕರಿಸಿದ ನನ್ನ ಆತ್ಮೀಯ ಗೆಳೆಯ ಶ್ರೀ ಎಂ.ಎ. ವೆಂಕಟೇಶ್‌ರಿಗೆ, ಮೈಸೂರಿಗೆ ಹೋದಾಗ ನಮ್ಮೊಂದಿಗೆ ಬಂದು ಎಲ್ಲ ರೀತಿಯ ಸಹಕಾರವನ್ನು ನೀಡಿದ ಶ್ರೀ ಎಮ್. ಎಸ್. ನಾಗರಾಜರಾವ್, ಶ್ರೀ ಎಮ್. ಎಸ್. ಲಕ್ಷ್ಮೀ ನಾರಾಯಣರಾವ್ ಮತ್ತು ಶ್ರೀ ಆರ್. ಗಣೇಶ ಪ್ರಸಾದ್‌ರವರುಗಳಿಗೆ, ನನ್ನ ಬರವಣಿಗೆಯಲ್ಲಿ ಸದಾ ನನಗೆ ನೆರವನ್ನೀಯುತ್ತಿರುವ ನನ್ನ ಮಡದಿ ಉಷಾಳಿಗೆ ನಾನು ಆಭಾರಿ.

ಈ ಪುಸ್ತಕ ರಚನೆಗೆ ಅವಕಾಶ ಮಾಡಿ ಕೊಟ್ಟ ಮಹಾಸಭೆಯ ಎಲ್ಲ ಅಧಿಕಾರವರ್ಗದವರಿಗೂ ಮತ್ತು ಸಾಧಕರಮಾಲೆಯ ಸಂಪಾದಕ ಮಂಡಳಿಯ ಎಲ್ಲ ಸದಸ್ಯರಿಗೂ ನನ್ನ ವಂದನೆಗಳು. ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿಕೊಟ್ಟ ಪರಿಶ್ರೀ ಪ್ರಿಂಟರ್ಸ್ ಮುದ್ರಣಾಲಯದವರಿಗೂ ಸಹ ನನ್ನ ವಂದನೆಗಳೂ.

ಎನ್. ಆನಂದ ರಾಮರಾವ್

ನಟರತ್ನ

ಕೆ.ಎಸ್. ಅಶ್ವತ್ಥ್

ಪೀಠಿಕೆ

೧೯೩೪ - ಕನ್ನಡ ಚಿತ್ರರಂಗದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕಾದ ವರ್ಷ. ಆ ವರ್ಷ ಕನ್ನಡದ ಪ್ರಥಮ ವಾಕ್ಚಿತ್ರ "ಸತೀ ಸುಲೋಚನಾ" ತೆರೆ ಕಂಡಿತು. ಅಂದು ಆರಂಭಗೊಂಡ ಕನ್ನಡ ಚಿತ್ರನಿರ್ಮಾಣ ಮಂದಗತಿಯಲ್ಲಿ ಸಾಗುತ್ತಾ ಬಂದು ವರ್ಷಕ್ಕೆ ಒಂದೋ ಎರಡು ಚಿತ್ರಗಳು ತೆರೆಕಾಣುತ್ತಿದ್ದವು. ಮೊದಲ ೨೫ ವರ್ಷಗಳಲ್ಲಿ ತಯಾರಾದ ಚಿತ್ರಗಳ ಸಂಖ್ಯೆಯನ್ನು ಗಮನಿಸಿದರೆ ಅದು ೧೦೦ನ್ನೂ ಮೀರಿರಲಿಲ್ಲವೆಂದು ಹೇಳಬಹುದು.

ಆದರೆ ಇದೇ ಅವಧಿಯಲ್ಲಿ ಅನೇಕ ತರುಣ ಕಲಾವಿದರು ಕನ್ನಡ ಚಿತ್ರರಂಗಕ್ಕೆ ಪ್ರವೇಶ ಮಾಡಿ ತಮ್ಮ ಪ್ರತಿಭೆಯನ್ನು, ನಟನಾ ಸಾಮರ್ಥ್ಯವನ್ನು ಪ್ರದರ್ಶಿಸಲಾರಂಭಿಸಿದರು ರಾಜಕುಮಾರ್ (೧೯೫೪) ಕಲ್ಯಾಣಕುಮಾರ್ (೧೯೫೪) ಉದಯಕುಮಾರ್ (೧೯೫೬), ನಾಯಕ ನಟರಾಗಿ ಚಿತ್ರರಂಗಕ್ಕೆ ಪ್ರವೇಶಿಸಿದ ಪ್ರಮುಖರಲ್ಲಿ ಹಲವರು. ಪೌರಾಣಿಕ ಭಕ್ತಿ ಪ್ರಧಾನ ಪಾತ್ರಗಳಲ್ಲಿ ರಾಜಕುಮಾರ್‌ರವರು ಜನಪ್ರಿಯರಾದರೆ, ಹಾಸ್ಯ ಮತ್ತು ಸಾಮಾಜಿಕ ಚಿತ್ರಗಳಲ್ಲಿ ಕಲ್ಯಾಣಕುಮಾರ್‌ರವರು ಹೆಸರು ಗಳಿಸಿದರು. ಸಾಮಾಜಿಕ ಚಿತ್ರಗಳಿಂದಲೇ ಚಿತ್ರರಂಗಕ್ಕೆ ಕಾಲಿರಿಸಿದ ಉದಯಕುಮಾರ್‌ರವರು ಎಲ್ಲ ಬಗೆಯ ಪಾತ್ರಗಳಲ್ಲೂ ಅಭಿನಯಿಸಲಾರಂಭಿಸಿದರು.

ಇದೇ ಅವಧಿಯಲ್ಲಿಯೇ, ಅಂದರೆ ೧೯೫೫ರಲ್ಲಿ, ನಾಯಕನಟರಾಗಿ ಚಿತ್ರರಂಗಕ್ಕೆ ಪ್ರವೇಶಿಸಿದವರು ಕೆ.ಎಸ್.ಅಶ್ವತ್ಥ್‌ರವರು. ಆದರೆ ಅವರು ನಾಯಕ ನಟರಾಗಿ ಉಳಿಯದೆ ಪೋಷಕ ನಟರಾಗಿ ಚಿತ್ರರಂಗದಲ್ಲಿ ಐವತ್ತು ವರ್ಷಗಳಿಗೂ ಮೀರಿ ಯಾವ ನಾಯಕ ನಟನಿಗೂ ಕಡಿಮೆಯಿಲ್ಲದಂತೆ ಸರಿಸಾಟಿಯಾಗಿ ವಿಜೃಂಭಿಸಿದ್ದು ಮಾತ್ರ ಒಂದು ಐತಿಹಾಸಕ ದಾಖಲೆಯೇ ಸರಿ. ತಮ್ಮ ಈ ಸುಧೀರ್ಘ ಅವಧಿಯಲ್ಲಿ ವಿಭಿನ್ನ ಬಗೆಯ ಪಾತ್ರಗಳಲ್ಲಿ, ಪ್ರೇಕ್ಷಕರ ಮನಸೂರೆಗೊಂಡ ಅಶ್ವತ್ಥ್‌ರವರು ಕನ್ನಡಿಗರ ಮನೆ ಮನಗಳಲ್ಲಿ, ಹೃದಯಗಳಲ್ಲಿ ನೆಲೆಯೂರಿದ ಅಸಮಾನ್ಯ ನಟ. ಪೋಷಕಪಾತ್ರಗಳಿಗೇ ವಿಶಿಷ್ಟವಾದ ಘನತೆ ಗೌರವಗಳನ್ನು ತಂದುಕೊಟ್ಟ ಮಹಾನ್ ನಟ.

ಪಾತ್ರ ಯಾವುದೇ ಇರಲಿ, ದೊಡ್ಡದಿರಲಿ-ಸಣ್ಣದಿರಲಿ ಆ ಪಾತ್ರದ ಮಹತ್ತಿಗೆ ಭಂಗ ತಾರದಂತೆ ಪಾತ್ರದ ಒಳಹೊಕ್ಕು ಪಾತ್ರಕ್ಕೆ ಜೀವ ತುಂಬುತ್ತಿದ್ದ "ನಟರತ್ನ" ಅವರು. ಹಲವಾರು

ರಾಜ್ಯಪ್ರಶಸ್ತಿ, ರಾಷ್ಟ್ರಪ್ರಶಸ್ತಿಗಳನ್ನು ತಮ್ಮದಾಗಿರಿಸಿಕೊಂಡಿದ್ದ ಅಶ್ವತ್ಥ್‌ರವರು ನಟ ಶ್ರೇಷ್ಠರು. ಅಷ್ಟೇ ಅಲ್ಲ ವಿಶ್ವವಿದ್ಯಾಲಯದಿಂದ ತಮ್ಮ ನಟನಾ ಸಾಮರ್ಥ್ಯಕ್ಕೆ ಡಾಕ್ಟರೇಟ್ ಪಡೆದ ಏಕೈಕ ಪೋಷಕನಟರೆಂಬ ಹೆಗ್ಗಳಿಕೆಯನ್ನೂ ಪಡೆದಿದ್ದ ಖ್ಯಾತಿ ಅವರದಾಗಿತ್ತು.

ಎಂಟು ದಶಕಗಳ ಕನ್ನಡ ಚಿತ್ರರಂಗದ ಇತಿಹಾಸದಲ್ಲಿ ಮುಕ್ಕಾಲು ಅವಧಿಯನ್ನು ಆವರಿಸಿದ ಇಂತಹ ಮಹಾನ್ ವ್ಯಕ್ತಿ, ಕನ್ನಡ ಚಿತ್ರರಂಗದ ಎಲ್ಲರಿಂದಲೂ "ಮರ್ಯಾದಾ ಪುರುಷೋತ್ತಮ" ನೆಂದು ಗುರುತಿಸಿಕೊಂಡಿದ್ದರು. ಇಂತಹ ಮಹಾನ್ ವ್ಯಕ್ತಿ ನಮ್ಮ ಉಲುಚುಕಮ್ಮೆ ಜನಾಂಗದವರೆಂಬುದು ಆ ಸಮುದಾಯಕ್ಕೇ ಸಲ್ಲತಕ್ಕ ಗೌರವವೂ ಹೌದು, ಹೆಮ್ಮೆಯೂ ಹೌದು.

ಬಾಲ್ಯ ಮತ್ತು ವಿದ್ಯಾಭ್ಯಾಸ

ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲೂಕಿನ ತರಣ್ಯ ಗ್ರಾಮ. ಅದರ ಹತ್ತಿರ ಮಳಲಿ ಎನ್ನುವ ಗ್ರಾಮಕ್ಕೆ ಸಮೀಪದಲ್ಲಿ ಇರುವುದೇ ಕರಗನಹಳ್ಳಿ. ಆ ಗ್ರಾಮದ ಪುರೋಹಿತರಾಗಿದ್ದವರು ಶ್ರೀಯುತ ಸುಬ್ಬರಾಯಪ್ಪನವರು. ಅವರೇ ಅಶ್ವತ್ಥ್‌ರವರ ತಂದೆ. ತಾಯಿ ಶ್ರೀಮತಿ ಸಾಕಮ್ಮ.

ಸುಬ್ಬರಾಯಪ್ಪನವರು ಆಸ್ತಿವಂತರೇನೂ ಅಲ್ಲ. ಅವರಿಗಿದ್ದುದು ಅಂಗೈ ಅಗಲದ ಜಮೀನು ಮಾತ್ರ. ಅದರಿಂದ ಯಾವುದೇ ಉತ್ಪತ್ತಿ ಇರಲಿಲ್ಲ. ಕರಗನ ಹಳ್ಳಿ ಒಂದು ಸಣ್ಣ ಹಳ್ಳಿ. ಅಲ್ಲಿ ಪೌರೋಹಿತ್ಯದಿಂದ ಮಾಡಿಕೊಂಡಿದ್ದವರು. ಅಲ್ಲಿಯ ರೈತಾಪಿ ಜನ, ಇವರು ಮಾಡಿಸುತ್ತಿದ್ದ ಪೂಜೆ ಪುನಸ್ಕಾರಗಳಿಗೆ ಕೊಡುತ್ತಿದ್ದ ಅಲ್ಪ ಸ್ವಲ್ಪ ಸಂಭಾವನೆಯಿಂದಲೇ ಇವರ ಜೀವನ ಸಾಗಬೇಕಾಗುತ್ತಿತ್ತು.

ವರ್ಷಕ್ಕೊಮ್ಮೆ ಬರುವ ಗೌರಿ ಗಣೇಶನ ಹಬ್ಬದಲ್ಲಿ ಮಾತ್ರ ಸುಬ್ಬರಾಯಪ್ಪನವರಿಗೆ ಬೇಡಿಕೆ ಹೆಚ್ಚು. ಸುತ್ತಮುತ್ತಲಿದ್ದ ಎಲ್ಲ ಹಳ್ಳಿಗಳಿಗೂ ಇವರೊಬ್ಬರೇ ಪೂಜೆ ಮಾಡಿಸಲು ಆಗುತ್ತಿರಲಿಲ್ಲ. ಹಾಗಾಗಿ ಹಿರಿಯ ಮಗನೂ ಅಂತಹ ಸಂದರ್ಭದಲ್ಲಿ ಕೆಲವು ಕಡೆ ಹೋಗಿ ಪೂಜೆ ಮಾಡಿಸಿ ಬರುತ್ತಿದ್ದರು. ಅಶ್ವತ್ಥ್‌ರವರು ಆ ಸಮಯದಲ್ಲಿ ಊರಿಗೆ ಬಂದಿದ್ದರೆ ಅವರನ್ನೂ ಪೂಜೆ ಮಾಡಿಸಲು ಕಳಿಸುತ್ತಿದ್ದರು. ತಮಗೆ ಗೊತ್ತಿದ್ದಂತಹ ಕೆಲವು ಮಂತ್ರಗಳನ್ನು ಹೇಳಿ ಪೂಜೆ ಮಾಡಿಸಿ ಬರುತ್ತಿದ್ದರು

ಶ್ರೀಯುತ ಸುಬ್ಬರಾಯಪ್ಪ ದಂಪತಿಗಳಿಗೆ ಒಟ್ಟು ಆರು ಜನ ಮಕ್ಕಳು; ನಾಲ್ಕು ಹೆಣ್ಣು, ಎರಡು ಗಂಡು. ಕೊನೆಯ ಮಗನೇ ಅಶ್ವತ್ಥ್. ಅಶ್ವತ್ಥ್‌ರವರು ಹುಟ್ಟುವ ಮುಂಚೆ ಅವರ ಒಬ್ಬ ಅಕ್ಕ ತೀರಿಕೊಂಡಿದ್ದರು. ಮನೆಗೆ ಬೆಳಕಾಗಿದ್ದ ಒಬ್ಬನೆ ಗಂಡುಮಗನ ಜೊತೆಗೆ ಮತ್ತೊಬ್ಬ ಗಂಡುಮಗನಿರಲಿ ಎಂಬ ಆಸೆ ಸುಬ್ಬರಾಯಪ್ಪ ದಂಪತಿಗಳಿಗೆ. ಹಾಗಾಗಿ ಹೊಕ್ಕಿದ್ದು ದೇವರ ಮೊರೆ. ಹರಕೆ ಪೂಜೆಗಳಲ್ಲಿ ಮಗ್ನರಾಗಿದ್ದ ದಂಪತಿಗಳು ಅಶ್ವತ್ಥ ವೃಕ್ಷಕ್ಕೆ ಮತ್ತು ಬೇವಿನ ಮರಕ್ಕೆ

ಲಗ್ನವನ್ನೂ ಮಾಡಿಸಿದರು - ತಮ್ಮ ಮನದ ಬಯಕೆಯ ಈಡೇರಿಕೆಗಾಗಿ, ಮತ್ತೊಂದು ಗಂಡು ಸಂತಾನವನ್ನು ಪಡೆಯಲಿಕ್ಕಾಗಿ.

ಇವರ ಪೂಜೆ ಪುನಸ್ಕಾರಗಳಿಗೆ ದೇವರು ಒಲಿದನೋ ಎಂಬಂತೆ ದಿನಾಂಕ ೨೫ ಮಾರ್ಚ್, ೧೯೨೫ರಂದು ಗಂಡು ಸಂತಾನ ಪ್ರಾಪ್ತಿಯಾಯಿತು. ಅಶ್ವತ್ಥ ಪೂಜೆಯನ್ನು ಮಾಡಿದ್ದರ ಫಲವಾಗಿ ಜನಿಸಿದ ಮಗುವಿಗೆ ಅಶ್ವತ್ಥನಾರಾಯಣನೆಂದು ನಾಮಕರಣವೂ ಆಯಿತು.

ಅಶ್ವತ್ಥ್‌ರವರದು ವಿಶ್ವಾಮಿತ್ರ ಗೋತ್ರ, ಜನನ ಕನ್ಯಾ ರಾಶಿ, ಚಿತ್ತಾ ನಕ್ಷತ್ರದಲ್ಲಿ. ಬಯಸಿ ಬಯಸಿ ಬೇಡಿಕೊಂಡಿದ್ದಕ್ಕೆ ದೇವರು ಮಗನನ್ನೇನೋ ಕರುಣಿಸಿದ. ದಂಪತಿಗಳಿಗೆ ಸಂತೋಷವೂ ಆಯಿತು. ಆದರೇನು? ಆ ಸಂತೋಷ ಬಹಳ ಕಾಲವಿರದಂತಾಯಿತು. ಅಶ್ವತ್ಥ ನಾರಾಯಣ ಹುಟ್ಟಿದ ಕೆಲವೇ ದಿನಗಳಲ್ಲಿ ತಾಯಿಯನ್ನು ಕಳೆದುಕೊಳ್ಳಬೇಕಾಗಿ ಬಂತು. ತಾಯಿ ಎಳೆ ಮಗುವನ್ನು ಅನಾಥನನ್ನಾಗಿ ಮಾಡಿ ಕಣ್ಣು ಮುಚ್ಚಿದರು.

ತಾಯಿಯನ್ನು ಕಳೆದುಕೊಂಡ ತಬ್ಬಲಿ ಮಗುವಿಗೆ ತಾಯಿಯ ಮಮತೆಯನ್ನು ತೋರಿಸಿದವರು ಸೋದರತ್ತೆ ತಿಪ್ಪಮ್ಮ. ಮಕ್ಕಳ ಭಾಗ್ಯ ಹೊಂದಿಲ್ಲದ ಆಕೆ ತಾಯಿಯಿಲ್ಲದ ಮಗುವನ್ನು ತನ್ನದೇ ಮಗುವೆಂದು ಭಾವಿಸಿ ಆರೈಕೆ ಮಾಡಿದರು. ತಾಯಿ ಪ್ರೀತಿಯಿಂದ ವಂಚಿತನಾದ ಮಗುವಿಗೆ ತನ್ನ ಪ್ರೀತಿಯನ್ನೆಲ್ಲ ಧಾರೆ ಎರೆದರು.

ತಿಪ್ಪಮ್ಮನವರೇನೂ ಶ್ರೀಮಂತರಾಗಿರಲಿಲ್ಲ. ಗಂಡನನ್ನು ಕಳೆದುಕೊಂಡಿದ್ದು, ಶಾಲಾ ಶಿಕ್ಷಕಿಯಾಗಿ ಆಗಿನ ಕಾಲದಲ್ಲಿ ಬರುತ್ತಿದ್ದ ಅಲ್ಪ ಸಂಬಳದಲ್ಲಿಯೇ ಜೀವನ ನಿರ್ವಹಣೆ ಮಾಡುತ್ತಿದ್ದರು. ಈಗ ಜೊತೆಗೆ ಸಣ್ಣ ಮಗುವಿನ ಜವಾಬ್ದಾರಿ ಬೇರೆ. ತನಗೆ ಸಿಗುತ್ತಿದ್ದ ವರಮಾನದಲ್ಲಿಯೇ ಮಗುವಿನ ಆರೈಕೆಯನ್ನೂ ಮಾಡಿಕೊಂಡು ಸಂಸಾರದ ಖರ್ಚನ್ನೂ ಹೊಂದಿಸಿಕೊಳ್ಳುತ್ತಿದ್ದರು.

ಬಾಲಕ ಅಶ್ವತ್ಥನಾರಾಯಣ ಸೋದರತ್ತೆಯಿಂದ ಮಾತೃವಾತ್ಸಲ್ಯವನ್ನು ಪಡೆದುದೇ ಅಲ್ಲದೆ ಅವರಿಂದ ಶಿಸ್ತಿನ ಪಾಠವನ್ನೂ ಕಲಿತರು. ಅವರು ಶಾಲಾ ಶಿಕ್ಷಕಿಯಾಗಿದ್ದುದ್ದರಿಂದ ಮಕ್ಕಳ ವಿಚಾರದಲ್ಲಿ ಪಾಠದೊಂದಿಗೆ ಶಿಸ್ತನ್ನೂ ಸಹ ರೂಢಿಸುತ್ತಿದ್ದರು. ಹುಡುಗುತನದ ಆಟಗಳಿಗೆ ಅಡ್ಡಿ ಪಡಿಸದೆ, ಓದಿಗೆ ಧಕ್ಕೆ ಬರದಂತೆ, ಪ್ರಾಮುಖ್ಯವನ್ನೂ ಕೊಟ್ಟು ಊಟ ತಿಂಡಿಗಳಿಗೆ ಕೊರತೆಯಾಗದಂತೆ ಸೋದರಳಿಯನನ್ನು ಚೆನ್ನಾಗಿ ಸಾಕಿ ಸಲಹಿದರು. “ಸುಳ್ಳು ಹೇಳಬಾರದು, ಸತ್ಯವನ್ನೇ ನುಡಿಯಬೇಕು” ಎಂಬ ನೀತಿಯನ್ನು ಬಾಲ್ಯದಲ್ಲಿಯೇ ಮನದಟ್ಟು ಮಾಡಿಸಿದರು.

ದಳವಾಯಿ ಶಾಲೆ, ಬನುಮಯ್ಯ ಮತ್ತು ಮಹಾರಾಜ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ಅವರು ಕಲಿತಿದ್ದು ಇಂಟೆರ್‌ಮೀಡಿಯಟ್‌ವರೆಗೆ. ಅಕೌಂಟ್ಸ್‌ನಲ್ಲಿ ರಾಜ್ಯಕ್ಕೇ ಏಳನೆಯ ರ್‍ಯಾಂಕ್ ಪಡೆದರು.

ಅಶ್ವತ್ಥ ನಾರಾಯಣನಿಗೆ ಬಾಲ್ಯದಿಂದಲೇ ವಿಪರೀತ ಸಿನಿಮಾದ ಹುಚ್ಚು. ಹೈಸ್ಕೂಲಿಗೆ ಬಂದ ಮೇಲಂತೂ ಆ ಹುಚ್ಚು ಮತ್ತೂ ಹೆಚ್ಚಾಯಿತು. ಅದರಲ್ಲಿಯೂ ಸಿನಿಮಾದಲ್ಲಿ ಹೊಡೆದಾಟವಿದ್ದರಂತೂ ಅಂತಹ ಸಿನಿಮಾ ನೋಡುವುದರಲ್ಲಿ ಇನ್ನೂ ಹೆಚ್ಚು ಆಸಕ್ತಿ. ಆದರೆ ಇದಕ್ಕೆಲ್ಲ ಹಣವೆಲ್ಲಿಂದ ಬರಬೇಕು? ಸ್ನೇಹಿತರ ಸಹಾಯದಿಂದ ಅವರ ಖರ್ಚಿನಲ್ಲಿ ಕೆಲವೊಮ್ಮೆ ಸಿನಿಮಾ ನೋಡುವ ಅವಕಾಶ ಸಿಗುತ್ತಿತ್ತು.

ಬಾಲ್ಯದ ಈ ಹುಚ್ಚೇ ಬಹುಶಃ ಅವರಿಗೆ ಮುಂದಿನ ದಿನಗಳಲ್ಲಿ ಒಬ್ಬ ಶ್ರೇಷ್ಠ ಮಟ್ಟದ ಸಿನಿಮಾ ಕಲಾವಿದನಾಗುವ ಅವಕಾಶವನ್ನು ಕಲ್ಪಿಸಿತೋ ಏನೋ?

ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದ ಅಶ್ವತ್ಥ್

೧೯೪೨, ದೇಶದಲ್ಲೆಲ್ಲ ಸ್ವಾತಂತ್ರ್ಯ ಹೋರಾಟ ಪರಾಕಾಷ್ಠೆಯನ್ನು ತಲುಪಿತ್ತು. ಶಾಲಾ ಕಾಲೇಜುಗಳ ವಿದ್ಯಾರ್ಥಿಗಳು ಈ ಹೋರಾಟದಲ್ಲಿ ತಮ್ಮನ್ನು ತಾವೇ ತೊಡಗಿಸಿಕೊಂಡು ಚಳುವಳಿಯಲ್ಲಿ ಅತ್ಯುತ್ಸಾಹದಿಂದ ಭಾಗವಹಿಸುತ್ತಿದ್ದರು. ಬಾಲಕ ಅಶ್ವತ್ಥನಿಗೆ ಆಗ ೧೭ರ ಪ್ರಾಯ. ಜೂನಿಯರ್ ಇಂಟರ್‌ಮೀಡಿಯಟ್‌ನಲ್ಲಿ ಓದುತ್ತಿದ್ದ ತಾನೂ ಹೋರಾಟದಲ್ಲಿ ಭಾಗವಹಿಸಬೇಕೆಂಬ ಅದಮ್ಯ ಉತ್ಸಾಹ, ಬಯಕೆ. ಮಹಾತ್ಮ ಗಾಂಧಿಯವರ ಕರೆಗೆ 'ಓ'ಗೊಟ್ಟ ಸಹಸ್ರಾರು ವಿದ್ಯಾರ್ಥಿಗಳು ಈ ಹೋರಾಟದಲ್ಲಿ ಭಾಗವಹಿಸುತ್ತಿದ್ದರು.

ಇಂತಹ ಸಮಯದಲ್ಲಿಯೇ ಬಾಲಕ ಅಶ್ವತ್ಥನಿಗೆ ಅವರನ್ನು ತಾಯಿಯಂತೆ ಸಾಕಿ ಸಲಹಿ ದೊಡ್ಡವನನ್ನಾಗಿ ಮಾಡಿ ಬಾಳಿನಲ್ಲಿ ಆಸರೆಯಾಗಿದ್ದ ಸೋದರತ್ತೆ ತಿಪ್ಪಮ್ಮ ನಿಧನರಾಗಿದ್ದು ಸಹಿಸಲಾರದ ನಷ್ಟವುಂಟಾಯಿತು. ಹಣಕಾಸಿನ ಸಮಸ್ಯೆ ಎದುರಾಯಿತು. ಮುಂದೆ ಓದುವುದಕ್ಕೆ ಕಷ್ಟವಾಯಿತು. ಅನಾಥ ಪ್ರಜ್ಞೆ ಆವರಿಸಿತು. ಹಾಗಾಗಿ ಕಾಲೇಜು ಓದುವುದನ್ನು ವಿಧಿಯಿಲ್ಲದೆ ನಿಲ್ಲಿಸುವ ಅನಿವಾರ್ಯ ಸ್ಥಿತಿ ಉಂಟಾಯಿತು. ಇಂತಹ ವಿಷಮ ಪರಿಸ್ಥಿತಿಯಲ್ಲಿ ಮುಂದೆ ಮಾಡುವುದಾದರೂ ಏನು ಎಂಬ ಚಿಂತೆಯಲ್ಲಿದ್ದಾಗ ಆಸರೆಯಾದವರು ಅವರ ಭಾವ. ಅವರೇನೂ ಅಂತಹ ಸ್ಥಿತಿವಂತರಾಗಿರಲಿಲ್ಲ. ಸಣ್ಣ ದೇವಸ್ಥಾನವೊಂದರಲ್ಲಿ ಅರ್ಚಕರಾಗಿ ಜೀವನ ಸಾಗಿಸುತ್ತಿದವರು. ಸಂಪಾದನೆ ಹೇಳಿಕೊಳ್ಳುವಂತಹದಾಗಿರಲಿಲ್ಲ. ಅಲ್ಲದೆ ಹೆಚ್ಚಿಗೆ ಜನರಿದ್ದ ಆ ಮನೆಯಲ್ಲಿ ಖರ್ಚೇನೂ ಕಡಿಮೆಯಿರಲಿಲ್ಲ. ಇಂತಹ ಕಠಿಣ ಪರಿಸ್ಥಿತಿಯಲ್ಲಿಯೂ ಸಹ ಭಾವಮೈದುನನ ಹೊಣೆಯನ್ನು ತಮ್ಮ ಹೆಗಲಿಗೇರಿಸಿಕೊಂಡರು. ಅಶ್ವತ್ಥ್‌ರವರೂ ಅಲ್ಪ ತೃಪ್ತ ಮನೋಭಾವದವರಾದ್ದರಿಂದ ಸಿಕ್ಕಿದ್ದಷ್ಟಕ್ಕೇ ಸಂತೋಷವನ್ನು ಪಡುತ್ತಿದ್ದರು. ಹಾಗಾಗಿ ಆ ಬಡತನದ ಆಶ್ರಯದಲ್ಲಿಯೇ ನೆಮ್ಮದಿಯನ್ನು ಕಂಡುಕೊಂಡರು.

ಬಾಲ್ಯದ ಗೆಳತಿ ಬಾಳಸಂಗಾತಿ

ಪರಿಸ್ಥಿತಿ ಹೀಗಿರುವಾಗಲೇ ತನ್ನ ಅಕ್ಕನ ಮಗಳು, ಅಷ್ಟೇ ಏಕೆ, ತನ್ನ ಬಾಲ್ಯದ ಗೆಳತಿ ಶಾರದಾಳನ್ನೇ ವಿವಾಹವಾದರು. ವಿವಾಹವಾದಾಗ ಅಶ್ವತ್ಥರ ವಯಸ್ಸು ೧೮. ಶಾರದಂಗೆ ೧೩ ವರ್ಷ. ಅವರ ಮದುವೆಯಾದ ಒಂದು ವರ್ಷದವರೆಗೆ ಮಗಳು ಅಳಿಯನ ಸಂಸಾರವನ್ನು ಸಲಹುವ ಜವಾಬುದಾರಿ ಅವರ ಮಾವನವರದೇ ಆಗಿತ್ತು.

ಸಂಸಾರ ನಿರ್ವಹಣೆಗೆ ಉದ್ಯೋಗಕ್ಕೆ ಸೇರಲೇಬೇಕಾದ ಅನಿವಾರ್ಯ ಪರಿಸ್ಥಿತಿ. ಅಂತಹ ಸಂದರ್ಭದಲ್ಲಿ ಮೈಸೂರಿನ ಚಾಮರಾಜಪುರಂ ಕೊ-ಆಪರೇಟೀವ್ ಸೊಸೈಟಿಯಲ್ಲಿ ಒಂದು ಕೆಲಸ ಸಿಕ್ಕಿತು. ಅದನ್ನು ಕೊಡಿಸಿದವರೂ ಅವರ ಭಾವನವರೇ, ಅಂದರೆ ಹೆಣ್ಣು ಕೊಟ್ಟ ಮಾವ. ಅಲ್ಲಿಯ ಕೆಲಸ ಕಾರ್ಯಗಳಲ್ಲಿ ಶ್ರದ್ಧೆಯಿಂದ ಮನಗೊಟ್ಟು ಕೆಲಸ ಮಾಡಿ ಲೆಕ್ಕ ಪತ್ರಗಳನ್ನು ಚೆನ್ನಾಗಿ ಕಲಿತರು. ಇವರ ಕಾರ್ಯದಕ್ಷತೆಗೆ ಮೆಚ್ಚಿ ಅಲ್ಲಿ ಪರೀಶೀಲನೆಗಾಗಿ ಬಂದಿದ್ದ ಗಜಾನನರಾವ್ ಎಂಬ ಅಧಿಕಾರಿಗಳು ಅವರಿಗೆ ಆಹಾರ ಹಾಗೂ ನಾಗರಿಕ ಇಲಾಖೆಯಲ್ಲಿ ಗುಮಾಸ್ತನ ಕೆಲಸ ಕೊಡಿಸಿದರು. ಕ್ರಮೇಣ ಈ ಉದ್ಯೋಗದಲ್ಲಿಯೇ ಬಡ್ತಿ ದೊರಕಿ ಮುಖ್ಯ ಗುಮಾಸ್ತ, ಸ್ಟೆನೋಗ್ರಾಫರ್ ಹೀಗೆ ಹಲವು ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸಿದರು. ಅಷ್ಟೇ ಅಲ್ಲ, ಸಾರ್ವಜನಿಕ ಸೇವಾ ಆಯೋಗದವರು ನಡೆಸುತ್ತಿದ್ದ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿಯೂ ತೇರ್ಗಡೆಯಾಗಿದ್ದರು. ಅಸಿಸ್ಟಂಟ್ ಫುಡ್ ಇನ್ಸ್‌ಪೆಕ್ಟರ್ ಆಗಿ ಬಡ್ತಿ ದೊರಕಿದಾಗ ಅವರಿಗೆ ದೊರಕುತ್ತಿದ್ದ ಸಂಬಳ ಎಂಬತ್ತು ರೂಪಾಯಿ. ಕೆಲಸಕ್ಕೆ ಸೇರಿದ ನಂತರ ಅವರ ಜೀವನ ಒಂದು ಹದಕ್ಕೆ ಬಂದಿತೆನ್ನಬಹುದು. ಈ ಕೆಲಸದಲ್ಲಿಯೂ ಮನಸ್ಸಿಟ್ಟು ಕೆಲಸ ಮಾಡಿ ಅಧಿಕಾರಿಗಳ ಮೆಚ್ಚುಗೆಯನ್ನು ಪಡೆದರು. ಅವರ ಕಷ್ಟ ಕಾರ್ಪಣ್ಯಗಳು ಬಹುಮಟ್ಟಿಗೆ ದೂರವಾದುವು.

ಜೀವನಕ್ಕೆ ಒಂದು ಭದ್ರತೆ ದೊರಕಿದ ನಂತರ ಸಂಸಾರದಲ್ಲಿ ನೆಮ್ಮದಿ ದೊರಕಿತು. ಆಗ ಅವರ ಮನ ಹರಿದಿದ್ದು ನಾಟಕ ರಂಗದತ್ತ. ಬಾಲ್ಯದಿಂದಲೂ ನಾಟಕಗಳಲ್ಲಿ ಅತೀವ ಆಸಕ್ತಿ ಹೊಂದಿದ್ದ ಅವರು ಆರಂಭದಲ್ಲಿ ಆಕಾಶವಾಣಿ ನಾಟಕಗಳಲ್ಲಿ ಭಾಗವಹಿಸುತ್ತಿದ್ದರು. "ಹವ್ಯಾಸಿ ಕಲಾವಿದರು" ಎಂಬ ರಂಗ ತಂಡದಲ್ಲಿ ಅವರು ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದರು.

ಅವರು ಅಭಿನಯಿಸಿದ ಮೊದಲ ನಾಟಕ "ಆಷಾಢಭೂತಿ". ಇದು ಪ್ರಸಿದ್ಧ ಸಾಹಿತಿಗಳಾಗಿದ್ದ ಎ.ಎನ್.ಮೂರ್ತಿರಾಯರು ಬರೆದಿದ್ದ ನಾಟಕವಾಗಿದ್ದು ನಂತರ ಇದು ೧೯೬೬ರಲ್ಲಿ ಎಮ್.ವಿ.ಕೃಷ್ಣಸ್ವಾಮಿಯವರ ನಿರ್ದೇಶನದಲ್ಲಿ ಅದೇ ಹೆಸರಿನಲ್ಲಿ ಚಿತ್ರವಾಗಿ ತಯಾರಾಯಿತು. ಈ ಚಿತ್ರದಲ್ಲಿಯೂ ಅಶ್ವತ್ಥ್‌ರವರು ಅಭಿನಯಿಸಿದ್ದರು. ಈ ಚಿತ್ರಕ್ಕೆ ಸುಪ್ರಸಿದ್ಧ ವೀಣೆ ದೊರೆಸ್ವಾಮಿ ಅಯ್ಯಂಗಾರ್ಯರು ಸಂಗೀತ ಸಂಯೋಜನೆಯನ್ನು ಮಾಡಿದ್ದರು. ಈ ಚಿತ್ರದ "ಕೃಷ್ಣನಾ ಕೊಳಲಿನಾ ಕರೆ" ಹಾಡು ಇಂದಿಗೂ ಜನಪ್ರಿಯವಾಗಿದೆ.

(ಈ ಚಿತ್ರದ ನಿರ್ದೇಶಕರಾದ ಶ್ರೀ ಕೃಷ್ಣಸ್ವಾಮಿಯವರಿಗೆ ಈ ವರ್ಷ ೨೦೧೦ರಲ್ಲಿ ವಿ. ಶಾಂತಾರಾಂ ಜೀವಮಾನ ಪ್ರಶಸ್ತಿ ಲಭಿಸಿದ್ದನ್ನು ಸ್ಮರಿಸಬಹುದಾಗಿದೆ.)

ಹವ್ಯಾಸಿ ಕಲೆಯಲ್ಲಿ ಆಸಕ್ತಿ ಹೊಂದಿದ್ದ ಅಶ್ವತ್ಥ್‌ರವರಿಗೆ ನಾಟಕದ ಗೀಳು ಹಿಡಿಯಲು ಮೂಲ ಪ್ರೇರಕರು ಅವರ ಗೆಳೆಯರಾಗಿದ್ದ ಆಕಾಶವಾಣಿಯ ವಾಮನರಾವ್ ಅವರು. ಹಲವಾರು ನಾಟಕಗಳನ್ನು ನಿರ್ದೇಶಿಸಿದ್ದ ಅವರು ಸುಂದ್ರೋಪಸುಂದ್ರು, ಗೊಗ್ಗಯ್ಯನ ಗಡಿಬಿಡಿ, ಕ್ಷೀರಸಾಗರರ ಶಾಮಣ್ಣನ ಸಾಹಸ ಮೊದಲಾದ ನಾಟಕಗಳನ್ನು ನಿರ್ದೇಶಿಸಿದ್ದರು.

ಆಕಾಶವಾಣಿ ನಾಟಕಗಳಲ್ಲಿ ಅಶ್ವತ್ಥ್‌ರವರು ಅಭಿನಯಿಸಿದ್ದರಿಂದ ಅವರಿಗೆ ಕೆ.ವಿ.ಅಯ್ಯರ್, ನಟೇಶನ್, ರತ್ನ ಮುಂತಾದ ಉತ್ತಮ ನಟರ ಪರಿಚಯ ಲಾಭವುಂಟಾಯಿತು. ಅಷ್ಟೇ ಅಲ್ಲ, ಆಕಾಶವಾಣಿಯ ಅಭಿನಯ ಮುಂದೆ ಅವರು ಚಲನಚಿತ್ರಗಳಲ್ಲಿ ತಮ್ಮ ಅಭಿನಯ ಸಾಮರ್ಥ್ಯವನ್ನು ಪ್ರದರ್ಶಿಸಲು ಸಹಾಯಕವಾಯಿತು.

ಅಶ್ವತ್ಥ್‌ರ ಚಿತ್ರರಂಗ ಪ್ರವೇಶ

ಅದೊಂದು ದಿನ ಅಶ್ವತ್ಥ್ ಅವರ ಬಾಳಿನ ದಿಕ್ಕನ್ನೇ ಬದಲಿಸಿದ ಮುಹೂರ್ತ ಬಂದೊದಗಿದ ಸುದಿನ. ಅಂದು ಬಂದೊದಗಿದ ಅನಿರೀಕ್ಷಿತ ಘಟನೆಯೊಂದು ಅವರ ಜೀವನದ ದಿಕ್ಕನ್ನೇ ಸಂಪೂರ್ಣವಾಗಿ ತಿರುಗಿಸಿತು.

ಅವರ ಮನೆ ಕದ ತಟ್ಟಿದ ಒಬ್ಬ ವ್ಯಕ್ತಿ ಒಂದು ಚೀಟಿ ಕೊಟ್ಟು ಹೋದ. ಆ ಚೀಟಿಯನ್ನು ತೆಗೆದು ಓದಿದಾಗ ಅವರು ಶಿವರಾಮಪೇಟೆಯಲ್ಲಿರುವ ಒಂದು ಹೋಟೆಲಿಗೆ ಬಂದು ಅಲ್ಲಿರುವ ನಿರ್ದೇಶಕರೊಬ್ಬರನ್ನು ಬಂದು ಕಾಣುವಂತೆ ಬರೆಯಲಾಗಿತ್ತು. ಅನಿರೀಕ್ಷಿತವಾಗಿ ಬಂದ ಈ ಪತ್ರವನ್ನು ಓದಿದ ಅವರಿಗೆ ಏನು ಮಾಡಬೇಕೆಂಬುದೇ ತಿಳಿಯಲಿಲ್ಲ. ಹೇಗಾದರೂ ಆಗಲಿ, ಎಂದು ಆ ವಿಳಾಸವನ್ನು ಹುಡುಕಿಕೊಂಡು ಆ ಹೋಟೆಲಿಗೆ ಹೋದರು. ಅಲ್ಲಿ ಅವರು ಭೇಟಿ ಮಾಡಿದ್ದು ಅಂದಿನ ಖ್ಯಾತ ಸಿನೆಮಾ ನಿರ್ದೇಶಕರಲ್ಲಿ ಒಬ್ಬರೆಂದು ಪರಿಗಣಿಸಲ್ಪಟ್ಟಿದ್ದ ಕೆ. ಸುಬ್ರಮಣ್ಯಂ ಅವರನ್ನು. ಅಶ್ವತ್ಥ್‌ರವರನ್ನು ವಿಶ್ವಾಸಪೂರ್ವಕವಾಗಿ ಬರಮಾಡಿಕೊಂಡ ಅವರು, ತಾವು ಮುಂದೆ ತಯಾರಿಸಬೇಕಾಗಿರುವ ಸಿನಿಮಾ ಒಂದರಲ್ಲಿ ಅಭಿನಯಿಸುವ ಅವಕಾಶ ನೀಡುವುದಾಗಿ ತಿಳಿಸಿ ಅವರ ಒಪ್ಪಿಗೆಯನ್ನು ಕೇಳಿದರು. ಈಗಾಗಲೆ ಸರ್ಕಾರೀ ನೌಕರಿಯಲ್ಲಿದ್ದು ಜೀವನ ನಿರ್ವಹಣೆಗೆ ಭದ್ರತೆಯನ್ನು ತಂದುಕೊಂಡಿದ್ದ ಅವರಿಗೆ ಏನು ಉತ್ತರ ಕೊಡಬೇಕೊ ತಿಳಿಯದಾಯಿತು. ಆಗ ಅವರ ನೆರವಿಗೆ ಬಂದವರು ಅವರ ಕಛೇರಿಯ ಅಧಿಕಾರಿಯಾಗಿದ್ದ ಶ್ರೀ ಎಚ್.ಎಲ್. ನಾಗೇಗೌಡರು. ಸಾಹಿತಿಗಳೂ ಕಲಾಭಿಮಾನಿಗಳೂ ಆಗಿದ್ದ ಅವರು ಅಶ್ವತ್ಥ್ ಅವರಿಗೆ ತಾನಾಗಿ ಒಲಿದಿರುವ ಅವಕಾಶವನ್ನು ಉಪಯೋಗಿಸಿಕೊಳ್ಳುವಂತೆ ಸಲಹೆ ನೀಡಿದರು. ಪ್ರೋತ್ಸಾಹದ ನುಡಿಗಳನ್ನಾಡಿ ಸಿನಿಮ ರಂಗಕ್ಕೆ ಕಾಲಿಡುವ ಧೈರ್ಯ ತುಂಬಿದರು. ಅಶ್ವತ್ಥ್‌ರ ಸಿನೆಮಾ ರಂಗಪ್ರವೇಶಕ್ಕೆ ಉತ್ತೇಜನವಿತ್ತರು.

ತಮ್ಮ ಮೇಲಧಿಕಾರಿಯಿಂದಲೆ ತಮಗೆ ದೊರೆತ ಪ್ರೋತ್ಸಾಹದ ನುಡಿಗಳಿಂದ ಉತ್ತೇಜಿತರಾದ ಅಶ್ವತ್ಥ್‌ರವರು ಶ್ರೀ ಸುಬ್ರಮಣ್ಯಂ ಅವರಿಗೆ ತಮ್ಮ ಸಮ್ಮತಿಯನ್ನು ಸೂಚಿಸಿದರು. 'ಸ್ತ್ರೀರತ್ನ' ಚಿತ್ರದ ನಾಯಕನಾಗಿ ಚಿತ್ರರಂಗವನ್ನು ಪ್ರವೇಶಿಸಿದರು.

ಅಶ್ವತ್ಥ್‌ರವರಿಗೆ ಸ್ತ್ರೀರತ್ನ ಚಿತ್ರದ ನಾಯಕನಾಗುವ ಅವಕಾಶ ದೊರಕಿದ್ದು ಒಂದು ಯೋಗಾಯೋಗವೆ ಸರಿ.

ಮೈಸೂರಿನಲ್ಲಿ ಒಂದು ಸ್ಟುಡಿಯೋವನ್ನು ನಿರ್ಮಿಸಬೇಕು, ಅದರಲ್ಲಿ ಚಿತ್ರಗಳನ್ನು ತಯಾರಿಸಬೇಕು ಎಂದು ಮಹದಾಸೆಯನ್ನು ಹೊಂದಿದ್ದ ಹಲವು ಪ್ರಮುಖರಲ್ಲಿ ಶ್ರೀ ಬಸವ ರಾಜಯ್ಯನವರೂ ಒಬ್ಬರು. ಅವರು ಪ್ರೀಮಿಯರ್ ಸ್ಟುಡಿಯೋವನ್ನು ಸ್ಥಾಪಿಸಿ ಅದರಲ್ಲಿ ಮೊದಲಿಗೆ ತಮ್ಮದೆ ಆದ ಚಿತ್ರವನ್ನು ನಿರ್ಮಿಸಿ ಬೇರೆಯವರಿಗೆ ದಾರಿ ತೋರಿಸಬೇಕೆಂಬ ಆಸೆಯನ್ನು ಹೊಂದಿ ತಾವೇ ಚಿತ್ರ ನಿರ್ಮಿಸಲು ತೊಡಗಿದರು. ಅದಕ್ಕಾಗಿ ಅಂದಿನ ಪ್ರಸಿದ್ಧ ಚಿತ್ರ ನಿರ್ದೇಶಕರಲ್ಲಿ ಒಬ್ಬರಾಗಿದ್ದ ಶ್ರೀ ಸುಬ್ರಮಣ್ಯಂರವರಿಗೆ ನಿರ್ದೇಶನದ ಜವಾಬುದಾರಿಯನ್ನು ವಹಿಸಿದರು.

ಚಿತ್ರದ ನಾಯಕನ ಪಾತ್ರಕ್ಕೆ ಸೂಕ್ತ ನಟನನ್ನು ಹುಡುಕುತ್ತಿದ್ದಾಗ ಅವರಿಗೆ ಕಂಡಿದ್ದು ನಾಟಕಗಳಲ್ಲಿ ಅಭಿನಯಿಸುತ್ತಿದ್ದು ತಕ್ಕ ಮಟ್ಟಿಗೆ ಅಭಿನಯದ ಬಗ್ಗೆ ತಿಳಿದು ಕೊಂಡಿದ್ದ ಅಶ್ವತ್ಥ್ ಅವರು. ಹಾಗಾಗಿ ಅವರಿಗೆ ತಮ್ಮ ಚಿತ್ರದಲ್ಲಿ ಅಭಿನಯಿಸಲು ಹೇಳಿ ಕಳಿಸಿದರು. 'ರೋಗಿ ಬಯಸಿದ್ದೂ ಹಾಲೂ ಅನ್ನ, ವೈದ್ಯ ಹೇಳಿದ್ದೂ ಹಾಲೂ ಅನ್ನ' ಎಂಬಂತೆ ಚಿತ್ರಗಳಲ್ಲಿ ಅಭಿನಯಿಸಲು ಅವಕಾಶಕ್ಕಾಗಿ ಕಾಯುತ್ತಿದ್ದ ಅಶ್ವತ್ಥ್‌ರವರು ತಮ್ಮ ಒಪ್ಪಿಗೆಯನ್ನು ಸೂಚಿಸಿ ಕನ್ನಡ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡಿದರು.

ಪ್ರೀಮಿಯರ್ ಸ್ಟುಡಿಯೋ ಪ್ರಾರಂಭವಾಗಿದ್ದು ೧೯೫೪ರಲ್ಲಿ ಪವಿತ್ರವಾದ ಗೌರಿ ಹಬ್ಬದ ದಿನದಂದು. ಹಾಗಾಗಿ ಅಶ್ವತ್ಥ್‌ರವರು ಚಿತ್ರಕ್ಕಾಗಿ ಮೇಕಪ್ ಮಾಡಿಕೊಂಡು ಚಿತ್ರಜಗತ್ತಿಗೆ ಪ್ರವೇಶಿಸಿದ್ದೂ ಗೌರಿಹಬ್ಬದ ಪವಿತ್ರ ದಿನದಂದೇ. ಇವರ ಮೊದಲ ಚಿತ್ರ ಸ್ತ್ರೀರತ್ನ ಬಿಡುಗಡೆಯಾಗಿದ್ದು ೧೯೫೫ರಲ್ಲಿ.

ಈ ಚಿತ್ರದ ಮತ್ತೊಂದು ವೈಶಿಷ್ಟ್ಯವೆಂದರೆ ಇದರಲ್ಲಿ ಅಭಿನಯಿಸಿದ್ದವರು ಖ್ಯಾತ ತಾರೆಯಾಗಿದ್ದ ಸಂಧ್ಯಾರವರು. ಇವರ ಮಗಳೆ ಇಂದಿನ ತಮಿಳುನಾಡಿನಲ್ಲಿ ಪ್ರಸಿದ್ಧ ರಾಜಕಾರಣಿಯಾಗಿರುವ ಜಯಲಲಿತ.

ಈ ಚಿತ್ರಕ್ಕೆ ಕಥೆ ಮತ್ತು ಸಂಭಾಷಣೆಯನ್ನು ಬರೆದಿದ್ದವರು ಕನ್ನಡದ ಖ್ಯಾತ ಸಾಹಿತಿಗಳಾಗಿದ್ದ ಹಾಗೂ ಕನ್ನಡ ಕಾದಂಬರಿ ಸಾರ್ವಭೌಮರನಿಸಿದ್ದ ಅ.ನ.ಕೃಷ್ಣರಾಯರು.

ಈ ಚಿತ್ರದಿಂದಲೇ ಪ್ರಸಿದ್ಧ ಸಂಗೀತ ನಿರ್ದೇಶಕರಾದ ಶ್ರೀ ಜಿ.ಕೆ. ವೆಂಕಟೇಶ್‌ರವರು ತಮ್ಮ ಸಂಗೀತ ನಿರ್ದೇಶನವನ್ನು ಆರಂಭಿಸಿದ್ದು.

ಅಂದಿನ ತಮಿಳು ಚಿತ್ರರಂಗದ ಪ್ರಸಿದ್ಧ ಹಾಸ್ಯ ಕಲಾವಿದರಾಗಿದ್ದ ಎನ್.ಎಸ್.ಕೃಷ್ಣನ್ ಮತ್ತು ಟಿ.ಎ. ಮಧುರಂ ದಂಪತಿಗಳು ಸಹ ಈ ಚಿತ್ರದಲ್ಲಿ ಅಭಿನಯಿಸಿದ್ದರು.

ಸ್ತ್ರೀರತ್ನ ದ ನಂತರ ಮತ್ತೆರಡು ಚಿತ್ರಗಳಲ್ಲಿ ಅವರು ನಾಯಕನ ಪಾತ್ರವನ್ನು ನಿರ್ವಹಿಸಿದರು. ಸುಬ್ರಮಣ್ಯಂರವರೇ ನಿರ್ದೇಶಿಸಿದ ಕಚದೇವಯಾನಿ ಹಾಗೂ ಅಂದಿನ ಕಾಲದ ಮತ್ತೊಬ್ಬ ಪ್ರಸಿದ್ಧ ನಿರ್ದೇಶಕರಾಗಿದ್ದ ಎಸ್.ಎ. ನಟರಾಜನ್‌ರವರು ನಿರ್ದೇಶಿಸಿದ ಕೋಕಿಲವಾಣಿ ಚಿತ್ರಗಳಲ್ಲಿಯೂ ನಾಯಕನಟನಾಗಿ ಅಭಿನಯಿಸಿದರು. ಈ ಎರಡು ಚಿತ್ರಗಳಲ್ಲಿಯೂ ನಾಯಕಿಯಾಗಿದ್ದವರು ಬಿ. ಸರೋಜಾದೇವಿಯವರು. ನಂತರದ ದಿನಗಳಲ್ಲಿ ಅವರು ಪಾತ್ರವಹಿಸಿದ್ದು ಪೋಷಕ ಪಾತ್ರಗಳಲ್ಲಿ. ಪೌರಾಣಿಕ ಚಿತ್ರಗಳೇ ಹೆಚ್ಚು ತಯಾರಾಗುತ್ತಿದ್ದ ಅಂದಿನ ದಿನಗಳಲ್ಲಿ ನಾರದನ ಪಾತ್ರಗಳಲ್ಲಿ ತಮ್ಮ ಅಭಿನಯ ಸಾಮರ್ಥ್ಯವನ್ನು ತೋರಿಸುವುದಕ್ಕೇ ಹೆಚ್ಚು ಹೆಚ್ಚು ಅವಕಾಶಗಳು ಸಿಗುತ್ತಿದ್ದುವು.

ಉದ್ಯೋಗಕ್ಕೆ ರಾಜೀನಾಮೆ - ಚಿತ್ರರಂಗಕ್ಕೆ ಪಾದಾರ್ಪಣೆ

ಸ್ತ್ರೀರತ್ನ ಹಾಗೂ ಮುಂದಿನ ಎರಡು ಚಿತ್ರಗಳಲ್ಲಿ ನಾಯಕನ ಪಾತ್ರ ದೊರಕಿದ ನಂತರ ಅವರ ಮನಸ್ಸು ಸಂಪೂರ್ಣವಾಗಿ ಚಿತ್ರರಂಗದತ್ತ ವಾಲಿದುದುರಲ್ಲಿ ಆಶ್ಚರ್ಯವೇನೂ ಇಲ್ಲ. ಹಾಗಾಗಿ ಆ ರಂಗದಲ್ಲಿಯೇ ತಮ್ಮ ಭವಿಷ್ಯವನ್ನು ಕಾಣಬಾರದೇಕೇ? ಎಂಬ ತೀರ್ಮಾನವನ್ನು ಕೈಗೊಂಡ ಅವರು ಮೈಸೂರನ್ನು ಬಿಟ್ಟು ಮದರಾಸಿಗೆ ಹೋದರೆ ಹೆಚ್ಚು ಅನುಕೂಲವಾಗಬಹುದೆಂದು ಯೋಚಿಸಿದರು. ಕಾರಣ ಅಂದಿನ ದಿನಗಳಲ್ಲಿ ಹೆಚ್ಚಿನ ಸಿನಿಮಾಗಳು ತಯರಾಗುತ್ತಿದ್ದುದೇ ಮದರಾಸಿನಲ್ಲಿ. ಮೈಸೂರು ಬೆಂಗಳೂರಿನಲ್ಲಿ ಚಿತ್ರನಿರ್ಮಾಣಕ್ಕೆ ಅವಕಾಶಗಳೇ ಇಲ್ಲದಿದ್ದ ಸಮಯದಲ್ಲಿ ಬಹುಪಾಲು ಚಿತ್ರ ನಿರ್ಮಾಪಕರು ತಮ್ಮ ಚಿತ್ರಗಳನ್ನು ತಯಾರಿಸುತ್ತಿದ್ದುದೇ ಮೈಸೂರಿನ ಹೊರಗೆ.

ಆದರೆ ಇದಕ್ಕೆ ಅಪವಾದದಂತಿದ್ದವರು ಡಿ. ಶಂಕರ ಸಿಂಗ್‌ರವರು ಮಾತ್ರ. ಮೈಸೂರಿನಲ್ಲಿಯೇ ಕನ್ನಡ ಚಿತ್ರಗಳಿಗೆ ಭದ್ರವಾದ ಬುನಾದಿ ಹಾಕಬೇಕೆಂಬ ಸಂಕಲ್ಪವನ್ನು ಮೈಗೂಡಿಸಿಕೊಂಡಿದ್ದ ಶಂಕರ ಸಿಂಗ್‌ರವರು ಮೈಸೂರಿನ ಸುತ್ತಮುತ್ತಲಿರುವ ಪ್ರಾಕೃತಿಕ ಸೌಂದರ್ಯ, ಸುಂದರ ದೃಶ್ಯಗಳು ಹೊರಾಂಗಣ ಚಿತ್ರೀಕರಣಕ್ಕೆ ಅತ್ಯಂತ ಸೂಕ್ತವಾದುದು ಎಂದು ಅಭಿಪ್ರಾಯ ಪಟ್ಟಿದ್ದರು. ಹಾಗಾಗಿ ತಮ್ಮ ನಿಲುವಿಗೆ ಬದ್ಧರಾಗಿದ್ದ ಅವರು ಮಾತ್ರ ಮೈಸೂರನ್ನು ಬಿಟ್ಟು ತೆರಳಿರಲಿಲ್ಲ.

ಆದರೆ ಕನ್ನಡನಾಡಿನಲ್ಲಿ ಚಿತ್ರ ನಿರ್ಮಾಣಕ್ಕೆ ಸೂಕ್ತ ವಾತಾವರಣವಿಲ್ಲ. ಅಗತ್ಯವಾದ ಸೌಲಭ್ಯವಿಲ್ಲ ಎಂಬ ನೆಪವನ್ನೊಡ್ಡಿ ಬಹಳಷ್ಟು ಮಂದಿ ನಿರ್ಮಾಪಕರು ಮದರಾಸಿನಲ್ಲಿ ಚಿತ್ರ ನಿರ್ಮಾಣಕ್ಕೆ ತೊಡಗಿದ್ದರು. ಹಾಗಾಗಿ ಅಲ್ಲಿಯೇ ತಮಗೆ ಚಿತ್ರಗಳಲ್ಲಿ ನಟಿಸಲು ಹೆಚ್ಚಿನ

ಅವಕಾಶ ಗಿಟ್ಟಬಹುದು, ಹಣ ಸಂಪಾದನೆಯ ಜೊತೆಗೆ ಕೀರ್ತಿಯನ್ನೂ ಗಳಿಸಬಹುದು ಎಂದು ಯೋಚಿಸಿದ ಅವರು ಕೆಲಸಕ್ಕೆ ರಾಜೀನಾಮೆ ಕೊಟ್ಟು ತೌರೂರು ಮೈಸೂರು ಬಿಟ್ಟು ಮದರಾಸಿಗೆ ತೆರಳಿದರು.

ಅಂದಿನ ದಿನಗಳಲ್ಲಿ ಕನ್ನಡ ನಟರ ಪರಿಸ್ಥಿತಿ ಮದರಾಸಿನಲ್ಲಿ ಬಹಳ ಶೋಚನೀಯವಾಗಿತ್ತು. ಇಲ್ಲಿಂದ ಅಲ್ಲಿಗೆ ಹೋಗುತ್ತಿದ್ದ ಎಷ್ಟೋ ಮಂದಿಗೆ ಅಲ್ಲಿ ಉಳಿಯಲು ಜಾಗವೇ ಸಿಗುತ್ತಿರಲಿಲ್ಲ. ದುಬಾರಿ ಹಣ ನೀಡಿ ಹೋಟಲುಗಳಲ್ಲಿ ಉಳಿದುಕೊಳ್ಳುವ ಸೌಲಭ್ಯವಾಗಲೀ, ಶಕ್ತಿಯಾಗಲೀ ಅವರಲ್ಲಿರುತ್ತಿರಲಿಲ್ಲ. ಸ್ವಲ್ಪ ಅನುಕೂಲವಿದ್ದ ಕಲಾವಿದರು ಹಾಗೂ ನಿರ್ಮಾಪಕರು ತಮ್ಮ ಅನುಕೂಲಕ್ಕೆ ತಕ್ಕಂತೆ ವ್ಯವಸ್ಥೆ ಮಾಡಿಕೊಳ್ಳುತ್ತಿದ್ದರು. ಆದರೆ ಅಶ್ವತ್ಥ್‌ರಂತಹ ಆಗತಾನೇ ಚಿತ್ರರಂಗಕ್ಕೆ ಕಾಲಿಟ್ಟಿದ್ದ ಕಲಾವಿದರಿಗೆ ಇಂತಹ ಸೌಲಭ್ಯಗಳು ಎಲ್ಲಿ ದೊರಕಬೇಕು? ಗುಂಪಿನಲ್ಲಿ ಗೋವಿಂದ ಎಂಬಂತೆ ತಮ್ಮಂತೆಯೇ ಅವಕಾಶ ಅರಸಿಕೊಂಡು ಬರುತ್ತಿದ್ದ ಹಲವರ ಜೊತೆಯಲ್ಲಿ ಕೂಡಿಕೊಂಡು ಒಟ್ಟಿಗೆ ಬಾಳುವ - ಹಂಚಿಕೊಂಡು ತಿನ್ನುವ ಅನುಕೂಲತೆಯನ್ನು ಮಾಡಿಕೊಳ್ಳಬೇಕಾಗಿತ್ತು.

ಚಿತ್ರರಂಗದಲ್ಲಿ ಅವಕಾಶ ಸಿಕ್ಕಾಗ ಅಶ್ವತ್ಥ್ ಕಂಡ ಕನಸು ಹಲವಾರು. ಒಳ್ಳೆಯ ಹೆಸರು, ಹಣ, ಕಾರು, ಬಂಗಲೆ, ಎಂಬ ಸುಂದರ ಸ್ವಪ್ನಗಳ ಸೌಧವನ್ನು ಮನಸ್ಸಿನಲ್ಲಿಯೇ ಹೆಣೆದಿದ್ದ ಅವರಿಗೆ ಮದರಾಸಿನಲ್ಲಿ ಆಗಿದ್ದು ಭ್ರಮನಿರಸನ. ಇದ್ದ ಕೆಲಸವನ್ನೂ ಬಿಟ್ಟು ಚಿತ್ರರಂಗ ಎನ್ನುವ ಮಾಯಾಜಿಂಕೆಯ ಹಿಂದೆ ಮದರಾಸಿಗೆ ಬಂದು ಇಲ್ಲಿ ಪಡಬಾರದ ಸಂಕಷ್ಟಗಳಿಗೆ ಸಿಕ್ಕಿ ಕೊಂಡೆನಲ್ಲ ಎಂಬ ಪರಿತಾಪವುಂಟಾಯಿತು. ಅಲ್ಲದೆ ಹೆಂಡತಿಗೂ ತಿಳಿಸದೆ ಕೆಲಸ ಬಿಟ್ಟು ಬಂದಿದ್ದು ಅವರಿಗೆ ಮತ್ತೂ ಬೇಸರವೆನಿಸಿತು.

ಇಂತಹ ಪರಿಸ್ಥಿತಿಯಲ್ಲಿಯೂ ಧೃತಿಗೆಡದ ಅವರು ತಮ್ಮ ಅದೃಷ್ಟ ಪರೀಕ್ಷೆಗಾಗಿ ಅಲ್ಲಿಯೇ ನೆಲೆಯೂರಿದರು. ಇದ್ದ ಹಣದಲ್ಲಿಯೇ ಅಡ್ವಾನ್ಸ್ ನೀಡಿ ಒಂದು ಮನೆಯನ್ನು ಬಾಡಿಗೆಗೆ ತೆಗೆದುಕೊಂಡು ತಾವೇ ಸ್ವಂತ ಅಡಿಗೆ ಮಾಡಿಕೊಂಡು ತಿನ್ನುವ ಪರಿಸ್ಥಿತಿ ಉಂಟಾಯಿತು. ಕೆಲವೊಮ್ಮೆ ದಿನಕ್ಕೆ ಒಂದೋ ಎರಡೋ ಇಡ್ಲಿ ತಿಂದು ಅದರಲ್ಲಿಯೇ ಜೀವನ ತಳ್ಳಬೇಕಾಗುತ್ತಿತ್ತು. ಇಂತಹ ಸನ್ನಿವೇಶದಲ್ಲಿಯೇ ಅವರು ಪಾಠವೊಂದನ್ನೂ ಕಲಿತರು. ಅದೆಂದರೆ "ಚಿತ್ರರಂಗ ಹೂವಿನ ಹಾಸಿಗೆಯಲ್ಲ, ಅದರಲ್ಲಿ ಹಣಕಾಸಿನ ಭದ್ರತೆಯಿಲ್ಲ. ನಡೆದಷ್ಟು ದಿನ ಮಾತ್ರ ನಾಣ್ಯ" ಎಂದು.

ಜೀವನವೇ ಹಾಗಲ್ಲವೇ? ಕಷ್ಟಕ್ಕೆ ವಿಮುಖನಾಗಿ ಪಲಾಯನ ಮಾಡಿದರೆ ಜೀವನವನ್ನು ಎದುರಿಸುವ ಶಕ್ತಿಯೇ ಇಲ್ಲವಾಗುತ್ತದೆ. ಎದುರಿಸುವ ಛಲದಿಂದ ಧೈರ್ಯವಾಗಿ ನಿಂತಾಗ ಜೀವನದಲ್ಲಿ ಬಾಳುವ ಪಾಠವನ್ನೂ ಕಲಿಸುತ್ತದೆ. ಅಶ್ವತ್ಥ್‌ರವರ ಪರಿಸ್ಥಿತಿಯೂ ಇದಕ್ಕಿಂತ ಭಿನ್ನವಾಗಿರಲಿಲ್ಲ. ಅಂದಿನ ಕಷ್ಟದ ದಿನಗಳಲ್ಲಿ ಅವರು ಕಲಿತ ಪಾಠ ಅವರ ಮುಂದಿನ ದಿನಗಳ ಶಿಸ್ತಿನ ಜೀವನಕ್ಕೆ ದಾರಿದೀಪವಾಯಿತು.

ಜೀವನ ನಿರ್ವಹಣೆಗೆ ತೊಂದರೆ ಪಡುತ್ತಿದ್ದ ಅಶ್ವತ್ಥ್‌ರಿಗೆ ಡಬ್ಬಿಂಗ್ ಚಿತ್ರಗಳಲ್ಲಿ ಒಂದರ ಮೇಲೊಂದರಂತೆ ಅವಕಾಶಗಳು ದೊರಕಿದುವು. ಎಂಟು ಹತ್ತು ದಿನಗಳ ಕಾಲ, ಪರಭಾಷಾ ಚಿತ್ರಗಳಲ್ಲಿ ಅಭಿನಯಿಸಿದ ನಟರಿಗೆ, ಕನ್ನಡದ ಮಾತುಗಳ ಕಂಠದಾನ ಮಾಡಿದರೆ ಸಾಕಷ್ಟು ಹಣ ಸಿಗುತ್ತಿತ್ತು. ಎನ್.ಟಿ. ರಾಮರಾವ್ ತೆಲುಗಿನಲ್ಲಿ ಅಭಿನಯಿಸಿದ್ದ ಲವಕುಶ ಚಿತ್ರದ ರಾಮನ ಪಾತ್ರಕ್ಕೆ ಮತ್ತು ತೆಲುಗಿನ ಮಾಯಾಬಜಾರ್ ಚಿತ್ರದ ಎಸ್.ವಿ. ರಂಗರಾವ್‌ರವರು ಅಭಿನಯಿಸಿದ್ದ ಘಟೋತ್ಕಚ ಪಾತ್ರಕ್ಕೆ ಕನ್ನಡ ಧ್ವನಿ ನೀಡಿದರು. ನೀರಿನಲ್ಲಿ ಮುಳುಗಿದವನಿಗೆ ಹುಲ್ಲು ಕಡ್ಡಿಯೇ ಆಧಾರವಾದಂತೆ ಅವರಿಗೆ ಡಬ್ಬಿಂಗ್ ಚಿತ್ರಗಳಿಗೆ ಕಂಠದಾನ ಮಾಡಿದ್ದಕ್ಕೆ ಸಿಗುತ್ತಿದ್ದ ಹಣ ಒಪ್ಪತ್ತು ಊಟ ಮಾಡಲಾದರೂ ಆಧಾರವಾಗುತ್ತಿತ್ತು. ಅದರಲ್ಲಿಯೇ ಸ್ವಲ್ಪ ಹಣವನ್ನು ಉಳಿತಾಯ ಮಾಡಿ ಮೈಸೂರಿನಲ್ಲಿದ್ದ ಹೆಂಡತಿಗೆ ಕಳಿಸುತ್ತಿದ್ದರು.

ಈ ಸಂದರ್ಭದಲ್ಲಿಯೇ ರಾಜಕುಮಾರ್, ಜಿ.ವಿ.ಅಯ್ಯರ್, ನರಸಿಂಹರಾಜು, ಬಾಲಕೃಷ್ಣ ಮುಂತಾದವರೂ ಸಹ ಚಿತ್ರಗಳಿಗೆ ಅವಕಾಶ ಸಿಗದೆ ಜೀವನೋಪಾಯಕ್ಕಾಗಿ "ಕನ್ನಡ ಕಲಾವಿದರು" ಎಂಬ ಸಂಸ್ಥೆಯನ್ನು ಕಟ್ಟಿ ನಾಟಕಗಳನ್ನು ಆಡುತ್ತಿದ್ದರು. ಈ ಸಂಸ್ಥೆಯಿಂದ ಅಶ್ವತ್ಥ್‌ರವರಿಗೆ ನಾಟಕದಲ್ಲಿ ಅಭಿನಯಿಸಲು ಆಹ್ವಾನ ಬಂತು. ಅವರೊಂದಿಗೆ ಇವರೂ ಸಹ ಊರೂರಿಗೆ ಹೋಗಿ ನಾಟಕಗಳಲ್ಲಿ ಅಭಿನಯಿಸಲು ತೊಡಗಿದರು.

ಸಾಹುಕಾರ ನಾಟಕದಲ್ಲಿ ಇವರು ಅಭಿನಯಿಸುತ್ತಿದ್ದ ಸತ್ಯಮೂರ್ತಿ ಪಾತ್ರ ಬಹಳ ಜನಪ್ರಿಯವಾಯಿತು. ಕಲಾರಸಿಕರು ಮೆಚ್ಚುಗೆ, ಚಪ್ಪಾಳೆಗಳಿಂದ ಇವರಿಗೆ ಪ್ರೋತ್ಸಾಹ ನೀಡುತ್ತಿದ್ದರು. ಬೇಡರ ಕಣ್ಣಪ್ಪ ನಾಟಕದಲ್ಲಿ ಇವರು ವಹಿಸುತ್ತಿದ್ದುದ್ದು ಶಿವನ ಪಾತ್ರ. ರಾಜಕುಮಾರ್‌ರವರದು ಕಣ್ಣಪ್ಪನ ಪಾತ್ರ. ಈ ಎರಡೂ ಪಾತ್ರಗಳು ಸಹ ರಸಿಕರ ಮನ ಸೂರೆಗೈದಿದ್ದವು.

ಆ ಸಮಯದಲ್ಲಿ ಕನ್ನಡದಲ್ಲಿ ತಯಾರಾಗುತ್ತಿದ್ದ ಚಿತ್ರಗಳ ಸಂಖ್ಯೆ ವರ್ಷಕ್ಕೆ ಕೇವಲ ಐದೋ ಆರೋ ಮಾತ್ರ. ಅದರಲ್ಲಿ ಪಾತ್ರಗಳು ಎಲ್ಲರಿಗೂ ಸಿಗುತ್ತಿರಲಿಲ್ಲ. ಆದರೂ ಅಂತಹ ಅವಧಿಯಲ್ಲಿ ಅವರಿಗೆ ಚಿಂತಾಮಣಿ, ಪ್ರಭುಲಿಂಗಲೀಲೆ, ಅಣ್ಣತಂಗಿ, ಮನೆಗೆ ಬಂದ ಮಹಾಲಕ್ಷ್ಮಿ, ಮಹಿಷಾಸುರಮರ್ದಿನಿ, ಶಿವಲಿಂಗ ಸಾಕ್ಷಿ, ರಣಧೀರ ಕಂಠೀರವ, ದಶಾವತಾರ, ಭಕ್ತಕನಕದಾಸ, ನಾಗಾರ್ಜುನ ಮೊದಲಾದ ಚಿತ್ರಗಳಲ್ಲಿ ಅಭಿನಯಿಸುವ ಅವಕಾಶ ಸಿಕ್ಕಿತು.

ಕಳೆದ ಶತಮಾನದ ಅರವತ್ತರ ದಶಕದ ಆರಂಭದ ದಿನಗಳಲ್ಲಿ ನಡೆದ ಒಂದೆರಡು ಘಟನೆಗಳು ಕನ್ನಡ ಚಿತ್ರರಂಗದ ಇತಿಹಾಸವನ್ನೇ ಬದಲಾಯಿಸುವಷ್ಟು ಪರಿಣಾಮ ಬೀರಿದವು. ಈ ಘಟನೆಗಳಿಂದ ಪ್ರಭಾವಿತವಾದ ಚಿತ್ರರಂಗ, ಕನ್ನಡ ನಟ ನಟಿಯರು ಕನ್ನಡ ಪ್ರೇಕ್ಷಕರಿಂದ ನಿರೀಕ್ಷೆಗೂ ಮೀರಿದ ಪ್ರೋತ್ಸಾಹವನ್ನು ಪಡೆಯುವಂತಾಯಿತು. ಇದರಿಂದ ಉತ್ತೇಜನಗೊಂಡು ಹಲವಾರು ಹೊಸ ಹೊಸ ಉದ್ಯಮಿಗಳು ಕನ್ನಡ ಚಿತ್ರರಂಗದತ್ತ ಧಾವಿಸಿ ಬರುವಂತಾಯಿತು. ಕಲಾವಿದರು, ನಿರ್ಮಾಪಕರು ತಾಂತ್ರಿಕವರ್ಗದವರು ಜನಮನ್ನಣೆ ಪಡೆಯುವಂತಾಯಿತು.

ಚಿತ್ರರಂಗದಲ್ಲಿ ಹೊಸ ಹೊಸ ಪ್ರಯೋಗಗಳನ್ನು ನಡೆಸಲು ಅನುವು ಮಾಡಿಕೊಟ್ಟಂತಾಯಿತು. ಹೊಸ ಹೊಸ ಪ್ರತಿಭೆಗಳು ಚಿತ್ರರಂಗವನ್ನು ಪ್ರವೇಶಿಸಿದುವು. ರಾಷ್ಟ್ರ ಪ್ರಶಸ್ತಿಗಳನ್ನು ಗಳಿಸುವ ಮಟ್ಟದಲ್ಲಿಯೂ ಸಹ ಕನ್ನಡ ಚಿತ್ರಗಳ ನಿರ್ಮಾಣವಾಗಲು ಆರಂಭವಾಯಿತು.

ಪ್ರವಾಹ ಪರಿಹಾರದಲ್ಲಿ ನೊಂದವರಿಗೆ ಕನ್ನಡ ಚಿತ್ರರಂಗದ ನೆರವಿನ ಹಸ್ತ

೧೯೬೧ರಲ್ಲಿ ಪ್ರಕೃತಿಯ ವಿಕೋಪಕ್ಕೆ ತುತ್ತಾಗಿ ರಾಜ್ಯದ ಹಲವು ಭಾಗಗಳಲ್ಲಿ ಉಂಟಾದ ಸಂಕಟಮಯ ವಾತಾವರಣಕ್ಕೆ ಕನ್ನಡ ಕಲಾವಿದರು ಸ್ಪಂದಿಸಿದ ರೀತಿ ಮಹತ್ತರವಾದುದು.

ರಾಜ್ಯದಲ್ಲಿ ಭೀಕರ ಪ್ರವಾಹ ಉಂಟಾಯಿತು, ಅದರ ಅಬ್ಬರಕ್ಕೆ ಬಲಿಯಾದ ಜನ ಮನೆ ಮಠ ಕಳೆದುಕೊಂಡರು. ಜಾನುವಾರುಗಳನ್ನು ಕಳೆದುಕೊಂಡರು. ಬರಿಗೈಯಾದ ಬಡ ಜನತೆಯ ಕೂಗು ಆರ್ತನಾದ ಎಲ್ಲೆಡೆ ಕೇಳಿಬರತೊಡಗಿತು.

ಇಂತಹ ಸಂಕಟಮಯ ಪರಿಸ್ಥಿತಿಯಲ್ಲಿ ಕನ್ನಡ ಚಿತ್ರಕಲಾವಿದರುಗಳು - ಚಿತ್ರರಂಗದ ದಿಗ್ಗಜರೆನಿಸಿದ ರಾಜಕುಮಾರ್, ಉದಯಕುಮಾರ್, ಕಲ್ಯಾಣಕುಮಾರ್ ಕೆ.ಎಸ್.ಅಶ್ವತ್ಥ್, ಗುಬ್ಬಿ ವೀರಣ್ಣ, ಕೆಂಪರಾಜ್, ನರಸಿಂಹರಾಜು, ಬಾಲಕೃಷ್ಣ, ಹೊನ್ನಪ್ಪ ಭಾಗವತರ್, ಸುಬ್ಬಯ್ಯ ನಾಯ್ಡು, ಬಿ.ಆರ್. ಪಂತುಲು, ಬಿ. ಸರೋಜಾದೇವಿ, ಲೀಲಾವತಿ, ಹರಿಣಿ, ಪಂಡರಿಬಾಯಿ, ಮೊದಲಾದವರೆಲ್ಲ ರಾಜ್ಯದ ನಾನಾ ಪ್ರದೇಶಗಳಲ್ಲಿ ಸಂಚರಿಸಿದರು. ರಸಮಂಜರಿ ಕಾರ್ಯಕ್ರಮಗಳನ್ನೇರ್ಪಡಿಸಿದರು, ತನ್ಮೂಲಕ ಚಿತ್ರಪ್ರೇಮಿಗಳಿಂದ ನಿಧಿ ಸಂಗ್ರಹಿಸಿ ಅಂದಿನ ಮುಖ್ಯಮಂತ್ರಿಗಳಾಗಿದ್ದ ಬಿ.ಡಿ.ಜತ್ತಿಯವರಿಗೆ ಅರ್ಪಿಸಿದರು.

ಈ ಸಂದರ್ಭದಲ್ಲಿ ನಾಡಿನ ಸಾಮಾನ್ಯ ಜನತೆಗೂ ಕನ್ನಡ ಚಿತ್ರರಂಗಕ್ಕೂ ಸುಮಧುರ ಬಾಂಧವ್ಯ ಏರ್ಪಟ್ಟಿತು.

ಚಿತ್ರರಂಗದ ಮೇಲೆ ಕನ್ನಡ ಚಳುವಳಿಯ ಪರಿಣಾಮ

ಅರವತ್ತರ ದಶಕದಲ್ಲಿ ಮಹತ್ತರ ಪರಿಣಾಮ ಉಂಟು ಮಾಡಿದ ಮತ್ತೊಂದು ಪ್ರಮುಖ ಘಟನೆ ಎಂದರೆ ಕನ್ನಡ ಚಳುವಳಿ. ಕನ್ನಡ ನಾಡಿನಲ್ಲಿ ಕನ್ನಡಿಗರಿಗೆ ಉದ್ಯೋಗಾವಕಾಶದಲ್ಲಿ ಆಗುತ್ತಿದ್ದ ವಂಚನೆ, ಕನ್ನಡ ಕಲಾವಿದರಿಗೆ ಸೂಕ್ತ ಸ್ಥಾನಮಾನದ ನಿರಾಕರಣೆ, ಕನ್ನಡ ಚಿತ್ರಪ್ರದರ್ಶನಕ್ಕೆ ಥಿಯೇಟರುಗಳೇ ಸಿಗದೆ ಆಗುತ್ತಿದ್ದ ಅನ್ಯಾಯ ಮತ್ತಿತರ ಕಾರಣಗಳಿಂದ ಸಿಡಿದೆದ್ದ ಕನ್ನಡ ಯುವ ಜನತೆ ಅ.ನ.ಕೃಷ್ಣರಾಯರು ಮತ್ತು ಮ. ರಾಮಮೂರ್ತಿಗಳ ನಾಯಕತ್ವದಲ್ಲಿ ನಡೆಸಿದ ಹೋರಾಟ ನಾಡಿನಲ್ಲಿ ಒಂದು ಮಹತ್ತರ ಕ್ರಾಂತಿಯನ್ನೇ ಉಂಟು ಮಾಡಿತೆಂದರೆ ತಪ್ಪಾಗಲಾರದು.

ಈ ಚಳುವಳಿಯಿಂದ ಎಲ್ಲ ರಂಗಗಳಿಗಿಂತಲೂ ಹೆಚ್ಚು ಪ್ರಯೋಜನವಾಗಿದ್ದೆಂದರೆ ಕನ್ನಡ ಚಿತ್ರರಂಗಕ್ಕೆಂದು ಧಾರಾಳವಾಗಿ ಹೇಳಬಹುದು.

ಚಳುವಳಿಯ ಆರಂಭಕ್ಕೆ ಮುಂಚೆ ಕನ್ನಡ ಚಿತ್ರಗಳ ಸಂಖ್ಯೆ ಗಣನೀಯವಾಗಿರಲಿಲ್ಲ. ಒಂದು ಅಂದಾಜಿನಂತೆ ೧೯೫೪ ರಲ್ಲಿ ಏಳು ಚಿತ್ರಗಳು ತಯಾರಾದರೆ, ೧೯೫೯ರಲ್ಲಿ ಆರು ಚಿತ್ರಗಳು ಮಾತ್ರ ತಯಾರಾದುವು. ಈ ವೇಳೆಗೆ ಇಪ್ಪತ್ತೈದು ವಸಂತಗಳನ್ನು ಕಂಡಿದ್ದ ಕನ್ನಡ ಚಿತ್ರರಂಗದಲ್ಲಿ ಕಲಾವಿದರು ನಿರುದ್ಯೋಗಿಗಳಾಗುವ ಸಂದರ್ಭ ಬಂದಿತ್ತು.

ಇಂತಹ ಕ್ಲಿಷ್ಟ ಪರಿಸ್ಥಿತಿಯಲ್ಲಿ ಚಿತ್ರರಂಗದ ಕಲಾವಿದರೆಲ್ಲರೂ ಸೇರಿ "ಕನ್ನಡ ಕಲಾವಿದರು" ಎಂಬ ಸಂಸ್ಥೆಯ ಹೆಸರಿನಲ್ಲಿ ರಾಜ್ಯದಾದ್ಯಂತ ಕನ್ನಡ ನಾಟಕಗಳನ್ನು ಆಡತೊಡಗಿದರು. ಅಲ್ಲದೆ ಸಹಕಾರ ತತ್ವದಡಿಯಲ್ಲಿ "ರಣಧೀರ ಕಂಠೀರವ" ಎಂಬ ಐತಿಹಾಸಿಕ ಚಿತ್ರವನ್ನು ನಿರ್ಮಿಸಿದರು. ರಾಜಕುಮಾರ್, ಜಿ.ವಿ. ಅಯ್ಯರ್, ಬಾಲಕೃಷ್ಣ ಮತ್ತು ನರಸಿಂಹರಾಜು ಅವರುಗಳೇ ಈ ಚಿತ್ರದ ನಿರ್ಮಾಪಕರು. ಇದು ಕನ್ನಡದ ೧೦೦ನೇ ವಾಕ್ಚಿತ್ರವೇ ಅಲ್ಲದೆ ಕನ್ನಡದ ಮೊದಲ ಐತಿಹಾಸಿಕ ಚಿತ್ರವೂ ಆಗಿತ್ತು.

ಅಂದು ಬೆಂಗಳೂರಿನಲ್ಲಿ ಕನ್ನಡದ ಚಿತ್ರಗಳಿಗೆ ಯಾವ ಪರಿಸ್ಥಿತಿ ಇತ್ತೆಂದರೆ ಚಿತ್ರಮಂದಿರಗಳು ಸಿಗುವುದೇ ದುರ್ಲಭವಾಗಿತ್ತು. ಕನ್ನಡ ಚಿತ್ರಕಲಾವಿದರು ಸಹಕಾರ ತತ್ವದ ಆಧಾರದ ಮೇಲೆ ಒಟ್ಟುಗೂಡಿ ತಯಾರಿಸಿದ "ರಣಧೀರ ಕಂಠೀರವ" ಚಿತ್ರವು ಬಿಡುಗಡೆಯಾದಾಗ ಅದಕ್ಕೆ ಸೂಕ್ತವಾದ ಚಿತ್ರಮಂದಿರವೇ ದೊರಕದೆ, ಕೊನೆಗೆ ಹಿಮಾಲಯ ಚಿತ್ರಮಂದಿರದಲ್ಲಿ ಬಿಡುಗಡೆಯಾಗುವ ಅನಿವಾರ್ಯ ಹಾಗೂ ಅಸಹಾಯಕ ಪರಿಸ್ಥಿತಿ ಒದಗಿ ಬಂದಿತು.

ಆದರೆ ಬೆಂಗಳೂರಿನಲ್ಲಿ-ಕರ್ನಾಟಕದಲ್ಲಿ ಕನ್ನಡ ಭಾಷೆ, ಚಿತ್ರ, ಕನ್ನಡಿಗರಿಗೆ ಉದ್ಯೋಗಕ್ಕಾಗಿ ಚಳುವಳಿಯು ಆರಂಭವಾದ ಮೇಲೆ, ಇತಿಹಾಸವೇ ಬದಲಾಯಿತು. ಚಳುವಳಿಗಾರರ ಆಕ್ರೋಶಕ್ಕೆ ಶರಣಾದ, ಪರಭಾಷಾ ಚಿತ್ರ ಪ್ರದರ್ಶನವನ್ನೇ ಮಾಡುತ್ತಿದ್ದ , ಚಿತ್ರ ಮಂದಿರಗಳ ಮಾಲೀಕರು ವಿಧಿಯಿಲ್ಲದೆ ಮಣಿಯಲೇ ಬೇಕಾಯಿತು. ಇಲ್ಲಿಂದ ಆರಂಭವಾದ ಕನ್ನಡ ಚಿತ್ರಗಳ ಪ್ರದರ್ಶನ ಅಡೆತಡೆಯಿಲ್ಲದೆ ಬೆಂಗಳೂರಿನಲ್ಲಷ್ಟೇ ಅಲ್ಲದೆ ಇಡೀ ರಾಜ್ಯದ ಎಲ್ಲ ಚಿತ್ರಮಂದಿರಗಳಲ್ಲಿಯೂ ನಡೆಯತೊಡಗಿತು. ಅಷ್ಟೇ ಅಲ್ಲ, ಯಾವುದೇ ಹೊಸ ಚಿತ್ರಮಂದಿರ ಆರಂಭವಾದರೂ ಅದು ಕನ್ನಡ ಚಿತ್ರ ಪ್ರದರ್ಶನದೊಂದಿಗೇ ಆರಂಭವಾಗುವ ಅಘೋಷಿತ ಸಂಪ್ರದಾಯವೂ ಜಾರಿಗೆ ಬಂದಿತು.

ಕನ್ನಡ ಚಳುವಳಿಯ ಕಾವು ಗ್ರಾಮಾಂತರ ಪ್ರದೇಶಗಳಿಗೂ ಹಬ್ಬಿದ್ದರಿಂದ ಕನ್ನಡ ಚಿತ್ರಗಳ ಸಂಪಾದನೆ ಹಿಂದಿಗಿಂತ ಉತ್ತಮಗೊಂಡು ಹೆಚ್ಚು ಹೆಚ್ಚು ಚಿತ್ರಗಳ ನಿರ್ಮಾಣಕ್ಕೆ ಅನುಕೂಲವಾಯಿತು.

ಚಳುವಳಿಯಿಂದ ಚಿತ್ರರಂಗಕ್ಕೆ ಆದ ಮತ್ತೊಂದು ಮಹತ್ತರ ಪ್ರಯೋಜನವೆಂದರೆ ಸರ್ಕಾರ ಚಿತ್ರರಂಗದ ಪ್ರಗತಿಗೆ ರೂಪಿಸಿದ ಸಬ್ಸಿಡಿ ನೀಡಿಕೆ, ಮನರಂಜನೆ ತೆರಿಗೆ ವಿನಾಯಿತಿ, ಸ್ಟುಡಿಯೋ ಸ್ಥಾಪನೆಗೆ ನೀಡಿದ ಉತ್ತೇಜನ, ಮುಂತಾದ ಹಲವಾರು ಯೋಜನೆಗಳು.

ಯಾವಾಗ ಜನತೆಯ ಅಭಿಮಾನ ಹಾಗೂ ಸರ್ಕಾರದ ಪ್ರೋತ್ಸಾಹ ಚಿತ್ರರಂಗಕ್ಕೆ ದೊರಕಿತೋ ಕನ್ನಡ ಚಿತ್ರರಂಗ ತನ್ನ ದಾಪುಗಾಲಿನಿಂದ ಯಶಸ್ಸಿನ ಹಾದಿಯಲ್ಲಿ ಮುನ್ನುಗ್ಗಿದ್ದು ಕನ್ನಡಚಿತ್ರರಂಗದ ಪ್ರಗತಿ ಹಾಗೂ ಕಲಾವಿದರ ಏಳಿಗೆಗೆ ಸಹಾಯಕವಾಯಿತು.

ಚಿತ್ರರಂಗದಲ್ಲಿ ಅಶ್ವತ್ಥ್‌ರವರ ಪ್ರಗತಿ

ಚಿತ್ರರಂಗಕ್ಕೆ ಬಂದು ಆರೇಳು ವರ್ಷಗಳು ಕಳೆದಿದ್ದರೂ ಅಶ್ವತ್ಥ್‌ರವರಿಗೆ ಸರಿಯಾದ ಪಾತ್ರಗಳು ದೊರಕಿರಲಿಲ್ಲ. ಪರಿಸ್ಥಿತಿ ಒಂದೇ ಸಮನಿರುತ್ತದೆಯೆ? ಕತ್ತಲೆ ಕಳೆದ ನಂತರ ಬೆಳಕು ಮೂಡುವುದು ಸಹಜವೇ ಅಲ್ಲವೆ?

ಗಂಡನನ್ನು ನೋಡಲು ಮದರಾಸಿಗೆ ಬಂದಿದ್ದ ಪತ್ನಿ ಶಾರದಾರವರ ಸಲಹೆಯಂತೆ ವೆಂಕಟೇಶ್ವರನ ದರ್ಶನ ಮಾಡಿಬರಲು ಅಶ್ವತ್ಥ್ ದಂಪತಿಗಳು ತಿರುಪತಿಗೆ ಹೋಗಿ ಕ್ಯೂ ನಲ್ಲಿ ನಿಂತಿದ್ದಾಗ ಅಶ್ವತ್ಥ್‌ರವರ ಗೆಳೆಯ ಶಿವರಾಮ್ ಅವರು ಮದರಾಸಿನಿಂದ ಇವರನ್ನು ಹುಡುಕಿಕೊಂಡು ಬಂದು ತಕ್ಷಣವೇ ಮದರಾಸಿಗೆ ಬರಬೇಕೆಂದು ನಿರ್ಮಾಪಕ ಬಿ.ಆರ್. ಪಂತುಲುರವರು ಹೇಳಿಕಳಿಸಿದ ಸಮಾಚಾರವನ್ನು ಇವರಿಗೆ ತಿಳಿಸಿದರು. ಅದರಂತೆ ಕೂಡಲೇ ಮದರಾಸಿಗೆ ವಾಪಸಾಗಿ ಪಂತುಲುರವರ ಸಹಾಯಕರಾಗಿದ್ದ ಪುಟ್ಟಣ್ಣಕಣಗಾಲ್‌ರವರನ್ನು ಭೇಟಿ ಮಾಡಿದರು.

ಆಗ ಪುಟ್ಟಣ್ಣನವರು, "ಅಶ್ವತ್ಥ್‌ರವರೇ, ಈಗ ಪಂತುಲುರವರು ತೆಗೆಯುತ್ತಿರುವ ಚಿತ್ರದಲ್ಲಿ ನಿಮಗಾಗಿ ಒಂದು ಪಾತ್ರವಿದೆ. ಈ ಚಿತ್ರದಲ್ಲಿ ನಿಮಗಿರುವುದು ಹತ್ತೋ ಹನ್ನೆರಡೋ ದೃಶ್ಯಗಳು. ಆದರೆ ಅವೆಲ್ಲಾ ನಿಮ್ಮ ನಟನಾ ಸಾಮರ್ಥ್ಯಕ್ಕೇ ಒಂದು ಸವಾಲಿನಂತಿವೆ. ನೀವು ಅದರಲ್ಲಿ ಅಭಿನಯಿಸಿ ಸೈ ಎನಿಸಿಕೊಂಡರೆ, ಅದು ನಿಮ್ಮ ವೃತ್ತಿಜೀವನದಲ್ಲಿಯೇ ಒಂದು ಮಹತ್ತರವಾದುದನ್ನು ಸಾಧಿಸಿದ ಹಾಗೆ" ಎಂದು ಹೇಳಿದರು. ಈ ಸವಾಲಿನ ಪಾತ್ರವನ್ನು ಒಪ್ಪುವುದೋ ಬಿಡುವುದೋ ಎಂಬ ಜಿಜ್ಞಾಸೆಯಲ್ಲಿರುವಾಗ ಅವರ ಹೆಂಡತಿ "ರೀ, ನೀವು ಇದನ್ನು ಒಪ್ಪಿಕೊಂಡು ಎಲ್ಲರ ಹತ್ರಾನೂ ಸೈ ಅನ್ನಿಸಿಕೊಳ್ಳಿ, ಇನ್ನೂ ಯಾಕೆ ಮೀನಾ ಮೇಷಾ ಎಣಿಸ್ತೀರಿ" ಎಂದು ಅವರಿಗೆ ಉತ್ತೇಜನದ ಮಾತುಗಳನ್ನಾಡುತ್ತಾ ಅವರ ಮನಸಿನಲ್ಲಿ ಸ್ಫೂರ್ತಿ ತುಂಬಿದರು.

ಈ ಬಗ್ಗೆ ಇನ್ನೂ ಪೂರ್ತಿ ಮನಸ್ಸು ಮಾಡದೆ, ಏನು ಮಾಡಬೇಕೋ ತಿಳಿಯದೆ ಸಂದಿಗ್ಧ ಸ್ಥಿತಿಯಲ್ಲಿರುವಾಗಲೇ ಅವರಲ್ಲಿ ಮತ್ತಷ್ಟು ಆತ್ಮ ವಿಶ್ವಾಸವನ್ನು ತುಂಬಿದವರು ಅವರ ಗೆಳೆಯರಾದ ಸೊರೋಟ್ ಅಶ್ವತ್ಥ್‌ರವರು. ಮಡದಿ ಮತ್ತು ಗೆಳೆಯರ ಪ್ರೋತ್ಸಾಹದ ನುಡಿಗಳಿಂದ ಉತ್ತೇಜಿತರಾದ ಅವರು ಆ ಪಾತ್ರದಲ್ಲಿ ತಾವು ಅಭಿನಯಿಸಲು ಸಮ್ಮತಿ ನೀಡಿದರು. ಕನ್ನಡ ಮತ್ತು ತೆಲುಗು ಈ ಎರಡೂ ಭಾಷೆಗಳಲ್ಲಿ ತಯಾರಾಗುತ್ತಿದ್ದ ಈ ಚಿತ್ರದ ತೆಲುಗು ಅವತರಣಿಕೆಯಲ್ಲಿ ಇವರಿಗೆ ಕನ್ನಡದಲ್ಲಿ ನೀಡಿದ್ದ ಪಾತ್ರವನ್ನು ಅಭಿನಯಿಸುತ್ತಿದ್ದವರು ತೆಲುಗಿನ ಆ ಕಾಲದ ಪ್ರಸಿದ್ಧ ನಟರಾಗಿದ್ದ ವಿ. ನಾಗಯ್ಯನವರು.

ರಾಜಕುಮಾರ್, ನಾಗೇಂದ್ರರಾಯರು, ಎಂ.ವಿ.ರಾಜಮ್ಮ ಹಾಗೂ ಅಶ್ವತ್ಥ್ ಈ ನಾಲ್ಕು ಜನ ಅಭಿನಯಿಸಬೇಕಾಗಿದ್ದ ದೃಶ್ಯದ ಚಿತ್ರೀಕರಣವಾಗಬೇಕಾಗಿತ್ತು. ಕಥೆ, ಅಭಿನಯಿಸಬೇಕಾಗಿದ್ದ ಸನ್ನಿವೇಶ ಇವೆಲ್ಲವನ್ನೂ ಮನದಟ್ಟಾಗಿಸಿಕೊಂಡಿದ್ದ ಅಶ್ವತ್ಥ್‌ರವರು ತಮ್ಮ ಅಗ್ನಿಪರೀಕ್ಷೆಗೆ ಸಿದ್ಧವಾಗಿ ಬಂದಿದ್ದರು. ಅಭಿನಯಿಸಿದ ಪ್ರತಿಯೊಂದು ಟೇಕೂ ಓಕೇ ನೇ. ಸವಾಲಾಗಿ ಸ್ವೀಕರಿಸಿದ ಪಾತ್ರ ಸಂಪೂರ್ಣ ತೃಪ್ತಿಯನ್ನು ತಂದುಕೊಟ್ಟಿತು. ಸ್ವಲ್ಪ ಹೊತ್ತು ಚಿತ್ರೀಕರಣವನ್ನು ನಿರ್ದೇಶಿಸಿ ನಂತರ ಪುಟ್ಟಣ್ಣನವರಿಗೆ ಒಪ್ಪಿಸಿ ಹೋದ ಪಂತುಲುರವರು ತಮ್ಮ ಅಭಿನಯವನ್ನು ಒಪ್ಪಿದ್ದಾರೆನಿಸಿತು. ಚಿತ್ರೀಕರಣವನ್ನು ಪೂರ್ತಿಗೊಳಿಸಿದ ನಂತರ ಪುಟ್ಟಣ್ಣನವರು ಬಂದು ಇವರನ್ನು ಮನಸಾರೆ ಅಭಿನಂದಿಸಿದರು. "ಅಶ್ವತ್ಥ್ ಅವರೇ, ಎಷ್ಟು ಚೆನ್ನಾಗಿ ಮಾಡಿದಿರಿ. ನಿನ್ನೆಯಿಂದ ಇದಕ್ಕೋಸ್ಕರ ಎಷ್ಟೊಂದು ಕಷ್ಟ ಪಟ್ಟಿದ್ರಿ, ಎಷ್ಟು ಒದ್ದಾಡಿದ್ರಿ." ಎಂದು ಹೇಳಿ ಮನಸಾರೆ ಹೊಗಳಿದರು. ಪುಟ್ಟಣ್ಣನವರು ಒತ್ತು ಕೊಟ್ಟು ಹೇಳಿದ್ದ "ಇದರಲ್ಲಿನ ನಿಮ್ಮ ಅಭಿನಯ ನಿಮ್ಮ ನಟನಾ ಸಾಮರ್ಥ್ಯಕ್ಕೇ ಒಂದು ಸವಾಲಿನಂತಿದೆ. ನೀವು ಅದರಲ್ಲಿ ಅಭಿನಯಿಸಿ ಸೈ ಎನಿಸಿಕೊಂಡರೆ, ಅದು ನಿಮ್ಮ ವೃತ್ತಿಜೀವನದಲ್ಲಿಯೇ ಒಂದು ಮಹತ್ತರವಾದುದನ್ನು ಸಾಧಿಸಿದ ಹಾಗೆ" ಎಂಬುದನ್ನು ಸವಾಲಾಗಿ ಸ್ವೀಕರಿಸಿದ್ದ ಅಶ್ವತ್ಥ್ ಅವರಿಗೆ ಪುಟ್ಟಣ್ಣನವರ ಹೊಗಳಿಕೆ ಸಾರ್ಥಕವೆನಿಸಿತು. ಈ ಚಿತ್ರದಲ್ಲಿನ ತಮ್ಮ ಪಾತ್ರಾಭಿನಯದಿಂದ ಅವರಲ್ಲಿ ಆತ್ಮ ವಿಶ್ವಾಸ ಮೂಡಿ ಬಂದಿತು. ಅವರು ಹಾಗೆ ದಿಗ್ವಿಜಯ ಸಾಧಿಸಿದ ಚಿತ್ರವೇ ಅವರನ್ನು ಮುಂದೆ ಪೋಷಕ ನಟನಾಗಿ ಕನ್ನಡ ಚಿತ್ರರಂಗದಲ್ಲಿ ಶಾಶ್ವತವಾಗಿ ರೂಪಿಸಿದ "ಗಾಳಿ ಗೋಪುರ".

ಪುಟ್ಟಣ್ಣನವರು ಹೇಳಿದ್ದ ಮಾತು ಅಕ್ಷರಶಃ ನಿಜವಾಯಿತು. ಗಾಳಿ ಗೋಪುರದ ನಂತರ ಪೋಷಕ ನಟರಾಗಿ ಕನ್ನಡ ಚಿತ್ರರಂಗದಲ್ಲಿ ಶಾಶ್ವತ ಸ್ಥಾನವನ್ನು ಪಡೆದ ಅಶ್ವತ್ಥ್‌ರವರು ಮುಂದಿನ ಬಹುತೇಕ ಎಲ್ಲ ಕನ್ನಡ ಚಿತ್ರಗಳಲ್ಲಿಯೂ ಪೋಷಕ ನಟನೆಗೆ ಆಯ್ಕೆಯಾಗುತ್ತಲೇ ಬಂದರು. "ಗಾಳಿಗೋಪುರ"ದಲ್ಲಿ ಅಭಿನಯಿಸಿದಂತಹ ಭಾವನಾತ್ಮಕ (ಸೆಂಟಿಮೆಂಟಲ್) ಪಾತ್ರಗಳಿಗೆ ಅಶ್ವತ್ಥ್‌ರನ್ನು ಬಿಟ್ಟರೆ ಬೇರೆ ಯಾರೂ ಸರಿಹೊಂದುವುದಿಲ್ಲ ಎಂದು ಚಿತ್ರರಂಗ ತೀರ್ಮಾನಿಸಿಬಿಟ್ಟಿತು. ಅಂದಿನಿಂದ ತಂದೆ, ಅಣ್ಣ, ಮಾವ ಮುಂತಾದ ಹಿರಿಯ ಪಾತ್ರಗಳು ಇವರಿಗೇ ಮೀಸಲಾದುವು.

ಇದರಿಂದ ಇವರಿಗೆ ಮನದಟ್ಟಾಗಿದ್ದೆಂದರೆ ಪರಿಸ್ಥಿತಿ ಒತ್ತಡದಿಂದಲೂ ಒಬ್ಬ ಉತ್ತಮ ಕಲಾವಿದನಾಗಬಹುದು ಎಂದು. ಇದು ಬರೀ ನಟನೆಗೇ ಅಲ್ಲ. ಜೀವನದ ಎಲ್ಲ ರಂಗಗಳಲ್ಲಿಯೂ ಎಲ್ಲ ವ್ಯಕ್ತಿಗಳಿಗೂ ಅನ್ವಯಿಸುತ್ತದೆ.

ಅಶ್ವತ್ಥ್‌ರವರ ಅಭಿನಯಿಸಿದ ಕೆಲವು ಸ್ಮರಣೀಯ ಪೋಷಕ ಪಾತ್ರಗಳು

ಜೇನುಗೂಡು ಚಿತ್ರದಲ್ಲಿ ಅವರದು ಹಿರಿಯಣ್ಣನ ಪಾತ್ರ. ಅದು ಹಿಂದಿಯಲ್ಲಿ ಬಾಬಿ ಎಂದೂ ತಮಿಳಿನಲ್ಲಿ ಎನ್ ತಂಗೈ ಎಂದೂ ತಯಾರಾಗಿತ್ತು. ಹಿಂದಿಯಲ್ಲಿ ಈ ಪಾತ್ರವನ್ನು

ವಹಿಸಿದ್ದವರು ಖ್ಯಾತ ನಟರಾದ ಬಲರಾಜ ಸಹಾನಿಯವರು. ತಮಿಳು ಮತ್ತು ಹಿಂದಿ ಚಿತ್ರಗಳನ್ನು ನಿರ್ದೇಶಿಸಿದ್ದವರು ಖ್ಯಾತ ನಿರ್ದೇಶಕರಾಗಿದ್ದ ಕೃಷ್ಣನ್-ಪಂಜು ರವರು. ಜೇನುಗೂಡು ಕನ್ನಡ ಚಿತ್ರದಲ್ಲಿ ಅಶ್ವತ್ಥ್ ಅವರ ಅಭಿನಯ ಚೆನ್ನಾಗಿ ಮೂಡಿಬಂದು ಚಿತ್ರ ಅತ್ಯಂತ ಯಶಸ್ವಿಯಾಯಿತು. ಈ ಸಂದರ್ಭದಲ್ಲಿ ಕೃಷ್ಣನ್-ಪಂಜು ರವರು "ಕನ್ನಡದ ಜೇನುಗೂಡು ಚಿತ್ರದಲ್ಲಿನ ನಿಮ್ಮ ಅಭಿನಯದ ಮಟ್ಟಕ್ಕೆ ಬೇರೆಯುವರು ಮಾಡದದೆ ಹೋದರು" ಎಂದು ಪ್ರಶಂಸೆಯ ಮಾತುಗಳನ್ನಾಡಿದ್ದು ಅಶ್ವತ್ಥ್ ಅವರಿಗೆ ಭಾರಿ ಖುಷಿಯನ್ನು ಕೊಟ್ಟಿತು.

ಶುಭಮಂಗಳದಲ್ಲಿ ಅಶ್ವತ್ಥ್‌ರ ಅಭಿನಯ ಐದು ಹತ್ತು ನಿಮಿಷಗಳದಾಗಿದ್ದರೂ ಅವರಿಗೆ ಅದ್ಭುತ ಯಶಸ್ಸನ್ನು ತಂದು ಕೊಟ್ಟಿತು. ಯಾವಾಗಲೂ ಗಂಭೀರವಾದ ಪಾತ್ರಗಳನ್ನೇ ನಿರ್ವಹಿಸುತ್ತಿದ್ದ ಅವರಿಗೆ ಪುಟ್ಟಣ್ಣನವರು ಈ ಚಿತ್ರದಲ್ಲಿ ವಿನೂತನ ಪಾತ್ರವನ್ನು ಕೊಟ್ಟಿದ್ದರು. ಈ ಚಿತ್ರದಲ್ಲಿ ರಾಜಹಾಸ್ಯ ಇರಬೇಕೆಂದು ಅಶ್ವತ್ಥ್‌ರವರಿಂದ ಅಪೇಕ್ಷಿಸಿದರು. ರಾಜಹಾಸ್ಯ ಎಂದರೆ ಹೇಗಿರಬೇಕು ಎಂಬುದೆ ತಿಳಿಯದಿದ್ದ ಅವರಿಗೆ ಅದನ್ನು ನಿರ್ವಹಿಸುವುದು ಹೇಗೆ? ಎಂಬುದೇ ದೊಡ್ಡ ಸಮಸ್ಯೆಯಾಯಿತು. ಏನು ಮಾಡಬೇಕೆಂಬುದೇ ತಿಳಿಯಲಿಲ್ಲ. ಅವರಿಗೆ ಇದುವರೆಗೆ ಗಂಭೀರವಾದ ಪಾತ್ರಗಳನ್ನು ಮಾಡಿ ಗೊತ್ತಿತ್ತೇ ಹೊರತು ಹಾಸ್ಯಪಾತ್ರ ಮಾಡಿ ಅನುಭವವಿರಲಿಲ್ಲ.

ಚಿತ್ರದಲ್ಲಿನ ಸನ್ನಿವೇಶ ಹೀಗಿತ್ತು. ನಾಯಕಿಗೆ ಹುಷಾರಿಲ್ಲ. ಜ್ವರದಿಂದ ನರಳುತ್ತಿದ್ದಾಳೆ. ಅಂತಹ ಸಮಯದಲ್ಲಿ ಡಾಕ್ಟರರು ಬಂದು ರೋಗಿಯನ್ನು ಪರೀಕ್ಷಿಸಿ ಔಷಧವನ್ನು ನೀಡಬೇಕು. ಇಲ್ಲಿ ಅಶ್ವತ್ಥ್‌ರ ಪಾತ್ರ ರೋಗಿಯನ್ನು ಪರೀಕ್ಷಿಸಿ ಔಷಧವನ್ನು ಕೊಡುವ ಡಾಕ್ಟರರದು.

ಹಾಸ್ಯಕ್ಕೆ ಆಸ್ಪದವೇ ಇಲ್ಲದ ಗಂಭೀರವಾದ ಇಂತಹ ಸನ್ನಿವೇಶದಲ್ಲಿ ಹಾಸ್ಯವನ್ನು ತರುವುದಾದರೂ ಹೇಗೆ? ಅಶ್ವತ್ಥ್‌ರಿಗೆ ಇದೇ ಸವಾಲಾಗಿ ತೋರಿತು. ಸ್ವಲ್ಪ ಸಮಯ ಮೌನಕ್ಕೆ ಶರಣಾಗಿ ಯೋಚನೆಗೆ ತೊಡಗಿದರು. ಕೆಲ ಸಮಯದ ನಂತರ ಮನಸ್ಸಿಗೆ ಏನೋ ಹೊಳೆದಂತಾಯಿತು. ಮೇಕಪ್ ಮ್ಯಾನ್ ಹತ್ತಿರ ಹೋಗಿ ತಮ್ಮ ಮನಸ್ಸಿನಲ್ಲಿ ಮೂಡಿ ಬಂದ ಆಲೋಚನೆಗೆ ತಕ್ಕಂತೆ ತಮ್ಮ ವೇಷ ಭೂಷಣದಲ್ಲಿ ಬದಲಾವಣೆ ಮಾಡುವಂತೆ ಹೇಳಿದರು. ನಂತರ ಪುಟ್ಟಣ್ಣನವರ ಬಳಿ ಹೋಗಿ ನಿಂತುಕೊಂಡರು. ಅವರಿಗೆ ತಮ್ಮ ಮನಸ್ಸಿನಲ್ಲಿ ಮೂಡಿಬಂದಿರುವ ಪಾತ್ರ ಹಾಗೂ ಅಭಿನಯದ ಬಗೆಗೆ ತಾವು ಆಲೋಚಿಸಿಕೊಂಡಿರುವ ರೀತಿ ಹಾಗೂ ಅದನ್ನು ನಿರ್ವಹಿಸುವ ಬಗ್ಗೆ ಹೇಳಿದರು.

ಡಾಕ್ಟರ್‌ಗೆ ಗೂರಲು ರೋಗ ಇರುತ್ತೆ. ಉಸಿರಾಡುವಾಗಲೆಲ್ಲ "ಹುಶ್.....ಹುಶ್...." ಎಂದು ಜೋರಾಗಿ ಉಸಿರಾಡುವ ಸಂದರ್ಭ ಬರುತ್ತಿರುತ್ತದೆ. ರೋಗಿಯನ್ನು ಪರೀಕ್ಷಿಸಿದ ನಂತರ ಡಾಕ್ಟರು ಕೈಯಲ್ಲಿ ಮಾತ್ರೆ ತೆಗೆದುಕೊಂಡು ನೀರು ತಗೊಂಡು ಬನ್ನಿ ಅಂತ ಹೇಳುತ್ತಾರೆ. ರೋಗಿಯ ಸುತ್ತ ಮುತ್ತಲಿದ್ದವರು ರೋಗಿಗೆ ಮಾತ್ರೆ ಕೊಡಲು ನೀರು ಕೇಳುತ್ತಿದ್ದಾರೆ ಎಂದು ತಿಳಿದುಕೊಂಡು ನೀರಿನ ಲೋಟವನ್ನು ತರುತ್ತಾರೆ. ಆದರೆ ಆಗುವುದೇ ಬೇರೆ. ಆ ಮಾತ್ರೆಯನ್ನು

ರೋಗಿಗೆ ಕೊಡದೆ ಡಾಕ್ಟರು ಆ ಮಾತ್ರೆಯನ್ನು ತಾವೇ ತೆಗೆದುಕೊಂಡು ನೀರು ಕುಡಿಯುತ್ತಾರೆ. ಆಗ ಜನಗಳ ಪ್ರತಿಕ್ರಿಯೆ ಹೇಗಿರುತ್ತದೆ? ಪ್ರೇಕ್ಷಕರೆಲ್ಲ ಗೊಳ್ಳೆಂದು ನಗುತ್ತಾರೆ.

ಇದು ಶುಭಮಂಗಳದಲ್ಲಿ ಬರುವ ಒಂದು ಚಿಕ್ಕ ಸನ್ನಿವೇಶವಾದರೂ ಚಿತ್ರದ ಪ್ರಭಾವೀ ದೃಶ್ಯಗಳಲ್ಲಿ ಒಂದಾಗಿ ಮೂಡಿಬಂತು. ಚಿತ್ರದ ವೀಕ್ಷಕರೆಲ್ಲರೂ ಇದನ್ನು ಬಹಳ ಆಪ್ಯಾಯಮಾನವಾಗಿ ಸ್ವೀಕರಿಸಿದರು.

ನಿಜ. ಒಬ್ಬ ಅಭಿಜಾತ ಕಲಾವಿದನಿಗೆ ಸಂದರ್ಭದ ಸನ್ನಿವೇಶವನ್ನು ವಿವರಿಸಿದಾಗ ಅವನಲ್ಲಿ ಅಂತರ್ಗತವಾಗಿ ಮೂಡಿರುವ ಕಲ್ಪನಾಶಕ್ತಿಯನ್ನು ಹೊರಹೊಮ್ಮಿಸಲು ಅವನಿಗೊಬ್ಬನಿಗೆ ಮಾತ್ರವೇ ಸಾಧ್ಯ.

ನಾಗರಹಾವು ಚಿತ್ರದಲ್ಲಿನ ಅವರ ಚಾಮಯ್ಯ ಮೇಷ್ಟ್ರು ಪಾತ್ರವಂತೂ ಅವರನ್ನು ಕೀರ್ತಿಯ ಮೇರುಶಿಖರಕ್ಕೇ ಏರಿಸಿತೆಂದರೆ ಅತಿಶಯೋಕ್ತಿಯಾಗಲಾರದು. ಆ ಚಿತ್ರದಲ್ಲಿನ ಅವರ ಪಾತ್ರ ಎಂದೆಂದಿಗೂ ನೂತನ, ಚಿರನೂತನ. ರಾಮಾಚಾರಿಗೆ ಎದುರಾಗಿ ಚಾಮಯ್ಯ ಮೇಷ್ಟ್ರು ಪಾತ್ರವನ್ನು ಯಾರೂ ಮರೆಯುವ ಹಾಗೇ ಇಲ್ಲ. ಆ ಸಿನೆಮಾ ಬಂದು ಎಷ್ಟೋ ವರುಷಗಳು ಕಳೆದುಹೋದರೂ ಆ ಚಿತ್ರದ - ಚಾಮಯ್ಯ ಮೇಷ್ಟ್ರು ಮತ್ತು ಶಿಷ್ಯ ರಾಮಾಚಾರಿ - ಈ ಎರಡು ಪಾತ್ರಗಳನ್ನು ಚಿತ್ರ ರಸಿಕರು ಎಂದೆಂದಿಗೂ ನೆನಪಿಸಿಕೊಳ್ಳುತ್ತಲೇ ಇರುತ್ತಾರೆ. ಅವರ ಸ್ಮೃತಿಪಟಲದಿಂದ ಎಂದಿಗೂ ಮಾಸದ ಪಾತ್ರಗಳೆಂದರೆ ಅವೆರಡು.

ಹಾಗಾಗಿಯೇ ಅಶ್ವತ್ಥ್ ಅವರು ನಿಧನರಾದಾಗ ಪತ್ರಿಕೆಗಳು ಚಾಮಯ್ಯ ಮೇಷ್ಟ್ರು ಇನ್ನಿಲ್ಲ ಎಂದೇ ಬರೆದುವು. ಹಾಗಿತ್ತು ಆ ಚಿತ್ರದಲ್ಲಿನ ಅವರ ಅಭಿನಯ.

ಇದೇ ಚಿತ್ರ ಹಿಂದಿ ಭಾಷೆಯಲ್ಲಿಯೂ ತಯಾರಾದಾಗ ಅದರಲ್ಲಿ ಚಾಮಯ್ಯ ಮೇಷ್ಟ್ರು ಪಾತ್ರದಲ್ಲಿ ಅಭಿನಯಿಸಿದವರು ಹಿಂದಿ ಚಿತ್ರರಂಗದ ಮತ್ತೊಬ್ಬ ಪ್ರತಿಭಾನ್ವಿತ ನಟ ಪ್ರಾಣ್. ಕನ್ನಡದಲ್ಲಿ ಅಶ್ವತ್ಥ್‌ರವರ ಅಭಿನಯವನ್ನು ವೀಕ್ಷಿಸಿದ ಅವರು ಅಶ್ವತ್ಥ್‌ರವರ ಅಭಿನಯದಲ್ಲಿ ಅರ್ಧದಷ್ಟನ್ನಾದರೂ ಸಾಧಿಸಲು ಸಾಧ್ಯವಾದರೆ ನನಗೆ ತೃಪ್ತಿ ಎಂದರಂತೆ. ಅಂತಹ ನಟನಾ ಪ್ರತಿಭೆಯನ್ನು ಹೊಂದಿದ ಅಶ್ವತ್ಥ್‌ರಿಗೆ ಸಹಜವಾಗಿಯೇ ಇಂತಹ ಕಲೆ ಸಿದ್ಧಿಸಿತು. ಹಾಗಾಗಿ ಅವರು ಯಾವುದೇ ಸನ್ನಿವೇಶಕ್ಕೆ ತಕ್ಕಂತೆ ಸಮಯ ಸಂದರ್ಭಕ್ಕೆ ಅನುಸಾರವಾಗಿ ನಟಿಸುತ್ತಿದ್ದರು. ಆದಕ್ಕಾಗಿಯೇ ಅವರು ಚಿತ್ರದ ಕಥೆ, ಅದರಲ್ಲಿ ತಮ್ಮ ಪಾತ್ರ, ಅದರ ಇತಿ ಮಿತಿ ತಮಗಿರುವ ಸಂಭಾಷಣೆ ಇವುಗಳನ್ನು ಚಿತ್ರೀಕರಣಕ್ಕೆ ಮುಂಚೆಯೇ ಪಡೆದುಕೊಂಡು ಅದಕ್ಕೆ ಸೂಕ್ತವಾಗಿ ಸಿದ್ಧತೆಯನ್ನು ಮಾಡಿಕೊಳ್ಳುತಿದ್ದರು.

ಇವರು ಅಭಿನಯಿಸಿ ಇವರಿಗೆ ಇಷ್ಟವಾದ, ಅಲ್ಲದೆ ಇವರಿಗೆ ಹೆಸರು ತಂದುಕೊಟ್ಟ ಮತ್ತೊಂದು ಚಿತ್ರವೆಂದರೆ ಸರ್ವಮಂಗಳ. ಇದು ಕನ್ನಡದ ಖ್ಯಾತ ಸಾಹಿತಿಯಾಗಿದ್ದ ಚದುರಂಗ

(ಎಂ. ಸುಬ್ರಮಣ್ಯರಾಜ ಅರಸು)ರವರ ಸುಪ್ರಸಿದ್ಧ ಕಾದಂಬರಿ. ಇದರಲ್ಲಿ ಅಶ್ವತ್ಥ್‌ರವರದು ವಿಶಿಷ್ಟವಾದ ವಿಭಿನ್ನ ಪಾತ್ರ.

ನಿಜ ಜೀವನದಲ್ಲಿ ಸೊಗಸಾಗಿದ್ದರೂ ಚಿತ್ರದಲ್ಲಿ ಇವರು ವಕ್ರವಾಗಿ ಕಾಣಬೇಕು. ಕಪ್ಪು ಮೈ ಬಣ್ಣ, ಉಬ್ಬುಹಲ್ಲಿನಿಂದ ಕೂಡಿರಬೇಕು. ಸುಂದರ ಪುರುಷನನ್ನು ಇಷ್ಟೊಂದು ವಕ್ರವಾಗಿ ಹೇಗೆ ಕಾಣಿಸುವುದು? ಇದೊಂದು ಕಗ್ಗಂಟಾದ ಸಮಸ್ಯೆಯಾಯಿತು. ಕೊನೆಗೆ ಪ್ರಸಿದ್ಧ ಮೇಕಪ್ ಕಲಾವಿದರಾಗಿದ್ದ ಎಂ.ಎಸ್. ಸುಬ್ಬಣ್ಣನವರು ಒಂದು ಸಲಹೆಯನ್ನು ನೀಡಿದರು. ಅಶ್ವತ್ಥ್‌ರವರಿಗೆ ಎರಡು ತುಟಿ ಮೀರಿ ನಿಂತ ಹಲ್ಲುಗಳನ್ನು ಇಡುವುದು. ಈ ಸಲಹೆ ಎಲ್ಲರಿಗೂ, ಮುಖ್ಯವಾಗಿ ಅಶ್ವತ್ಥ್‌ರವರಿಗೆ ಒಪ್ಪಿಗೆಯಾಯಿತು. ಮದರಾಸಿನಲ್ಲಿದ್ದ ಚೀನೀ ದಂತವೈದ್ಯರನ್ನು ಸಂಪರ್ಕಿಸಿ ಈ ಎರಡು ತುಟಿ ಮೀರಿ ನಿಂತ ಹಲ್ಲುಗಳನ್ನು ಸಿದ್ಧಪಡಿಸಿಕೊಂಡು ಬಂದರು. ಅವುಗಳನ್ನು ಜೋಡಿಸಿಕೊಂಡು ಬಂದ ಅಶ್ವತ್ಥ್‌ರವರನ್ನು ಕಂಡು ಹಿಡಿಯುವುದೇ ಕಷ್ಟವಾಯಿತು. ಅವರಿವರು ಯಾಕೇ, ಅಶ್ವತ್ಥ್‌ರವರಿಗೆ ಚಿರಪರಿಚಿತರಾಗಿದ್ದ ನಿರ್ದೇಶಕ ಎಮ್.ಆರ್. ವಿಠಲ್‌ರವರು ಚಿತ್ರೀಕರಣ ನಡೆಯುತ್ತಿದ್ದ ಸೆಟ್‌ಗೆ ಬಂದಾಗ, ಅವರಿಗೆ ಚದುರಂಗರವರು ಅಶ್ವತ್ಥ್‌ರವರನ್ನು ತಮ್ಮ ಚಿತ್ರದ ಹೊಸ ಕಲಾವಿದರೆಂದು ಪರಿಚಯಿಸಿದರು. ವಿಠ್ಠಲ್‌ರವರು ಅವರನ್ನು ಮೇಲಿನಿಂದ ಕೆಳಗಿನವರೆಗೆ ನೋಡಿದರು. ಊಹೂ ಅವರಿಗೆ ಅಶ್ವತ್ಥ್‌ರವರ ಪರಿಚಯ ಸಿಗಲೇ ಇಲ್ಲ. ನಂತರ ಅಶ್ವತ್ಥ್‌ರವರೇ ತಮ್ಮ ಹಲ್ಲುಗಳನ್ನು ತೆಗೆದು ತಮ್ಮ ನಿಜರೂಪವನ್ನು ತೋರಿಸಿದರು. ಅಷ್ಟು ನೈಜವಾಗಿತ್ತು, ಅವರ ಮೇಕಪ್. ಅಷ್ಟೇ ಅಲ್ಲ, ಚಿತ್ರದಲ್ಲಿ ಅವರ ಅಭಿನಯವೂ ಅಷ್ಟೇ ಚೆನ್ನಾಗಿ ಮೂಡಿಬಂದಿತ್ತು. ಕಸ್ತೂರಿ ನಿವಾಸದಲ್ಲಿ ಇವರ ಸೇವಕ ರಾಮಯ್ಯನ ಪಾತ್ರವು ಸಹ ಚಿರಕಾಲ ನೆನಪಲ್ಲಿ ಉಳಿಯುವಂತಹದು.

ಮುತ್ತಿನಹಾರ ದಲ್ಲಿ ಅಜ್ಜನಪಾತ್ರದಲ್ಲಿ ಸೋಡಾ ಗ್ಲಾಸು ಹಾಕಿಕೊಂಡು ಮಂಕಿಟೋಪಿ, ಮೈ ತುಂಬ ಸ್ವೆಟರ್ ಹಾಕಿಕೊಂಡು ಮೊಮ್ಮಗನನ್ನು ನೋಡಲು ದೇಶದ ಗಡಿಯಾಚೆ ಹೋದಾಗ ಅಲ್ಲಿ ಅವನು ಸತ್ತಿರುವ ಸುದ್ದಿ ತಿಳಿದು ಇವರು ಪಡುವ ಪರಿತಾಪ, ನಂತರದ ಅವರ ಪ್ರಾಣ ತ್ಯಾಗ ಮನ ಮಿಡಿಯುವಂತಹದು.

ಹೀಗೆ ಎಲ್ಲ ರೀತಿಯ ಪೋಷಕ ಪಾತ್ರಗಳಲ್ಲಿಯೂ ಅತ್ಯುತ್ತಮ ಅಭಿನಯವನ್ನೇ ನೀಡುತ್ತ ಬಂದರು. ಅಭಿನಯದ ವಿಷಯದಲ್ಲಿ ಅವರು ಅಚ್ಚುಕಟ್ಟು. ಪಾತ್ರಗಳ ಮೂಲಕ ಪರಕಾಯ ಪ್ರವೇಶ ಮಾಡುವ ಕಲೆ ಅವರಿಗೆ ಕರಗತವಾಗಿದ್ದಿತು.

ಉಯ್ಯಾಲೆಯ ಶೇಷಗಿರಿ, ಬೆಳ್ಳಿಮೋಡದ ಸದಾಶಿವರಾಯ ಇವರ ಉತ್ತಮ ಪಾತ್ರನಿರ್ವಹಣೆಗೆ ದೊರಕಿದ ಚಿತ್ರಗಳು. ಗೆಜ್ಜೆ ಪೂಜೆ, ಶರಪಂಜರ, ಆರು ಮೂರು ಒಂಬತ್ತು, ಚಂದನದ ಗೊಂಬೆ ಇವೇ ಮುಂತಾದ ಚಿತ್ರಗಳಲ್ಲಿಯೂ ಇವರು ವಹಿಸಿದ ಪಾತ್ರಗಳು ನೆನಪಿನಲ್ಲಿಡುವಂತಹುದಾಗಿವೆ.

ಇಂತಹ ಮಹಾನ್ ಪೋಷಕ ನಟನಿಗೆ ಪ್ರಪ್ರಥಮವಾಗಿ ತುಮಕೂರು ವಿಶ್ವವಿದ್ಯಾಲಯದ ಮೊದಲ ಘಟಿಕೋತ್ಸವದಲ್ಲಿಯೇ ಗೌರವ ಡಾಕ್ಟರೇಟ್ ಪದವಿಯನ್ನು ಪ್ರಧಾನ ಮಾಡಲಾಯಿತು, ಸಿದ್ಧಗಂಗಾ ಮಠದ ಡಾ. ಶ್ರೀ ಶಿವಕುಮಾರ ಸ್ವಾಮೀಜಿ ಮತ್ತು ವಿಶ್ರಾಂತ ಕುಲಪತಿ ಪ್ರೊ. ಶೇಕ್ ಆಲಿ ಅವರೊಂದಿಗೆ ಗೌರವ ಡಾಕ್ಟರೇಟ್ ಪದವಿ ಪಡೆದರು.

ಈ ಪದವಿ ಪಡೆದ ಸಂತಸದಲ್ಲಿ ಅವರು ಹೇಳಿದ್ದು ಹೀಗೆ: "ಈ ಪದವಿ ದೊರಕುವುದೆಂದು ನಾನು ಯಾವತ್ತೂ ನಿರೀಕ್ಷೆಯನ್ನೇ ಇಟ್ಟುಕೊಂಡಿರಲಿಲ್ಲ. ಆದರೂ ವಿಶ್ವವಿದ್ಯಾಲಯ ನೀಡಿರುವ ಈ ಗೌರವದಿಂದ ನನಗೆ ಅತೀವ ಸಂತೋಷವಾಗಿದೆ. ಹೊಟ್ಟೆ ಪಾಡಿಗೆ ಚಿತ್ರರಂಗಕ್ಕೆ ಕಾಲಿಟ್ಟ ಕಲಾವಿದನೊಬ್ಬನಾದ ನಾನು ನಿರ್ದೇಶಕರು ಹಾಗೂ ನಿರ್ಮಾಪಕರು ಸೃಷ್ಟಿಸಿದ ಪಾತ್ರಕ್ಕೆ ನೀಡಲು ಪ್ರಯತ್ನ ಪಡುತ್ತೇನೆ ಅಷ್ಟೆ".

ಜನಮಾನಸದ ಮೇಲೆ ಅಶ್ವತ್ಥ್‌ರ ಅಭಿನಯದ ಪರಿಣಾಮ

ಅಶ್ವತ್ಥ್‌ರವರು ಅಭಿನಯಿಸುತ್ತಿದ್ದ "ಮೃತ್ಯುಪಂಜರದಲ್ಲಿ ಗೂಢಚಾರಿ"ಯ ಚಿತ್ರೀಕರಣ ಮೈಸೂರಿನ ಪ್ರೀಮಿಯರ್ ಸ್ಟುಡಿಯೋದಲ್ಲಿ ನಡೆಯುತ್ತಿತ್ತು. ಆ ಸಮಯದಲ್ಲಿ ಒಬ್ಬ ವ್ಯಕ್ತಿ ಅವರ ಬಳಿ ಬಂದು ಒಂದೇ ಸಮನೆ ಅದೂ ಇದೂ ಪಶ್ನೆಗಳನ್ನು ಕೇಳಲಾರಂಭಿಸಿದ. ಈ ಚಿತ್ರದಲ್ಲಿ ನಟಿಸುತ್ತಿರುವ ನಟ ನಟಿಯರು ಯಾರು? ಎಂದು ಕೇಳಿದ. ಅವನ ಪ್ರಶ್ನೆಗಳಿಗೆ ಬೇಸತ್ತು ಅವನಮೇಲೆ ರೇಗಿದರೂ ಅವನು ಇವರನ್ನು ಪದೇ ಪದೇ ಏನಾದರೂ ಕೇಳುತ್ತಲೇ ಇದ್ದ. ಕೊನೆಗೆ ಇವರ ಮನೆಯ ವಿಳಾಸವನ್ನು ಕೇಳಿದ. ಸೈರಣೆ ಕಳೆದುಕೊಂಡ ಇವರು ಸದ್ಯ ಇವನು ಹೋದರೆ ಸಾಕು ಎಂದು ತಮ್ಮ ಮನೆಯ ವಿಳಾಸವನ್ನು ಕೊಟ್ಟು ಅವನನ್ನು ಸಾಗ ಹಾಕಿದರು. ಮಾರನೆಯ ದಿನ ಬೆಳಿಗ್ಗೆ ಇವರು ಚಿತ್ರೀಕರಣಕ್ಕೆ ಹೋಗಲು ತಯಾರಾಗುತ್ತಿದ್ದಾಗ ಮತ್ತೆ ಮನೆಯ ಹತ್ತಿರ ಹಾಜರು. ತಾನು ಹಿಂದಿನ ದಿನ ಅವರಲ್ಲಿಗೆ ಬಂದಿದ್ದನ್ನು ಇವರಿಗೆ ಜ್ಞಾಪಿಸಿದ. ಇವರಿಗೆ ಬರುತ್ತಿದ್ದ ಕೋಪವನ್ನು ತಡೆದುಕೊಂಡು ಅವನು ಪದೆ ಪದೆ ಬರುತ್ತಿರುವ ಕಾರಣವನ್ನು ಕೇಳಿದರು.

ಆಗ ಅವನು ತನ್ನ ಜೇಬಿನಿಂದ ಮೆತ್ತಗೆ ಒಂದು ಪೊಟ್ಟಣದಲ್ಲಿದ್ದ ಚಿನ್ನದ ಸರವನ್ನು ತೆಗೆದು "ಸಾರ್, ಈ ಚಿನ್ನದ ಸರವನ್ನು ತಾವು ಹಾಕಿಕೊಳ್ಳಬೇಕು ಸಾರ್" ಎಂದು ಹೇಳಿದ. ಅಶ್ವತ್ಥ್‌ರವರಿಗೆ ಶಾಕ್ ಆಗಿಹೋಯಿತು.

"ನನಗ್ಯಾಕಪ್ಪ ಈ ಚಿನ್ನದ ಸರ?" ಎಂದು ಕೇಳಿದರು.

"ನಿಮಗೇಂತಲೇ ಸರ್, ಇದನ್ನು ಮಾಡಿಸಿದ್ದು. ಹೋದ ವರ್ಷವೇ ಮಾಡಿಸಿದ್ದೆ. ತಮಗೆ ಆಗ ಕೊಡಲಾಗಲಿಲ್ಲ. ದಯವಿಟ್ಟು ಒಪ್ಪಿಸಿಕೊಳ್ಳಿ" ಎಂದು ಕೇಳಿಕೊಂಡ. ಬೇಡ ಬೇಡವೆಂದರೂ ಅವನು ಬಿಡಲೊಲ್ಲ, ಇವರು ಪಡೆಯಲೊಲ್ಲರು.

"ದಯವಿಟ್ಟು ನನಗೆ ನಿರಾಶೆ ಮಾಡಬೇಡಿ ಸಾರ್, ನಿಮ್ಮನ್ನು ನೋಡಿದರೆ ನಮ್ಮ ತಂದೇನ ನೋಡಿದ ಜ್ಞಾಪಕ ಬರುತ್ತೆ ಸಾರ್, ಅದಕ್ಕೇ ನೀವು ಅಭಿನಯಿಸಿದ ಚಿತ್ರಗಳನ್ನೆಲ್ಲ ಎರಡು ಮೂರು ಸಾರಿ ನೋಡ್ತೀನಿ ಸಾರ್, ನಿಮ್ಮನ್ನು ನೋಡಿ ನಿಮಗಿದನ್ನು ಕೊಟ್ಟು ಹೋಗೋಣವೆಂದು ಹೋದ ವರ್ಷದಿಂದಾನೂ ಬರ್ತಿದೀನಿ. ನೀವು ಸಿಕ್ಕಿರಲಿಲ್ಲ. ಈಗ ಸಿಕ್ಕಿದ್ದೀರಿ. ದಯವಿಟ್ಟು ನನಗೆ ನಿರಾಶೆ ಮಾಡಬೇಡಿ" ಎಂದು ಅತ್ತುಕೊಂಡು ಕೇಳಿಕೊಂಡ. ಅಶ್ವತ್ಥ್‌ರಿಗೂ ಅವನಿಗೆ ತಮ್ಮ ಮೇಲಿದ್ದ ಅಭಿಮಾನ, ಅವನಲ್ಲಿದ್ದ ಆರ್ದ್ರತೆ ಇವೆಲ್ಲವನ್ನು ಕಂಡು ಹೃದಯ ತುಂಬಿ ಬಂದಿತು. ಅವನ ಮೇಲೆ ವಿನಾ ಕಾರಣ ಕೋಪ ಮಾಡಿಕೊಂಡಿದ್ದಕ್ಕೆ ತಮ್ಮ ಮೇಲೆ ತಮಗೇ ಕೋಪ ಬಂದಿತು. ತಾವು ಅವನೊಂದಿಗೆ ಒರಟಾಗಿ ನಡೆದುಕೊಂಡಿದ್ದಕ್ಕೆ ಅವನ ಕ್ಷಮೆ ಕೋರಿದರು.

ಹೀಗಿತ್ತು ಅಶ್ವತ್ಥ್‌ರವರ ಪಾತ್ರಗಳು ಪ್ರೇಕ್ಷಕರ ಮೇಲೆ ಬೀರುತ್ತಿದ್ದ ಪರಿಣಾಮ.

ಕಾರು ಬೇಡ - ಟಾಂಗಾ ಸಾಕು

ಅಶ್ವತ್ಥ್‌ರವರು ಯವಾಗಲೂ ಸರಳ ರೀತಿಯ ಜೀವನಕ್ಕೆ ಒಲವು ತೋರಿದವರು. ಸರಳರಲ್ಲಿ ಸರಳರಾಗಿ ಬದುಕಿದವರು. ಅವರ ಬಳಿ ಮೊಬೈಲ್ ಫೋನ್ ಇರಲಿಲ್ಲ. ಕಾರೂ ಇರಲಿಲ್ಲವೆಂದರೆ ಯಾರಿಗೂ ನಂಬಲು ಆಗುವುದಿಲ್ಲ ಆದರೆ ಇದು ಮಾತ್ರ ಸತ್ಯ.

ಕಾರುಗಳ ಬಗ್ಗೆ ಎಲ್ಲರಿಗೂ ಆಸೆ ಇದ್ದರೆ ತಮಗೆ ಟಾಂಗಾ ಗಾಡಿಯೇ ಸಾಕು ಎನ್ನುತ್ತಿದ್ದರು. ಕಾರನ್ನು ನಮ್ಮಂತಹವರು ನಿರ್ವಹಣೆ ಮಾಡುವುದು ಕಷ್ಟ. ಹಾಗಾಗಿ ನಮ್ಮಂತಹವರಿಗೆ ಟಾಂಗಾನೇ ಸರಿ ಇದರಿಂದ ಟಾಂಗಾ ಓಡಿಸುವವರಿಗೂ ಕೆಲಸ ಸಿಗುತ್ತದೆ. ಎನ್ನುವುದು ಅವರ ಅಭಿಪ್ರಾಯವಾಗಿತ್ತು. ಅವರು ಮೈಸೂರಿನಲ್ಲಿ ಇದ್ದಾಗಲೆಲ್ಲ ತುಂಬಾ ವರ್ಷಗಳ ಕಾಲ ಟಾಂಗಾ ಗಾಡಿಯಲ್ಲಿಯೇ ಪ್ರಯಾಣ ಮಾಡುತ್ತಿದ್ದರು. ಮನೆಯಿಂದ ರೈಲು ನಿಲ್ದಾಣ ಅಥವಾ ಬಸ್ ನಿಲ್ದಾಣ ಅಥವಾ ಇನ್ನು ಯಾವುದೇ ಸ್ಥಳಕ್ಕೆ ಹೋಗಬೇಕಾದರೂ ಅವರು ಟಾಂಗಾ ಗಾಡಿಯನ್ನೇ ಉಪಯೋಗಿಸುತ್ತಿದ್ದರು.

ಬಸ್ಸು, ಆಟೋ ರಿಕ್ಷಾದಲ್ಲಿ ಪ್ರಯಾಣಿಸಿದರೆ ನಾವು ಕೊಡುವ ದುಡ್ಡು ಬೆಂಕಿಯಲ್ಲಿ ಸುಟ್ಟಂತೆ ಆಗುತ್ತದೆ. ಅದೇ ಟಾಂಗಾ ಗಾಡಿಯಲ್ಲಿ ಪ್ರಯಾಣ ಮಾಡಿದರೆ ಒಂದು ಕುದುರೆಯನ್ನು ಪೋಷಿಸಿದಂತೆ, ಟಾಂಗಾವಾಲಾ ಮತ್ತು ಅವನ ಕುಟುಂಬಕ್ಕೆ ಉಪಕಾರ ಮಾಡಿದಂತೆ ಆಗುತ್ತದೆ. ಎಂದು ಹೇಳುತ್ತಿದ್ದರು.

ಹೀಗೆ ಟಾಂಗಾವಾಲಾಗಳ ಮೇಲೆ ಅನುಕಂಪ ತೋರಿಸುತ್ತಿದ್ದ ಅವರ ಮೇಲೆ ಟಾಂಗಾವಾಲಾಗಳಿಗೂ ಅಷ್ಟೇ ಮಮತೆ. ಅವರು ನಿಧನರಾದಾಗ ಅವರು ಪ್ರಯಾಣಕ್ಕೆ ಉಪಯೋಗಿಸುತ್ತಿದ್ದ ಟಾಂಗಾದ ಮಾಲೀಕ ತಂಗಲ್ ಪಾಷಾ ಅವರು ಅಂತಿಮ ದರ್ಶನ ಪಡೆಯಲು ಬಂದಿದ್ದು ಅವರ ಸ್ನೇಹಪರತೆಗೆ ಒಂದು ನಿದರ್ಶನ.

ಅಶ್ವತ್ಥ್‌ರ ಮನೆಯಲ್ಲಿ ನಾಯಿಗೊಂದು ಸಮಾಧಿ - ನಿತ್ಯ ಪೂಜೆ

ಅಶ್ವತ್ಥ್‌ರ ಮನೆಯಲ್ಲಿ ನಾಯಿಯೊಂದನ್ನು ಸಾಕಿದ್ದರು. ಅದರ ಹೆಸರು ರಾಕಿ ಎಂದು. ಆದರೆ ಅದು ಅವರ ಮನೆಯಲ್ಲಿ ಒಂದು ಪ್ರಾಣಿಯಂತೆ ಇರಲಿಲ್ಲ. ಅವರ ಮಕ್ಕಳಂತೆ ಒಂದು ಕುಟುಂಬದ ಸದಸ್ಯನಾಗಿತ್ತು. ಕುಟುಂಬದ ಎಲ್ಲ ಸದಸ್ಯರ ಆತ್ಮೀಯತೆಯನ್ನೂ ಪ್ರೀತಿಯನ್ನೂ ಪಡೆದಿದ್ದ ಅದು ಬದುಕಿದ್ದು ಎಂಟು ವರ್ಷಗಳ ಕಾಲ. ಮನೆ ಮಂದಿಯೆಲ್ಲರ ಅಚ್ಚು ಮೆಚ್ಚಿನ ಸಂಗಾತಿಯಾಗಿತ್ತು. ಆದರೆ ೧೯೮೮ರಲ್ಲಿ ಕಾಯಿಲೆಬಂದು ನರಳಿತು. ಯಾವುದೇ ಔಷಧೋಪಚಾರ ಮಾಡಿದರೂ ಅದು ಬದುಕುಳಿಯಲಿಲ್ಲ. ಅದರ ಸಮಾಧಿಯನ್ನು ಮನೆಯಂಗಳದಲ್ಲಿಯೇ ಮಾಡಿದರು. ಮತ್ತೂ ಆಶ್ಚರ್ಯವೆಂದರೆ ಅದರ ಸಮಾಧಿಯ ಮೇಲೆಯೇ ತುಳಸಿ ಕಟ್ಟೆ ಕಟ್ಟಿದರು. ಹಾಗಾಗಿ ಅದಕ್ಕೆ ನಿತ್ಯಪೂಜೆ ನಡೆಯುತ್ತಿದೆ.

ಶಿಸ್ತಿನ ಸಿಪಾಯಿ

ಅಶ್ವತ್ಥ್‌ರವರನ್ನು ಶಿಸ್ತಿನ ಸಿಪಾಯಿ ಎಂದೇ ಹೇಳಬಹುದು. ನಟನೆಯಲ್ಲೂ ಶಿಸ್ತು, ಜೀವನದಲ್ಲೂ ಶಿಸ್ತು. ಚಿತ್ರೀಕರಣದಲ್ಲಿ ನಿಗದಿತ ಸಮಯಕ್ಕೆ ಶೂಟಿಂಗ್‌ಗೆ ಹಾಜರಾಗುತ್ತಿದ್ದರು. ಶೂಟಿಂಗ್‌ಗೆ ಕರೆದುಕೊಂಡು ಹೋಗಲು ವಾಹನ ಬರುತ್ತಿದ್ದ ಸಮಯಕ್ಕೆ ೫ ನಿಮಿಷ ಮುಂಚೆಯೇ ಹೊರಡಲು ಸಿದ್ಧವಾಗಿ ಕಾದಿರುತ್ತಿದ್ದರು. ಯಾವತ್ತೂ ವಾಹನವನ್ನು ತಮಗಾಗಿ ಕಾಯುವಂತೆ ಮಾಡುತ್ತಿರಲಿಲ್ಲ. ಅಷ್ಟೇ ಅಲ್ಲ, ಕಾರಿನ ಚಾಲಕನೇನಾದರೂ ಮುಂಚೆ ಬಂದರೆ ನಿಗದಿತ ಸಮಯಕ್ಕೇ ಹೊರಡುತಿದ್ದರೇ ಹೊರತು ಮುಂಚೆಯೂ ಹೋಗುತ್ತಿರಲಿಲ್ಲ.

ಅವರು ತಾಳ್ಮೆಗೆ ಹೇಳಿ ಮಾಡಿಸಿದ ವ್ಯಕ್ತಿ. ಯಾವತ್ತಿಗೂ ಜೋರಾಗಿ ಮಾತನಾಡುತಿರ್ತಲಿಲ್ಲ. ಯಾರನ್ನೂ ದ್ವೇಷಿಸುತ್ತಿರಲಿಲ್ಲ. ಕಾಯಕವೇ ದೇವರು. ಹಾಗಾಗಿ ಕಾಯಕವನ್ನು ಪೂಜಿಸಬೇಕು ಎಂದು ಹೇಳುತ್ತಿದ್ದರು.

ಅತ್ಯಂತ ಸರಳ ಸಜ್ಜನಿಕೆಯ ವ್ಯಕ್ತಿ-ಸ್ನೇಹ ಜೀವಿ-ಮಾರ್ಗದರ್ಶಿ. ದುರಾಸೆಯೇ ಇಲ್ಲದ ಅಲ್ಪ ತೃಪ್ತ. ಪ್ರಾಮಾಣಿಕತೆಯನ್ನೇ ಮೈಗೂಡಿಸಿಕೊಂಡಿದ್ದವರು. ಬೇರೆಯವರ ವಿಚಾರದಲ್ಲಿ ಎಂದಿಗೂ ಮೂಗು ತೂರಿಸುತ್ತಿರಲಿಲ್ಲ.

ಚಿತ್ರರಂಗಕ್ಕೆ ವಿದಾಯ ಹೇಳಿದ ಅಶ್ವತ್ಥ್

೧೯೫೪ರಲ್ಲಿ ಕನ್ನಡ ಚಿತ್ರರಂಗಕ್ಕೆ ನಾಯಕನಟನಾಗಿ ಪ್ರವೇಶಿಸಿ ನಂತರ ಪೋಷಕನಟನಾಗಿ ಸರಿ ಸುಮಾರು ನಾಲ್ಕು ದಶಕಗಳ ಕಾಲ ಚಿತ್ರರಂಗದಲ್ಲಿ ದುಡಿದ ಅಶ್ವತ್ಥ್‌ರವರು ಮೇ, ೩೧, ೧೯೯೪ರಂದು ನಿವೃತ್ತಿ ಘೋಷಿಸಿದರು. ಚಿತ್ರರಂಗದ ನಿರುತ್ಸಾಹಕ ವಾತಾವರಣ, ನಿರ್ಜೀವ ಪಾತ್ರಗಳ ಸಂತೆಯಿಂದ ಜಿಗುಪ್ಸೆಗೊಂಡಿರುವುದು, ಅಲ್ಲದೆ ತಮ್ಮ ಏಕಾಗ್ರತೆ ಕುಸಿಯುತ್ತಿರುವುದು ತಮ್ಮ ನಿರ್ಧಾರಕ್ಕೆ ಕಾರಣ ಎಂದು ಹೇಳಿದರು.

ಅಭಿನಯ ಕಲೆಯನ್ನು ಹಗುರವಾಗಿ ತೆಗೆದುಕೊಳ್ಳದೆ, ಕಲೆಯಲ್ಲಿ ಭಗವಂತನನ್ನು ಆರಾಧಿಸುತ್ತ, ತಮ್ಮ ಕಲಾಭಿಮಾನಿಗಳಲ್ಲಿ ಗೌರವವನ್ನೂ ಅಭಿಮಾನವನ್ನೂ ಪಡೆದಿದ್ದರು. ಪೋಷಕನಟರಾಗಿದ್ದರೂ ಸಹ, ಯಾವುದೆ ನಾಯಕನಟನಿಗಿಂತಲೂ ಕಡಿಮೆ ಇಲ್ಲದಂತೆ ಅಭಿಮಾನಿಗಳ ಒಲವು, ಪ್ರೀತಿ, ವಿಶ್ವಾಸವನ್ನು ಗಳಿಸಿದ್ದರು.

ಇಂತಹವರು ಏಕಾಏಕಿ ಚಿತ್ರಜಗತ್ತಿನಿಂದ ವಿದಾಯ ಘೋಷಿಸಿದರೆ ಅವರ ಅಭಿಮಾನಿಗಳಿಗೆ ಆಘಾತವುಂಟಾಗದಿದ್ದೀತೆ? ಅವರ ಅಭಿಮಾನಿಗಳು ಅವರ ಅಭಿಪ್ರಾಯಕ್ಕೆ ವಿರೋಧ ವ್ಯಕ್ತಪಡಿಸಿದರು. ಸಭೆ ಸಮಾರಂಭಗಳಲ್ಲಿ ಪತ್ರಿಕೆಗಳಲ್ಲಿ ತಮ್ಮ ಒತ್ತಾಯವನ್ನು ವ್ಯಕ್ತಪಡಿಸಿ ಅಶ್ವತ್ಥ್‌ರವರು ತಮ್ಮ ನಿರ್ಧಾರವನ್ನು ಹಿಂದಕ್ಕೆ ಪಡೆಯಬೇಕೆಂದು ಆಗ್ರಹಪಡಿಸಿದರು. ಇಲ್ಲದಿದ್ದರೆ ಅವರ ಮನೆಯ ಮುಂದೆ ಧರಣಿ ಸತ್ಯಾಗ್ರಹ ಮಾಡುವುದಾಗಿ ಬೆದರಿಕೆ ಹಾಕಿದರು. ಬಹುಶಃ ಒಬ್ಬ ಪೋಷಕನಟನಿಗೆ ಇಷ್ಟರ ಮಟ್ಟಿಗಿನ ಅಭಿಮಾನಿವೃಂದ ಇದ್ದುದು ಕೇವಲ ಅಶ್ವತ್ಥ್‌ರವರಿಗೆ ಮಾತ್ರ ಎಂದು ಕಾಣುತ್ತದೆ. ಆದರೇನು? ಅಭಿಮಾನಿಗಳ ಈ ಆಗ್ರಹ ಒಬ್ಬ ಕಲಾವಿದ ಹಾಗೂ ಅವರ ಅಭಿಮಾನಿಗಳ ನಡುವೆಯ ಸಂಬಂಧ ಇತಿಹಾಸದಲ್ಲಿಯೇ ಒಂದು ಹೊಸ ಅಧ್ಯಾಯವನ್ನು ಪ್ರಾರಂಭಿಸಿತೆಂದು ಹೇಳಬಹುದು. ಅವರು ಮಾತ್ರ ತಮ್ಮ ನಿರ್ಧಾರದಿಂದ ಹಿಂದಕ್ಕೆ ಸರಿಯುವುದಿಲ್ಲವೆಂದು ಸ್ಪಷ್ಟವಾಗಿ ತಿಳಿಸಿಬಿಟ್ಟರು.

ಹೌದು. ಅಶ್ವತ್ಥ್‌ರ ಈ ಅಚಲವಾದ ನಿರ್ಧಾರಕ್ಕೆ ಕಾರಣವಾದರೂ ಏನಿರಬಹುದು ಎಂದು ಯೋಚಿಸಿದಾಗ ಹಲವಾರು ಊಹಾಪೋಹಗಳು ಕಾರಣವಾಗಬಹುದೇ ಹೊರತು, ಸ್ಪಷ್ಟವಾದ ನಿಖರವಾದ ಕಾರಣಗಳೂ ಯಾವುದೂ ಗೋಚರಿಸಲಿಲ್ಲ.

ಆದರೆ ಅಶ್ವತ್ಥ್‌ರವರೇ ಹೇಳಿದಂತೆ, ಅವರಲ್ಲಿನ ಹಲವಾರು ನ್ಯೂನತೆಗಳು ಅವರಿಗೇ ಗೋಚರವಾಯಿತಂತೆ. ಹೆಚ್ಚಿನ ಆಯಾಸ, ಬಳಲಿಕೆಯನ್ನು ಈ ಹಿಂದಿನಂತೆ ತಡೆದುಕೊಳ್ಳಲಾಗುತ್ತಿಲ್ಲ. ಹಿಂದೆ ಸುಲಭವಾಗಿ ಮಾಡಬಹುದಾಗಿದ್ದುದನ್ನು ಮಾಡಲು ಈಗ ಕಷ್ಟವಾಗುತ್ತಿದೆ. ಏಕಾಗ್ರತೆ ಕಡಿಮೆಯಾಗುತ್ತಿದೆ. ಈ ಎಲ್ಲ ಕಾರಣಗಳಿಂದ ನನಗೆ ವಿಶ್ರಾಂತಿಯ ಅಗತ್ಯತೆ ಇದೆ. ಹಾಗಾಗಿ ನಿವೃತ್ತಿ ಘೋಷಿಸುತ್ತಿದ್ದೇನೇ ಹೊರತು ಮತ್ತ್ಯಾವ ಕಾರಣವೂ ಇಲ್ಲ.

ಅವರು ಅಭಿನಯಿಸುತ್ತಿದ್ದ ಎಲ್ಲ ಪಾತ್ರಗಳಲ್ಲಿಯೂ ಅವರು ಆಯಾ ಪಾತ್ರಕ್ಕೆ ಜೀವ ತಂಬುತ್ತಿದ್ದರು. ಆ ಪಾತ್ರಗಳ ಒಳಹೊಕ್ಕು ಅಭಿನಯಿಸುತ್ತಿದ್ದರು. ಪಾತ್ರದ ವ್ಯಕ್ತಿಯು ತಾವೇ ಏನೋ ಎಂಬಂತೆ ಪಾತ್ರದಲ್ಲಿ ಲೀನವಾಗಿ ಹೋಗುತ್ತಿದ್ದರು. ಹಾಗಿರುತ್ತಿತ್ತು ಅವರ ಪಾತ್ರದಲ್ಲಿನ ಅವರ ತನ್ಮಯತೆ. ಅದಕ್ಕಾಗಿ ಅವರು ಸಾಕಷ್ಟು ಸಿದ್ಧತೆಯನ್ನು ನಡೆಸುತ್ತಿದ್ದರು. ತಮ್ಮ ಪಾತ್ರದ ವಿವರ ತಮ್ಮ ಪಾಲಿಗಿರುವ ಸಂಭಾಷಣೆ ಇವೆಲ್ಲವನ್ನು ಮುಂಚೆಯೇ ಪಡೆದುಕೊಂಡು, ಚಿತ್ರೀಕರಣಕ್ಕೆ ಮುಂಚೆ ಅವುಗಳನ್ನು ದೀರ್ಘವಾಗಿ ಮನಸ್ಸಿನಲ್ಲಿಯೇ ರೂಪಿಸಿಕೊಳ್ಳುತ್ತಿದ್ದರು. ಕೆಲವೊಮ್ಮೆ ಆ ಪಾತ್ರವನ್ನು ನಿರ್ವಹಿಸಬೇಕಾದ ೨-೩ ಬಗೆಯ ಅಭಿನಯವನ್ನು ತಮ್ಮ ನಿರ್ದೇಶಕರಿಗೆ ಮಾಡಿ

ತೋರಿಸುವ ಅಭ್ಯಾಸವನ್ನು ಇರಿಸಿಕೊಂಡಿದ್ದರು. ಅವುಗಳಲ್ಲಿ ಅತ್ಯುತ್ತಮವಾದುದನ್ನು ಪ್ರೇಕ್ಷಕರಿಗೆ ನೀಡುತ್ತಿದ್ದರು. ಹಾಗಾಗಿ ಅವರು ಅಭಿನಯಿಸಿದ ಯಾವುದೇ ಪಾತ್ರವಾದರೂ ಪ್ರೇಕ್ಷಕರಿಗೆ ಸಂಪೂರ್ಣ ತೃಪ್ತಿಯನ್ನು ನೀಡುತ್ತಿತ್ತು.

ಆದರೆ ಅಶ್ವತ್ಥ್‌ರು ತಮ್ಮ ನಿವೃತ್ತಿಯನ್ನು ಘೋಷಿಸುವ ಮುಂಚೆ ಯಾಕೊ ಅವರಿಗೆ ಈ ರೀತಿಯ ತನ್ಮಯತೆಯಿಂದ ಅಭಿನಯಿಸುವ ಅವಕಾಶಗಳು ಕಡಿಮೆಯಾಗುತ್ತಿವೆ ಎಂಬ ಭಾವನೆ ಬರಲು ಶುರುವಾಯಿತು.

ಮೋಡದ ಮರೆಯಲ್ಲಿ, ಅನುರಾಗದ ಅಲೆಗಳು ಮತ್ತು ಹೂವೊಂದು ಬೇಕು ಬಳ್ಳಿಗೆ ಈ ಮೂರು ಚಿತ್ರಗಳಲ್ಲಿ ಅವರು ಬಹಳ ಮಹತ್ವಾಕಾಂಕ್ಷೆಯನ್ನು ಇರಿಸಿಕೊಂಡಿದ್ದರು. ಈ ಚಿತ್ರಗಳಲ್ಲಿ ಬಹಳ ತನ್ಮಯತೆಯಿಂದ ಅಭಿನಯಿಸಿದ್ದರು. ಈ ಚಿತ್ರದಲ್ಲಿನ ತಮ್ಮ ಅಭಿನಯ ತಮಗೆ ಸಾರ್ಥಕ್ಯ ಭಾವವನ್ನು ತಂದುಕೊಟ್ಟಿದೆಯೆಂದು ಭಾವಿಸಿದ್ದರು. ಚಿತ್ರದ ಪ್ರತಿ ದೃಶ್ಯದ ಚಿತ್ರೀಕರಣವಾದಾಗಲೂ ಅವರಿಗೆ ಏನೋ ಸಾಧಿಸಿದ ಆತ್ಮಾನಂದ ದೊರಕಿದ ಹಾಗಾಗುತ್ತಿತ್ತು. ಪ್ರೇಕ್ಷಕವರ್ಗದಿಂದ ಉತ್ತಮ ಪ್ರತಿಕ್ರಿಯೆಯ ನಿರೀಕ್ಷೆಯಲ್ಲಿದ್ದರು. ಆದರೆ ಆಗಿದ್ದೇ ಬೇರೆ. ಗಲ್ಲಾಪೆಟ್ಟಿಗೆಯಲ್ಲಿ ಅವು ಸೋತವು. ತಾವು ಅತೀವ ಆತ್ಮವಿಶ್ವಾಸ, ಭರವಸೆ, ನಿರೀಕ್ಷೆ ಇರಿಸಿಕೊಂಡಿದ್ದ ಚಿತ್ರಗಳು ಪ್ರೇಕ್ಷಕರನ್ನು ತೃಪ್ತಿ ಪಡಿಸಲಿಲ್ಲ, ತಮ್ಮ ಅಭಿನಯ ಶಕ್ತಿ, ನಂಬಿಕೆ ತನ್ನ ಅಭಿಮಾನಿಗಳ ಮಧ್ಯೆ ಸೋತಿತಲ್ಲ ಎಂದು ವ್ಯಾಕುಲರಾದರು. ತಮ್ಮ ನಿವೃತ್ತಿಯ ಯೋಚನೆಯಿಂದ ಹಿಂದೆ ಸರಿಯುವ ನಿರ್ಧಾರವನ್ನು ಕೈಬಿಡುವ ಪ್ರಶ್ನೆಯೇ ಇಲ್ಲವೆಂದು ದೃಢ ನಿರ್ಧಾರವನ್ನು ತಾಳಿದರು. ಬಹುಶಃ ಈ ರೀತಿಯ ದಿಟ್ಟ ತೀರ್ಮಾನವನ್ನು ತೆಗೆದುಕೊಂಡ ನಟರಲ್ಲಿ ಅಶ್ವತ್ಥ್‌ರವರು ಅಪರೂಪವಾಗಿಯೇ ಉಳಿಯುತ್ತಾರೆ.

ಆದರೆ, ಪಾರ್ವತಮ್ಮ ರಾಜಕುಮಾರ್‌ರವರು ನಿರ್ಮಿಸಿದ 'ಶಬ್ದವೇಧಿ' ಚಿತ್ರದಲ್ಲಿ ನಟಿಸಲೇಬೇಕೆಂದು ಒತ್ತಾಯ ಬಂದಾಗ ಅದನ್ನು ಒಪ್ಪಿಕೊಂಡು ಆ ಚಿತ್ರದಲ್ಲಿ ಪಾತ್ರವಹಿಸಿದರು. ಪಾರ್ವತಮ್ಮನವರು ಅಶ್ವತ್ಥ್‌ರ ತೀರ್ಮಾನದಿಂದ ತಮಗಾದ ಸಂತೋಷವನ್ನು ವ್ಯಕ್ತಪಡಿಸುತ್ತ "ಅಶ್ವತ್ಥ್‌ರವರಷ್ಟು ರೋಚಕವಾಗಿ ಪಾತ್ರಗಳಿಗೆ ಜೀವ ತುಂಬುವ ಕಲಾವಿದರು ನಮ್ಮಲ್ಲಿ ಯಾರಿದ್ದಾರೆ? ಅಶ್ವತ್ಥ್ ಚಿತ್ರರಂಗಕ್ಕೆ ಮರಳಬೇಕಾದ ತೀವ್ರ ಅಗತ್ಯವಿತ್ತು. ಅವರ ಲಕ್ಷಾಂತರ ಅಭಿಮಾನಿಗಳಿಗೆ ಇದರಿಂದ ಬಹಳ ಸಂತೋಷವಾಗುತ್ತದೆ" ಎಂದು ಅವರ ನಿರ್ಧಾರವನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದರು.

ಗೋಕಾಕ್ ಚಳುವಳಿಯಲ್ಲೂ ಭಾಗವಹಿಸಿದ್ದ ಅಶ್ವತ್ಥ್

ಶಿಕ್ಷಣ ಕ್ಷೇತ್ರದಲ್ಲಿ ಕನ್ನಡ ಭಾಷೆಯ ಸ್ಥಾನಮಾನದ ಬಗ್ಗೆ - ೧೯೮೨ರಲ್ಲಿ ನಡೆದ ಐತಿಹಾಸಿಕ ಚಳುವಳಿ - ಗೋಕಾಕ್ ಚಳುವಳಿ. ಈ ಚಳುವಳಿ ಇದುವರೆಗೆ ನಡೆದ ಎಲ್ಲ ಕನ್ನಡ ಪರ ಚಳುವಳಿಗಳಲ್ಲಿ ಪ್ರಮುಖವಾದುದು. ಇದರಲ್ಲಿ ನಾಡಿನ ಹಿರಿಯ ಸಾಹಿತಿಗಳು,

ವಿದ್ವಾಂಸರು, ಕಾಲೇಜು ಉಪನ್ಯಾಸಕರು, ವಿದ್ಯಾರ್ಥಿಗಳು, ಒಂದೆ ಮಾತಿನಲ್ಲಿ ಹೇಳಬಹುದಾದರೆ, ರಾಜ್ಯದ ಸಮಸ್ತ ಜನರೂ ಒಮ್ಮನದಿಂದ-ಒಮ್ಮತದಿಂದ ಭಾಗವಹಿಸಿದ್ದ ಈ ಚಳುವಳಿ ಗೋಕಾಕ್‌ಚಳುವಳಿಯೆಂದೇ ಪ್ರಖ್ಯಾತವಾಗಿದೆ. ಕನ್ನಡ ಚಿತ್ರರಂಗದ ಎಲ್ಲ ನಟ ನಟಿಯರು ಕಲಾವಿದರು ಇದರಲ್ಲಿ ಭಾಗವಹಿಸಿದ್ದರು.

ಇಂತಹ ದೊಡ್ಡ ಅಪರೂಪದ ಹೋರಾಟಕ್ಕೆ ಡಾ. ರಾಜ್‌ಕುಮಾರರ ನಾಯಕತ್ವ ಸಿಕ್ಕಿದ ಮೇಲೆ ಇದರ ಕಾವು ರಾಜ್ಯದಾದ್ಯಂತ ಹಬ್ಬಿತು.

ಈ ಚಳುವಳಿಯಲ್ಲಿ ಅಶ್ವತ್ಥ್‌ರವರು ಕ್ರಿಯಾಶೀಲರಾಗಿ ಭಾಗವಹಿಸುತ್ತಿದ್ದರು. ಅವರು ಅಭಿಮಾನಪೂರಿತ ಕನ್ನಡ ಪರ ಮಾತುಗಳಿಂದ ಭಾಷಣ ಮಾಡುತ್ತಿದ್ದರು.

ಚಳುವಳಿಯ ಸಂಘಟಕರು ಮೈಸೂರಿನ ಯಾವುದೇ ಭಾಗದಲ್ಲಿ ಸಭೆಗಳನ್ನು ಏರ್ಪಡಿಸಿದರೂ ತಪ್ಪದೆ ಅಲ್ಲಿ ಅವರು ಹಾಜರಿರುತ್ತಿದ್ದರು.

ಅಷ್ಟೇ ಅಲ್ಲ, ಅವಕಾಶ ಸಿಕ್ಕಿದಾಗಲೆಲ್ಲ ನಾಡು ನುಡಿಯ ಬಗ್ಗೆ ಅಭಿಮಾನಪೂರ್ವಕವಾಗಿ ಮಾತನಾಡುತ್ತಿದ್ದರು. "ಕನ್ನಡ ಭಾಷೆ ಬೆಳೆಸಬೇಕು, ಅದು ಕಾಲೇಜು ಪಠ್ಯ ಪುಸ್ತಕದಿಂದ ಕಲಿಯುವಂತಹುದಲ್ಲ. ಅಂತರಂಗದಲ್ಲಿ ಬೆಳೆಯಬೇಕು. ಪ್ರತಿಯೊಬ್ಬರೂ ಆ ಪ್ರೀತಿಯನ್ನು ಬೆಳೆಸಿಕೊಳ್ಳಬೇಕು" ಎಂದು ಹೇಳುತ್ತಿದ್ದರು.

ಅಶ್ವತ್ಥ್‌ರವರ ನಾಯಕಿಯರು

ಅಶ್ವತ್ಥ್‌ರವರ ಜೊತೆಯಲ್ಲಿ ಹಲವಾರು ನಾಯಕಿಯರು ಅಭಿನಯಿಸಿದ್ದಾರೆ. ಅದರಲ್ಲಿ ಅಶ್ವತ್ಥ್-ಪಂಡರಿಬಾಯಿ, ಅಶ್ವತ್ಥ್-ಲೀಲಾವತಿ, ಜೋಡಿ ಚಿತ್ರರಂಗದ ಇತಿಹಾಸದಲ್ಲಿಯೇ ಅತ್ಯಂತ ಪ್ರಸಿದ್ಧ ಪೋಷಕ ಜೋಡಿಯಾಗಿತ್ತು. ಅಶ್ವತ್ಥ್-ಆದವಾನಿ ಲಕ್ಷ್ಮೀದೇವಿ, ಅಶ್ವತ್ಥ್-ಜಯಶ್ರೀ ಕೂಡಾ ಹಲವಾರು ಚಿತ್ರಗಳಲ್ಲಿ ಜೊತೆಯಾಗಿ ಅಭಿನಯಿಸಿದ್ದರು.

ಅರವತ್ತು ಎಪ್ಪತ್ತರ ದಶಕದಲ್ಲಿ ಕನ್ನಡ ಚಿತ್ರರಂಗದಲ್ಲಿ ಕೌಟುಂಬಿಕ ಚಿತ್ರಗಳು ಚಿತ್ರ ರಸಿಕರ ಮನಸೂರೆಗೊಂಡಿದ್ದವು. ಅದರಲ್ಲಿಯೂ ಅಶ್ವತ್ಥ್-ಪಂಡರಿಬಾಯಿಯವರು ಅಂತಹ ಚಿತ್ರಗಳಲ್ಲಿ ತಂದೆ ತಾಯಿಯ ಪಾತ್ರಗಳಿಗೆ ಹೇಳಿಮಾಡಿಸಿದಂತಿದ್ದರು. ಈ ಎರಡೂ ಪಾತ್ರಗಳಿಗೂ ಅವರು ಜೀವ ತುಂಬುತ್ತಿದ್ದರು. ಅಶ್ವತ್ಥ್ ಪಂಡರಿಬಾಯಿ ಜೋಡಿ ಮೋಡಿ ಮಾಡಿತ್ತು. ಎಂದರೆ ಅತಿಶಯೋಕ್ತಿಯಾಗಲಾರದು.

ಅಶ್ವತ್ಥ್ ಅವರು ಪಂಡರಿಬಾಯಿಯವರೊಡನೆ ಸುಮಾರು ೩೫ ಚಿತ್ರಗಳಿಗೂ ಮೀರಿ ಅಭಿನಯಿಸಿದ್ದಾರೆ. ಅವರಿಬ್ಬರ ಜೋಡಿ ಆರಂಭವಾಗಿದ್ದು ತೇಜಸ್ವಿನಿ ಚಿತ್ರದ ಮೂಲಕ. ಅಶ್ವತ್ಥ್-ಪಂಡರಿಬಾಯಿ, ಜೋಡಿ ಎಷ್ಟರ ಮಟ್ಟಿಗೆ ಜನಪ್ರಿಯವಾಗಿತ್ತೆಂದರೆ ಅವರಿಬ್ಬರೂ

ನಿಜ ಜೀವನದಲ್ಲಿಯೂ ದಂಪತಿಗಳಾಗಿದ್ದಾರೆ ಎಂದು ಹುಸಿ ಸುದ್ದಿಯನ್ನು (ಗಾಸಿಪ್) ಹಬ್ಬಿಸಿ ಬಿಟ್ಟಿದ್ದರು.

ಅದೇ ವೇಳೆಗೆ ಸರಿಯಾಗಿ ಪಂಡರಿಬಾಯಿಯವರ ಮದುವೆ ನಿಶ್ಚಿತಾರ್ಥವಾಯಿತು. ವರ ಯಾರೆಂದು ತಿಳಿಯದ ಜನ ಅಶ್ವತ್ಥ್ ಅವರ ಹೆಸರಿನ ಜೊತೆಗೆ ಪಂಡರಿಬಾಯಿಯವರ ಹೆಸರನ್ನೂ ಸೇರಿಸಲು ಶುರುಮಾಡಿದರು. ಈ ವಿಷಯದ ಬಗ್ಗೆ ಯಾವುದೇ ಸ್ಪಷ್ಟೀಕರಣ ನೀಡಿದರೂ ಈ ಗುಲ್ಲು ನಿಲ್ಲಲಿಲ್ಲ, ಕಡೆಗೆ ಪಂಡರಿಬಾಯಿಯವರ ವಿವಾಹ ರಾಮರಾಯರೊಂದಿಗೆ ನಡೆದ ಮೇಲೆ ಈ ಗಾಸಿಪ್‌ಗೆ ವಿರಾಮ ಬಿತ್ತು.

ಈ ಬಗ್ಗೆ ಅಶ್ವತ್ಥ್‌ರವರು ಪಂಡರಿಬಾಯಿಯವರ ಬಗ್ಗೆ ತಾವು ಇರಿಸಿಕೊಂಡಿದ್ದ ಗೌರವದ ಭಾವನೆಯನ್ನು ತಮ್ಮ ಆತ್ಮೀಯರ ಬಳಿ ವ್ಯಕ್ತಪಡಿಸಿದ್ದರು. ಅವರೆಂದೂ ಪಂಡರಿಬಾಯಿಯವರನ್ನು ಏಕವಚನದಲ್ಲಿ ಕರೆದಿರಲಿಲ್ಲ. ಚಿತ್ರರಂಗದಲ್ಲಿ ಯಾವುದೇ ರೀತಿಯ ಕಳಂಕವನ್ನೂ ಅಂಟಿಸಿಕೊಳ್ಳದ ವ್ಯಕ್ತಿತ್ವವನ್ನು ಬೆಳೆಸಿಕೊಂಡಿದ್ದ ಮಹಾತಾಯಿ ಆಕೆ ಎಂದು ಅವರ ಬಗೆ ತಮ್ಮ ಅಭಿಪ್ರಾಯವನ್ನು ಹೇಳುತ್ತಿದ್ದರು.

ನಿರ್ಮಾಪಕರ ನಟ – ಶಿಸ್ತಿನ ಸಿಪಾಯಿ

ಕನ್ನಡ ಚಿತ್ರರಂಗದಲ್ಲಿ ಅತಿ ಶಿಸ್ತಿನ ಮನುಷ್ಯರೆಂದರೆ ಅಶ್ವತ್ಥ್‌ರವರು ಎಂದು ಯಾರಾದರೂ ಧಾರಾಳವಾಗಿ ಹೇಳಬಹುದು.

ಚಿತ್ರೀಕರಣಕ್ಕೆ ಸಮಯಕ್ಕೆ ಸರಿಯಾಗಿ ಹೋಗುವುದು, ತಮ್ಮ ಕೆಲಸದಲ್ಲಿ ಸಂಪೂರ್ಣ ತನ್ಮಯತೆಯಿಂದ ತಮ್ಮನ್ನು ತೊಡಗಿಸಿಕೊಳ್ಳುವುದು, ಸಂಭಾವನೆಯ ವಿಚಾರದಲ್ಲಿ ಪ್ರಾಮಾಣಿಕತೆಯಿಂದ ವರ್ತಿಸುವುದು ಈ ಎಲ್ಲ ವಿಚಾರಗಳಲ್ಲಿ ಅಶ್ವತ್ಥ್‌ರವರಿಗೆ ಅಶ್ವತ್ಥ್‌ರವರೇ ಸಾಟಿ ಎಂದೆನ್ನಬಹುದು. ನಿರ್ಮಾಪಕರಿಂದ ತಮಗೆ ಬರಬೇಕಾಗಿದ್ದ ಸಂಭಾವನೆಗಿಂತ ಒಂದು ಪೈಸೆಯಷ್ಟನ್ನೂ ಜಾಸ್ತಿ ಪಡೆಯುತ್ತಿರಲಿಲ್ಲ. ಹಾಗೊಂದು ವೇಳೆ ನಿರ್ಮಾಪಕರೆ ಹೆಚ್ಚಿಗೆ ಕೊಟ್ಟಿದ್ದರೆ ಅದನ್ನು ಯಾವುದೆ ಮುಲಾಜಿಲ್ಲದೆ ಅವರಿಗೇ ಹಿಂದಿರುಗಿಸಿಬಿಡುತ್ತಿದ್ದರು. ಕೆಲವೊಮ್ಮೆ ಅವರು ನಟಿಸಿದ್ದ ಚಿತ್ರಗಳು ಯಶಸ್ವಿಯಾಗಿ ಹೆಚ್ಚಿನ ಲಾಭ ಗಳಿಸಿ ನಿರ್ಮಾಪಕರು ಒಂದಷ್ಟು ಹಣವನ್ನು ಉಡುಗೊರೆಯಾಗಿ ಕೊಟ್ಟರೂ ಅದನ್ನು ವಿನಯಪೂರ್ವಕವಾಗಿ ತಿರಸ್ಕರಿಸುವ ಮನೋಭಾವ ಅವರದಾಗಿತ್ತು.

ನಿರ್ಮಾಪಕರಿಗೆ ತಮ್ಮಿಂದ ಯಾವುದೆ ಅನವಶ್ಯಕವಾಗಿ ಹೆಚ್ಚಿನ ಖರ್ಚಿನ ಹೊರೆಯನ್ನೂ ತಗುಲಿಸುತ್ತಿರಲಿಲ್ಲ. ನಿರ್ಮಾಪಕರು ತಮಗಾಗಿ ಒದಗಿಸಿದ್ದ ಹೋಟಲ್‌ನಲ್ಲಿ ತಮ್ಮ ಅತಿಥಿಗಳು ಅಥವಾ ತಮ್ಮ ಮನೆಯವರೇ ಬಂದರೂ ಸಹ ತಾವು ಅವರಿಗೆ ನೀಡಿದ್ದ ಆತಿಥ್ಯದ ಖರ್ಚನ್ನು ಎಂದಿಗೂ ತಾವೇ ಭರಿಸುತ್ತಿದ್ದರೇ ಹೊರತು ನಿರ್ಮಾಪಕರು ಕೊಡುವುದಕ್ಕೆ ಬಿಡುತ್ತಿರಲಿಲ್ಲ.

ಅಲ್ಲದೆ ಒಂದು ಚಿತ್ರಕ್ಕೆ ಇಷ್ಟು ಎಂದು ಸಂಭಾವನೆ ನಿಗದಿಯಾಗಿದ್ದರೆ ಅಷ್ಟೇ ಪಡೆಯುತಿದ್ದರೇ ವಿನಾ ಹೆಚ್ಚಿಗೆ ಪಡೆಯುತ್ತಿರಲಿಲ್ಲ. ಇದನ್ನು ಎಷ್ಟೋ ನಿರ್ಮಾಪಕರು ಹೇಳಿ ಅಶ್ವತ್ಥ್‌ರವರ ಪ್ರಾಮಾಣಿಕತೆಯನ್ನು ಪ್ರಶಂಸಿಸುತ್ತಿದ್ದರು.

ಅವರು ಪೂರ ಸ್ಕ್ರಿಪ್ಟ್ ಪಡೆದುಕೊಂಡು ಅದನ್ನು ಚೆನ್ನಾಗಿ ಮನನ ಮಾಡಿಕೊಂಡು, ಮನವರಿಕೆ ಮಾಡಿಕೊಳ್ಳುತ್ತಿದ್ದರು, ಸಂದೇಹ ಬಂದಲ್ಲಿ ಅದನ್ನು ಪರಿಹರಿಸಿಕೊಂಡು ನಂತರ ತಮ್ಮ ಪಾತ್ರ ನಿರ್ವಹಣೆ ಮಾಡುತ್ತಿದ್ದರು. ಹಾಗಾಗಿ ಅವರ ಪ್ರತಿಯೊಂದು ಪಾತ್ರವೂ ಪರಿಪೂರ್ಣತೆಯಿಂದ ಕೂಡಿರುತ್ತಿತ್ತು.

ಅಶ್ವತ್ಥ್‌ರವರದು ಮೊದಲಿನಿಂದಲೂ ಬಹಳ ಪರಿಶುದ್ಧವಾದ ಜೀವನ. ಅವರಿಗೆ ಸಿನೆಮಾ, ನಾಟಕ ಕಲಾವಿದರಲ್ಲಿ ಸಾಮಾನ್ಯವಾಗಿ ಇರುವ ಸಿಗರೇಟು, ತಂಬಾಕು, ಎಲೆ ಅಡಿಕೆ ಮುಂತಾದುವುಗಳ ಯಾವುದೆ ಚಟವಿರಲಿಲ್ಲ, ತಮ್ಮ ಕಲಾ ಜೀವನದುದ್ದಕ್ಕೂ ಸದಭ್ಯಾಸವನ್ನು ಮುಂದುವರಿಸಿಕೊಂಡೇ ಬಂದರು. ತಮ್ಮ ಮಹಿಳಾ ಸಹ ಕಲಾವಿದರೊಂದಿಗೆ ಯಾವತ್ತೂ ಯಾವುದೆ ರೀತಿಯ ಅಸಭ್ಯವರ್ತನೆಯನ್ನು ಮಾಡದೆ ಅವರೊಡನೆ ಅತ್ಯಂತ ಗೌರವದಿಂದ ವ್ಯವಹರಿಸುತ್ತಿದ್ದರು. ಅವರಿಗಿದ್ದ ಮಹದಾಸೆಯೊಂದೆ, ತಾವು ಅಭಿನಯಿಸುವ ಯಾವುದೆ ಚಿತ್ರವಾಗಲಿ, ಅದರಲ್ಲಿ ತಮ್ಮ ಪಾತ್ರ ಚೆನ್ನಾಗಿ ಮೂಡಿಬರಬೇಕು, ಜನ ಅದನ್ನು ಒಪ್ಪಿಕೊಳ್ಳಬೇಕು.

ಅವರು ತಾವು ಚಿತ್ರರಂಗದ ಆರಂಭದ ದಿನಗಳಲ್ಲಿ ಪಟ್ಟ ಪಾಡನ್ನು ಯಾವತ್ತೂ ಮರೆಯಲಿಲ್ಲ. ಬದಲಾಗಿ ಅದಕ್ಕೆ ತಕ್ಕ ಹಾಗೆ ತಮ್ಮ ಜೀವಮಾನ ಪೂರ್ತಿ ಅವರು ಕಷ್ಟ ಸುಖಗಳೊಂದಿಗೆ ಹೊಂದಿಕೊಂಡು ಹೋಗುವ ಪಾಠ ಕಲಿತರು. ಹಾಸಿಗೆ ಇದ್ದಷ್ಟು ಕಾಲು ಚಾಚುವ ಸಂಪ್ರದಾಯವನ್ನು ಅನುಸರಿಸಿದರು. ಆದಾಯವೆಷ್ಟಿದೆಯೋ ಅಷ್ಟು ಮಾತ್ರ ಖರ್ಚು ಮಾಡುವ ಅಭ್ಯಾಸವನ್ನು ರೂಢಿಸಿಕೊಂಡಿದ್ದರು.

ಅಶ್ವತ್ಥ್‌ರರವರ ಕೆಲವು ವಿವರಗಳು

ಮೂಲ ಹೆಸರು - ಕರಗನಹಳ್ಳಿ ಸುಬ್ಬರಾವ್ ಅಶ್ವತ್ಥನಾರಾಯಣ

ಜನನ - ೨೫.೦೩.೧೯೨೫, ಮರಣ - ೧೮.೦೧.೨೦೧೦

ತಂದೆ ತಾಯಿ - ಸುಬ್ಬರಾವ್, ಸಾಕಮ್ಮ, ಸೋದರತ್ತೆ - ತಿಪ್ಪಮ್ಮ (ಸಾಕುತಾಯಿ)

ಪತ್ನಿ - ಶಾರದ, ಮಕ್ಕಳು - ಸುಬ್ಬುಕೃಷ್ಣ, ಶಂಕರ್ ಅಶ್ವತ್ಥ್, ನಾಗರತ್ನ, ವಿಜಯ

ಮೊದಲ ಚಿತ್ರ - ಸ್ತ್ರೀರತ್ನ, ಕೊನೆಯ ಚಿತ್ರ - ಭೂಪತಿ

ಅಭಿನಯಿಸಿದ ಚಿತ್ರಗಳು - ೩೮೫.

ಜನಮೆಚ್ಚುಗೆಯ ಚಿತ್ರಗಳು - ನಾಗರಹಾವು-ಚಾಮಯ್ಯ ಮೇಷ್ಟು, ಮಹಿಷಾಸುರ ಮರ್ದಿನಿ, ಸ್ವರ್ಣಗೌರಿ, ಭಕ್ತಪ್ರಹ್ಲಾದ, ದಶಾವತಾರ, ನಾಗಾರ್ಜುನ, ಕಸ್ತೂರಿ ನಿವಾಸ, ಮಗ ಮೊಮ್ಮಗ, ತಂದೆ ಮಕ್ಕಳು, ಸರ್ವಮಂಗಳ.

ಪ್ರಶಸ್ತಿಗಳು - ಸನ್ಮಾನಗಳು

ನಮ್ಮ ಮಕ್ಕಳು, ನಾಗರಹಾವು ಮತ್ತು ಮುತ್ತಿನಹಾರ ಚಿತ್ರಗಳಲ್ಲಿ ಶ್ರೇಷ್ಠ ಅಭಿನಯಕ್ಕಾಗಿ ಶ್ರೇಷ್ಠಪೋಷಕ ನಟ - ರಾಜ್ಯ ಪ್ರಶಸ್ತಿ

೧೯೮೨ರಲ್ಲಿ ರಾಜ್ಯೋತ್ಸವ ಪ್ರಶಸ್ತಿ

ಚಲನ ಚಿತ್ರರಂಗಕ್ಕೆ ಅಮೋಘ ಸೇವೆ ಸಲ್ಲಿಸಿದವರಿಗೆ ನೀಡಲು ಸರಕಾರ ಡಾ.ರಾಜ್ ಹೆಸರಿನಲ್ಲಿ ಸ್ಥಾಪಿಸಿದ ಪ್ರಶಸ್ತಿ (೧೯೯೫)
'ಈ ಪ್ರಶಸ್ತಿ ಪಡೆದ ಮೊದಲಿಗರು ಅಶ್ವತ್ಥ್‌ರವರು'.

ತುಮಕೂರು ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ (೨೦೦೮)

ಶಾಂತವೇರಿ ಗೋಪಾಲಗೌಡ ಪ್ರಶಸ್ತಿ (೨೦೦೫)

ಕನ್ನಡ ಕಾಯಕಶ್ರೀ ಪ್ರಶಸ್ತಿ (೨೦೦೬)

ಸಾರ್ಥಕ ಸುವರ್ಣ ಪ್ರಶಸ್ತಿ

ಹಂಸರತ್ನ ಪ್ರಶಸ್ತಿ (೧೯೯೬)

ಮದ್ರಾಸ್ ಫಿಲ್ಮ್ ಫ್ಯಾನ್ಸ್‌ನ ಅಸೋಸಿಯೇಷನ್ ಸತತವಾಗಿ ಏಳು ವರ್ಷಗಳು ಉತ್ತಮ ಪೋಷಕ ನಟ ಪ್ರಶಸ್ತಿಗೆ ಆಯ್ಕೆ ಮಾಡಿತ್ತು.

ತುಮಕೂರು ವಿಶ್ವವಿದ್ಯಾಲಯದ ಡಾಕ್ಟರೇಟ್

೨೦೦೮ ಮಾರ್ಚ್ ೨೫ರಂದು ಅಶ್ವತ್ಥ್‌ರವರು ೮೪ನೇ ವಸಂತಕ್ಕೆ ಕಾಲಿಟ್ಟ ದಿನ. ಅಂದು ಅವರ ಜನುಮದಿನದ ಕೊಡುಗೆಯಾಗಿ ಅವರಿಗೆ ಸಿಕ್ಕಿದ್ದು ತುಮಕೂರು ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್. ಅವರಿಗೆ ಎಲ್ಲಿಲ್ಲದ ಸಂತಸ ಮತ್ತು ಅವರ ಸ್ಮರಣೆಯಲ್ಲಿ ಎಂದೆಂದಿಗೂ ಉಳಿಯುವ ದಿನ.

"ಇದು ನನ್ನ ಜೀವನದಲ್ಲಿಯೇ ಎಂದೂ ಮರೆಯಲಾಗದ ದಿನ. ಕುಲಪತಿಗಳು ಡಾಕ್ಟರೇಟ್ ಕೊಡುವ ವಿಷುಯವನ್ನು ಎರಡು ತಿಂಗಳ ಹಿಂದೆಯೇ ತಿಳಿಸಿದಾಗ ನನ್ನ ಎದೆ ಒಡೆದೇ ಹೋದಂತಾಯಿತು. ನಾನು ಯಾವುದೇ ಪ್ರಬಂಧ, ಸಂಶೋಧನೆ ಮಾಡಿಲ್ಲ. ಅದೂ ಅಲ್ಲದೆ ನಾನು ನಾಯಕನೂ ಅಲ್ಲ. ಡಾಕ್ಟರೇಟ್ ಕೊಡಲು ನನಗಿರುವ ಅರ್ಹತೆಯಾದರೂ ಏನಿದೆ?" ಎಂದು ತಮ್ಮನ್ನು ತಾವೇ ಪ್ರಶ್ನಿಸಿಕೊಂಡರು.

"ಪೋಷಕ ನಟ ಪಾತ್ರದಲ್ಲಿ ಅಭಿನಯಕ್ಕೆ ಅಂತಹ ಅವಕಾಶವಿರುವುದಿಲ್ಲ. ಹಾಗಿದ್ದೂ ಪ್ರೇಕ್ಷಕರಿಂದ ಸಿಕ್ಕಿರುವ ಸನ್ಮಾನ, ಗೌರವ, ಪ್ರಶಸ್ತಿಗಳು ನಂದಿಬೆಟ್ಟಕ್ಕೆ ಸಮಾನ. ಈಗ ಡಾಕ್ಟರೇಟ್ ಪ್ರಶಸ್ತಿ ಬೇರೆ ಸಿಗುತ್ತಿರುವುದು ಗೌರಿಶಿಖರಕ್ಕೆ ಸಮಾನವಾಗಿದೆ. ನನ್ನ ಕಲಾಸೇವೆಗೆ ಇಂತಹುದೊಂದು ಗೌರವ ಸಿಗುತ್ತದೆಂದು ಕನಸು ಮನಸಿನಲ್ಲಿಯೂ ಎಣಿಸಿರಲಿಲ್ಲ." ಎಂದು ಭಾವುಕರಾಗಿ ನುಡಿದರು.

ಇದುವರೆಗೆ ಎಷ್ಟೋ ನಟರಿಗೆ ಇಂತಹ ಡಾಕ್ಟರೇಟ್ ಪ್ರಶಸ್ತಿಗಳು ಸಿಕ್ಕಿವೆ. ಅವರೆಲ್ಲರೂ ತಮ್ಮ ಹೆಸರಿನ ಮುಂದೆ ಡಾ. ಎಂದು ಹಾಕಿಕೊಂಡಿರುವುದನ್ನು ನೋಡಿದ್ದೇವೆ. ಆದರೆ ಅಶ್ವತ್ಥ್‌ರವರು ಮಾತ್ರ ಒಂದು ದಿನವೂ ತಮ್ಮ ಹೆಸರಿನ ಮುಂದೆ ಈ ಡಾ. ಎಂಬುದನ್ನು ಹಾಕಿಕೊಳ್ಳಲಿಲ್ಲ. ಹಾಗಿತ್ತು ಅವರ ಸರಳತೆ.

ಅಶ್ವತ್ಥ್‌ರವರು ಅಭಿನಯಿಸಿದ ಕೆಲವು ಚಿತ್ರಗಳು

ಅಶ್ವತ್ಥ್‌ರವರು ಮೊದಲ ಚಿತ್ರ ಸ್ತ್ರೀರತ್ನ ದಿಂದ ಆರಂಭಿಸಿ ತಮ್ಮ ಅಭಿನಯ ಜೀವನದಲ್ಲಿ ಪಾತ್ರವಹಿಸಿರುವ ಚಿತ್ರಗಳ ಸಂಖ್ಯೆ ೩೮೦ಕ್ಕೂ ಹೆಚ್ಚು. ರೈತ, ಸ್ನೇಹಿತ, ಅಪ್ಪ, ದೊಡ್ಡಪ್ಪ, ಶಿಕ್ಷಕ, ರಾಜ, ಸೈನಿಕ, ಸಂತ, ತತ್ವಜ್ಞಾನಿ, ನಾರದ ಹೀಗೆ ಹಲವು ವಿಭಿನ್ನ ಪಾತ್ರಗಳಲ್ಲಿ ತಮ್ಮ ಅಭಿನಯ ಶ್ರೇಷ್ಠತೆಯನ್ನು ಮೆರೆದಿದ್ದಾರೆ.

ಅವುಗಳಲ್ಲಿ ಕೆಲವು ಆಯ್ದ ಚಿತ್ರಗಳ ಹೆಸರನ್ನು ಈ ಕೆಳಗೆ ನೀಡಲಾಗಿದೆ.

ಸ್ತ್ರೀ ರತ್ನ	ಪರಾಜಿತ	ಹೃದಯ ಹಾಡಿತು
ಸರ್ವಮಂಗಳ	ಮೋಡದ ಮರೆಯಲ್ಲಿ	ಅನುರಾಗದ ಅಲೆಗಳು
ಒಂದೇ ಬಳ್ಳಿಯ ಹೂಗಳು	ಪ್ರೇಮಮಯಿ	ಕರುಣಾಮಯಿ
ನಾಗರಹಾವು	ಶುಭಮಂಗಳ	ಹೊಸಬೆಳಕು
ಸಿಪಾಯಿರಾಮು	ಸತಿಸುಕನ್ಯ	ಭೂ ಕೈಲಾಸ
ಮಿಸ್ ಲೀಲಾವತಿ	ಭೂತಯ್ಯನ ಮಗ ಅಯ್ಯು	
ನಮ್ಮ ಮಕ್ಕಳು	ಕಸ್ತೂರಿನಿವಾಸ	ಜೇಡರ ಬಲೆ
ಶೃತಿ ಸೇರಿದಾಗ	ಹೊಸ ಬೆಳಕು	ಚಲಿಸುವ ಮೋಡಗಳು
ಉಯ್ಯಾಲೆ	ಜೇನುಗೂಡು	ಮುತ್ತಿನಹಾರ
ಕರ್ಣ	ಮಯೂರ	ದಾರಿತಪ್ಪಿದಮಗ
ಬಂಗಾರದ ಪಂಜರ	ಬಿಡುಗಡೆ	ಸ್ವಯಂವರ
ಕೋಕಿಲವಾಣಿ	ಕಚದೇವಯಾನಿ	ಗಾಳಿ ಗೋಪುರ

ಸೆವೆನ್ ವಂಡರ್ಸ್ ಆಫ್ ದಿ ವರ್ಲ್ಡ್ (ಇಂಗ್ಲಿಷ್)

ಹೃದಯ ಹಾಡಿತು	ತಂದೆ ಮಕ್ಕಳು	ಗೆಜ್ಜೆ ಪೂಜೆ
ಶರಪಂಜರ	ಆರು ಮೂರು ಒಂಬತ್ತು	ಚಂದನದಗೊಂಬೆ
ನವಜೀವನ	ಬೆಳ್ಳಿಮೋಡ	ಮಹಾಶಿಲ್ಪಿ
ಹೇಮರೆಡ್ಡಿಮಲ್ಲಮ್ಮ	ಮಂಗಳ ಮುಹೂರ್ತ	ಕಾಡಿನ ರಹಸ್ಯ
ಪಾಪ ಪುಣ್ಯ	ಕಾಮನಬಿಲ್ಲು	ಅನ್ನಪೂರ್ಣ
ಇಂಡಿಯನ್	ಅಣ್ಣತಂಗಿ	ಮಹಿಷಾಸುರಮರ್ದಿನಿ
ದಶಾವತಾರ	ಭಕ್ತಕನಕದಾಸ	ನ್ಯಾಯವೇ ದೇವರು
ನಂಬಿಯಕ್ಕ	ರಣಧೀರಕಂಠೀರವ	ಶಾಂತಿನಿವಾಸ
ಕರುಣೆಯೇ ಕುಟುಂಬದ ಕಣ್ಣು		

ಅಶ್ವತ್ಥ್‌ರವರು ಭೌತಿಕವಾಗಿ ಇಂದು ನಮ್ಮಲ್ಲಿಲ್ಲದಿರಬಹುದು, ಆದರೆ ಮನೋಜ್ಞ ಅಭಿನಯದ ಅವರ ಪಾತ್ರಗಳು ಸದಾಜೀವಂತ.

ಕಲಾಶ್ರೀ

ಅಶ್ವತ್ಥ್‌ರವರು ಆರಂಭದಲ್ಲಿ ವಾಸಿಸುತ್ತಿದ್ದು ಮೈಸೂರಿನ ಶಿವರಾಂಪೇಟೆಯಲ್ಲಿ; ಅದೂ ಒಂದು ಸಣ್ಣ ಮನೆಯಲ್ಲಿ. ಚಿತ್ರಜಗತ್ತಿನಲ್ಲಿ ಸಾಕಷ್ಟು ಕಷ್ಟ ನಷ್ಟ ಪಟ್ಟಮೇಲೆ, ಹಲವು ವರ್ಷಗಳ ನಂತರ ಅನುಕೂಲಸ್ಥರಾದ ಮೇಲೆ ಸ್ವಲ್ಪ ಹಣ ಕೈಸೇರುವಂತಾಯಿತು. ಜೀವನದಲ್ಲಿ ಸುಖ ಸಂತೋಷ, ನೆಮ್ಮದಿ ಕಾಣುವಂತಾಯಿತು. ಆಗ ಅವರು ಸ್ವಂತಮನೆಯನ್ನು ಕಟ್ಟುವ ಮನಸ್ಸು ಮಾಡಿದರು. ಮೈಸೂರಿನ ಸರಸ್ವತಿಪುರಂನ ೫ನೇ ಮುಖ್ಯರಸ್ತೆಯಲ್ಲಿ ನಿವೇಶನ ಖರೀದಿಸಿದರು. ಮನೆಕಟ್ಟಿದರು. ಅದಕ್ಕೆ ಕಲಾಶ್ರೀ ಎಂದು ಹೆಸರಿಟ್ಟರು. ೪೫ ವರ್ಷಗಳ ಕಾಲ ಈ ಮನೆಯಲ್ಲಿ ಬದುಕಿ ಬಾಳಿದರು. ನೆಮ್ಮದಿಯನ್ನು ಕಂಡರು.

ಕಲಾಶ್ರೀಯನ್ನು ಯಾರೇ ನೋಡಿದರೂ ಅದನ್ನು ಒಬ್ಬ ಸಂಪ್ರದಾಯಸ್ಥರ ಮನೆ ಎಂದು ಧಾರಾಳವಾಗಿ ಹೇಳಿಬಿಡಬಹುದು. ಯಾವಾಗಲೂ ಸರಳತೆಯನ್ನೆ ಅಳವಡಿಸಿಕೊಂಡಿದ್ದ ಅವರು ಮನೆಯನ್ನೂ ಸರಳವಾಗಿ ಇಟ್ಟುಕೊಂಡಿದ್ದರು.

ಅಶ್ವತ್ಥ್ ಮತ್ತು ರಾಜಕುಮಾರ್

"ಅವರಂತೆ ಅಭಿನಯಿಸಲು, ಪಾತ್ರಕ್ಕೆ ಜೀವ ತುಂಬಲು ನೂರು ವರ್ಷಗಳಾದರೂ ನನ್ನಿಂದ ಸಾಧ್ಯವಾಗುವುದಿಲ್ಲ. ಅದು ಮೇರು ಪ್ರತಿಭೆ."

ಇದು ಕನ್ನಡದ ಮೇರುನಟ ರಾಜಕುಮಾರ್‌ರವರು ಅಶ್ವತ್ಥ್‌ರವರ ಬಗ್ಗೆ ಹೇಳುತ್ತಿದ್ದ ಮಾತುಗಳು.

"ರಾಜಕುಮಾರ್‌ರವರು ದೈವಾಂಶ ಸಂಭೂತರು. ನಾನು ವಯಸ್ಸಿನಲ್ಲಿ ಹಿರಿಯನಾದರೂ ಅಭಿನಯ ಕಲೆಯಲ್ಲಿ ಅವರೇ ಹಿರಿಯರು, ಪ್ರಬುದ್ಧರು. ಅವರ ಬದುಕಿನ ಪುಟಗಳಿಂದ ನೋಡಿ ಕಲಿಯುವುದು ಬಹಳಷ್ಟಿದೆ."

ಇದು ಅಶ್ವತ್ಥ್‌ರವರು ರಾಜಕುಮಾರ್‌ರವರ ಬಗ್ಗೆ ಹೇಳುತ್ತಿದ್ದ ಮಾತು.

"ಗುಣಕ್ಕೆ ಮತ್ಸರವುಂಟೇ" ಎನ್ನಬಹುದಾದರೂ ಈ ಇಬ್ಬರು ಹಿರಿಯ ಜೀವಿಗಳು ಒಬ್ಬರನ್ನೊಬ್ಬರಲ್ಲಿ ಇಟ್ಟುಕೊಂಡಿದ್ದ ಗೌರವ, ಆದರ, ಪ್ರೀತಿ, ಅಭಿಮಾನಗಳು. ರಾಜಕುಮಾರ್ ಅವರೊಂದಿಗೆ ತಾವು ಇಟ್ಟುಕೊಂಡಿದ್ದ ಸಂಬಂಧಗಳನ್ನು ಅಶ್ವತ್ಥ್‌ರವರು ಯಾವಾಗಲೂ ಭಾವುಕರಾಗಿ ನೆನಪಿಸಿಕೊಳ್ಳುತ್ತಿದ್ದರು.

ರಾಜಕುಮಾರ್‌ರವರ ನಿಧನದ ನಂತರ ಅವರ ಬಗ್ಗೆ ಅವರು ಹೀಗೆ ಹೇಳಿದ್ದರು.

"ನಾನು ಮೊದಲಿನಿಂದಲೂ ರಾಜ್‌ರವರ ಚಿತ್ರಗಳನ್ನು ನೋಡುತ್ತಿದ್ದೆ. ಆದರೆ ಅವರನ್ನು ಕಣ್ತುಂಬ ಕಾಣುವ ಭಾಗ್ಯ ದೊರೆತಿದ್ದು ಚಿತ್ರವೊಂದರ ಷೂಟಿಂಗ್ ನಲ್ಲಿ. ಆಗಲೇ ಪಂಡರಿಬಾಯಿ, ಜಿ.ವಿ.ಅಯ್ಯರ್, ನರಸಿಂಹರಾಜುರವರುಗಳು ಚಿತ್ರರಂಗಕ್ಕೆ ಬಂದಿದ್ದರು. ಆಗ ನಾನು ಅವಕಾಶದ ಕದ ತಟ್ಟುತಿದ್ದೆ"

ಭೂಕೈಲಾಸದಿಂದ ಶಬ್ಧವೇಧಿಯ ತನಕ ರಾಜಕುಮಾರ್ ರವರ ತಂದೆಯಾಗಿ, ಅಣ್ಣನಾಗಿ, ಮೇಷ್ಟ್ರಾಗಿ ಸುಮಾರು ೬೦ಕ್ಕೂ ಹೆಚ್ಚು ಚಿತ್ರಗಳಲ್ಲಿ ಅವರು ನಟಿಸಿದ್ದರು. ಪಾತ್ರದ ಜತೆ ಜತೆ ಅವರೂ ಬೆಳೆದು ಹೆಸರಾಗಿದ್ದರು

ಅಶ್ವತ್ಥ್‌ರವರು ಚಿತ್ರರಂಗದಿಂದ ನಿವೃತ್ತಿಯನ್ನು ಘೋಷಿಸಿದ್ದ ನಂತರವೂ ಅವರಲ್ಲಿ ಅಡಗಿದ್ದ ಕಲಾವಿದ ನಿವೃತ್ತಗೊಂಡಿರಲಿಲ್ಲ. ಸದಾ ಜಾಗೃತಗೊಂಡಿದ್ದರು. ಅನಾರೋಗ್ಯ ದಾಳಿ ಮಾಡಿದರೂ ಬಣ್ಣದ ಬದುಕಿನ ಮಧುರ ನೆನಪುಗಳನ್ನು ಮೆಲುಕು ಹಾಕುತಿದ್ದರು. ಬೇಸರವಾದಾಗಲೆಲ್ಲ ಹಳೆಯ ಚಿತ್ರಗಳನ್ನು ನೋಡುತ್ತಿದ್ದರು

"ಹಾಗೆ ಹಳೆಯ ಚಿತ್ರಗಳನ್ನು ನೋಡುತ್ತಿದ್ದಾಗ ಒಂದು ಸಲ ಬಂಗಾರದ ಪಂಜರ ನೋಡಿದೆ. ರಾಜಕುಮಾರರವರ ಅಭಿನಯ ಅದ್ಭುತ. ಅವರ ಮನೋಜ್ಞ ಅಭಿನಯದ ಮುಂದೆ ನನ್ನ ಪಾತ್ರವೇ ಮರೆತು ಹೋಯಿತು" ಎಂದು ರಾಜಕುಮಾರ್‌ರವರು ನಿಧನ ಹೊಂದಿದಾಗ ಆ ಸಂದರ್ಭವನ್ನು ವಿವರಿಸುತ್ತಾ ಅಶ್ವತ್ಥ್‌ರವರ ಮುಖದಲ್ಲಿ ಗೌರವದ ಗೆರೆಗಳು ಮೂಡಿದ್ದವು.

ಆರಂಭದ ದಿನಗಳಲ್ಲಿ ರಾಜ್‌ರೊಂದಿಗೆ ನಟಿಸುವಾಗ ಹಿರಿಯ ಕಲಾವಿದರ ಎದುರು ಹೇಗೆ ನಟಿಸುವುದು ಎಂಬ ಅಳುಕು ಅಶ್ವತ್ಥ್‌ರವರನ್ನು ಕಾಡಿತ್ತಂತೆ. ಆದರೆ ಹಲವು ಚಿತ್ರಗಳಲ್ಲಿ

ನಟಿಸುತ್ತ ಹೋದಂತೆ ಅಂತರಾಳದ ಭಯ ಕರಗಿ ಹೋಯಿತು. "ಪರ್ವಾಗಿಲ್ಲ, ಅಶ್ವತ್ಥ್, ನೀವು ಚೆನ್ನಾಗಿ ನಟಿಸುತ್ತೀರ" ಎಂದು ರಾಜ್‌ರವರು ಆತ್ಮ ವಿಶ್ವಾಸ ತುಂಬುತ್ತಿದ್ದರಂತೆ.

ರಾಜ್‌ರವರು ಹಿರಿಯ ಕಿರಿಯ ಎಂಬ ತಾರತಮ್ಯವಿಲ್ಲದೆ ಎಲ್ಲರನ್ನೂ ಏಕದೃಷ್ಟಿಯಲ್ಲಿ ಕಾಣುವ, ಇದ್ದದ್ದನ್ನು ಇದ್ದ ಹಾಗೆ ಹೇಳುವ ತೆರೆದ ಹೃದಯಿ. ಅವರ ಮನಸ್ಸು ಬೆಳದಿಂಗಳು. ಅದು ವಸಂತಗೀತ ಚಿತ್ರದ ಚಿತ್ರೀಕರಣ ಸಮಯ ಅನ್ನಿಸುತ್ತೆ. ಷೂಟಿಂಗ್ ಮೈಸೂರಲ್ಲೇ ನಡೆಯುತ್ತಿತ್ತು. ಆದ್ದರಿಂದ ಕಂಪನಿಯಲ್ಲಿ ಬೆಳಿಗ್ಗೆ ಟಿಫಿನ್ ಮಾಡುತ್ತಿದ್ದೆ. ಮಧ್ಯಾಹ್ನ ಮನೆಗೆ ಹೋಗ್ತಿದ್ದೆ. ಇದನ್ನ ರಾಜಕುಮಾರ್‌ರವರು ಸುಮಾರು ಒಂದೆರಡು ಸಲ ವಾಚ್ ಮಾಡಿದ್ರು ಅನಿಸುತ್ತೆ. ಒಂದು ದಿನ,

"ಅಶ್ವತ್ಥ್‌ರವರೇ, ನೀವು ನಮ್ಮ ಕಂಪನಿಯಲ್ಲಿ ಊಟ ಮಾಡ್ತಿಲ್ಲ ಅನ್ನೋದು ಗೊತ್ತಾಯಿತು. ಏಕೆ, ನಿಮ್ಮ ಅಡುಗೇನೂ ಮಾಡಿಸ್ತಿದ್ದೀವಲ್ಲ, ಏನಾದರೂ ತೊಂದರೆ ಆಗಿದೆಯೇ" ಎಂದು ವಿನಯ ಪೂರ್ವಕವಾಗಿ ಕೇಳಿದಾಗ ನಾನು ಅಪರಾಧ ಮಾಡುತ್ತಿದ್ದೀನಿ ಎನಿಸಿತು. ಅಂದಿನಿಂದ ರಾಜ್‌ರವರ ಜೊತೆಯಲ್ಲಿಯೇ ಊಟ ಮಾಡಲಾರಂಭಿಸಿದೆ.

ರಾಜ್‌ರವರ ಸ್ನೇಹಶೀಲ ನಡವಳಿಕೆ ನಮ್ಮನ್ನು ಬಲು ಬೇಗ ತಿದ್ದುತ್ತದೆ. ಅವರ ನಡತೆಯಲ್ಲಿ ಕೃತಕತೆ ಇಲ್ಲ. ನಟನೆಯಿಲ್ಲದ ಮಿತಭಾಷಿ. ಸೆಟ್‌ನಲ್ಲಿನ ಸಹಕಲಾವಿದರಿಗೆ ಆತ್ಮವಿಶ್ವಾಸದ ಇಂಧನ ತುಂಬುತ್ತಾರೆ. ಅವರು ನಾಯಕ ನಟ, ನಾನು ಪೋಷಕನಟ ಎನ್ನುವ ಕಂದರ ಇರಲಿಲ್ಲ, ಅಭಿನಯದಲ್ಲಿ ಸ್ಪರ್ಧೆ ಇರುತಿತ್ತು. ಹೀಗೆ 'ಭಾಗ್ಯದ ಬಾಗಿಲು' 'ನಂದಾದೀಪ', 'ಕಾಮನಬಿಲ್ಲು' 'ಭೂದಾನ', 'ಹೊಸಬೆಳಕು' ಇನ್ನಿತರ ಚಿತ್ರಗಳಲ್ಲಿ ಒಟ್ಟಾಗಿ ಅಭಿನಯಿಸುತ್ತ ನನ್ನ ಅವರ ಸಂಬಂಧ ಆತ್ಮೀಯವಾಯಿತು. ಅದು ನನ್ನ ಜೀವನಕ್ಕೆ ಹೊಸ ಬೆಳಕಾಯಿತು.

ಅಶ್ವತ್ಥ್‌ರವರಿಗೆ ಜೀವನದಲ್ಲಿ ಅವಿಸ್ಮರಣೀಯ ಕ್ಷಣವೆಂದರೆ 'ಹಾಲುಜೇನು' ಚಿತ್ರದ ರಜತ ಮಹೋತ್ಸವ ಸಂದರ್ಭ. ಆಗ ರಾಜ್ ಹಾಗೂ ಸಿಂಗೀತಂ ಶ್ರೀನಿವಾಸ್‌ರವರಿಗೆ ಅಶ್ವತ್ಥ್ ನೆನಪಿನ ಫಲಕಗಳನ್ನು ವಿತರಿಸಿದರು. "ಇಂತಹ ಘಟಾನುಘಟಿ ಕಲಾವಿದರನ್ನು ಸನ್ಮಾನಿಸುವ ಅಪೂರ್ವ ಅವಕಾಶ ಮಾಡಿಕೊಟ್ಟು ಎಂತಹ ಸ್ಥಾನದಲ್ಲಿ ಕೂರಿಸಿದರು. ಸರಕಾರಿ ಕೆಲಸ ಬಿಟ್ಟು ಕಲಾವಿದನಾಗಿದ್ದಕ್ಕೆ ಸಾರ್ಥಕವಾಯಿತು" ಎಂದು ಅಶ್ವತ್ಥ್ ಹೇಳುತ್ತಿದ್ದರು.

ಅಶ್ವತ್ಥ್, ಬಣ್ಣದ ಬದುಕಿನ ಏರಿಳಿತಗಳ ಮಧ್ಯೆ ಈಜಿ ಬಂದವರು. ಆದರೆ ೬೭ ರ ದಶಕದಲ್ಲಿ ಉಂಟಾದ ಅನಾರೋಗ್ಯದಿಂದಾಗಿ ಕೆಲ ವರ್ಷ ಚಿತ್ರರಂಗಕ್ಕೆ ತಾತ್ಕಾಲಿವಾಗಿ ವಿದಾಯ ಹೇಳಿದ್ದರು. ಆ ಸಂದರ್ಭದಲ್ಲಿ ಕಳವಳ ವ್ಯಕ್ತಪಡಿಸಿದ್ದ ರಾಜಕುಮಾರ್‌ರವರು ಚಿತ್ರರಂಗಕ್ಕೆ ನಿಮ್ಮ ಸೇವೆ ಅಗತ್ಯ ಇದೆ ಎಂದು ಮತ್ತೊಮ್ಮೆ 'ಶಬ್ದವೇಧಿ' ಮೂಲಕ ಅಶ್ವತ್ಥ್‌ರವರು ಚಿತ್ರರಂಗ ಪ್ರವೇಶಿಸುವುದಕ್ಕೆ ಕಾರಣಕರ್ತರಾದರು. ನಂತರ ಅಶ್ವತ್ಥ್, ೧೦-೧೨ ಚಿತ್ರಗಳಲ್ಲಿ ನಟಿಸಿದರಾದರೂ ಅನಾರೋಗ್ಯ ಹೆಗಲೇರಿತು.

ಮೈಸೂರಿಗೆ ಬಂದಾಗಲೆಲ್ಲ ರಾಜ್ ನನ್ನನ್ನು ನೋಡ್ಕೊಂಡು ಹೋಗುತ್ತಿದ್ದರು. ಚಾಮುಂಡಿ ಬೆಟ್ಟಕ್ಕೆ ಬಂದಿದ್ದಾಗ ಮನೆಗೆ ಬಂದಿದ್ದರು. ಈಗಲೂ ಅಷ್ಟೇ ಗೌರವ ಕೊಡ್ತಾರೆ ಎಂದು ಆಗಾಗ ನೆನಪಿಸಿಕೊಳ್ಳುತ್ತಿದ್ದರು.

ರಾಜಕುಮಾರ್ ಅವರ ಹೆಸರಿನಲ್ಲಿ ಪ್ರಶಸ್ತಿ ಆರಂಭವಾದಾಗ ಮೊದಲ ಆಯ್ಕೆ ಕೆ.ಎಸ್. ಅಶ್ವತ್ಥ್‌ರವರು. (ಮೊದಲು ಗುಬ್ಬಿ ವೀರಣ್ಣ ಪ್ರಶಸ್ತಿ ಇತ್ತು. ಅದು ರಾಜ್‌ರವರಿಗೆ ಸಂದಿತು. ನಂತರ ಗುಬ್ಬಿ ವೀರಣ್ಣ ಪ್ರಶಸ್ತಿ ರಂಗಭೂಮಿಗೇ ಮೀಸಲಾಗಬೇಕು ಎಂದು ರಂಗಭೂಮಿಯ ಮಂದಿ ಒತ್ತಾಯಿಸಿದಾಗ ರಾಜಕುಮಾರ್ ಹೆಸರಲ್ಲಿ ಈ ಪ್ರಶಸ್ತಿ ಆರಂಭವಾಯಿತು.)

೧೯೮೯ಳರಲ್ಲಿ ಅಶ್ವತ್ಥ್‌ರವರು ಅಭಿನಯದಿಂದ ದೂರವಾಗುವ ತಮ್ಮ ನಿರ್ಧಾರವನ್ನು ಪ್ರಕಟಿಸಿದರು. (ಈ ವರ್ಷವೇ ಅವರ ಹಲವಾರು ಚಿತ್ರಗಳಲ್ಲಿ ನಾಯಕಿಯಾಗಿ ಅಭಿನಯಿಸಿದ್ದ ಪಂಡರಿಬಾಯಿಯವರೂ ಅಪಘಾತವೊಂದರಲ್ಲಿ ಗಾಯಗೊಂಡು ಅಭಿನಯಕ್ಕೆ ದೂರವಾದರು) ಈ ಸಂದರ್ಭದಲ್ಲಿ ಒಮ್ಮೆ ಪತ್ರಕರ್ತರು ಅವರನ್ನು ಭೇಟಿಮಾಡಿದಾಗ ಅಶ್ವತ್ಥ್‌ರವರನ್ನು ಒಂದು ಪ್ರಶ್ನೆ ಕೇಳಿದರು. “ಅಕಸ್ಮಾತ್ ರಾಜಕುಮಾರ್‌ರವರೆ ಬಂದು ನನ್ನ ಜೊತೆಯಲ್ಲಿ ನೀವು ಅಭಿನಯಿಸಬೇಕು ಎಂದು ಕರೆದರೆ ಅವರಿಗೆ ಏನೆಂದು ಉತ್ತರ ಕೊಡುತ್ತೀರಿ? ಅಭಿನಯದಿಂದ ದೂರ ಸರಿದಿರುವ ನಿಮ್ಮ ನಿರ್ಧಾರವನ್ನು ವಾಪಸು ತೆಗೆದುಕೊಳ್ಳುತ್ತೀರ?”

ಈ ಪ್ರಶ್ನೆಗೆ ಅಶ್ವತ್ಥ್ ಒಂದು ಗಳಿಗೆ ಏನೊಂದು ಉತ್ತರವನ್ನು ಕೊಡಲಿಲ್ಲ. ಸ್ವಲ್ಪ ಯೋಚಿಸಿದಂತಾದರು. ಅನಂತರ ಅವರು ಹೇಳಿದ್ದು ಹೀಗೆ “ಅಣ್ಣಾವ್ರು ಕರೆದರೆ ಮತ್ತೆ ಬರುತ್ತೀನಿ, ಮುಖಕ್ಕೆ ಬಣ್ಣ ಹಚ್ತೀನಿ” ಅಂದರು. ಕೆಲವೇ ದಿನಗಳಲ್ಲಿ ಪಾರ್ವತಮ್ಮ ರಾಜಕುಮಾರ್ ರವರು ಅಶ್ವತ್ಥ್‌ರವರ ಮನೆಗೆ ಬಂದರು. ತಾವು ತಯಾರಿಸುತ್ತಿರುವ ಶಬ್ದವೇಧಿ ಚಿತ್ರದಲ್ಲಿ ನಮ್ಮ ಯಜಮಾನರ ಜೊತೆ ನೀವು ಇರಬೇಕು ಎಂದು ಕರೆದಾಗ ಮತ್ತೆ ಚಿತ್ರರಂಗಕ್ಕೆ ಮರಳಿದರು. ರಾಜ್‌ರ ಮೇಲಿನ ವಿಶ್ವಾಸದಿಂದ ಹಲವು ವರ್ಷಗಳ ಕಾಲದಿಂದ ಬಿಟ್ಟಿದ್ದ ಚಿತ್ರರಂಗಕ್ಕೆ ಮತ್ತೆ ಸೇರಿದರು.

ರಾಜಕುಮಾರ್ ಅವರ ಅಭಿನಯದ ೨೦೬ ಚಿತ್ರಗಳಲ್ಲಿ ನೂರು ಚಿತ್ರಗಳಲ್ಲಿ ಅಶ್ವತ್ಥ್ ನಟಿಸಿದ್ದರು. ಶಬ್ಧವೇಧಿ ನಂತರ ಮೋಹಿನಿ, ಸಿರಿವಂತ, ಭೂಪತಿ ಚಿತ್ರಗಳಲ್ಲಿ ನಟಿಸಿದರು.

ಹರಿಯಿತು ಅಭಿಮಾನದ ಹಣ

ಅಶ್ವತ್ಥ್ ಅವರ ಮನೆ ಕಲಾಶ್ರೀ ಗೆ ಮಹಾಸಭೆಯ ವತಿಯಿಂದ ನಾನು ಶ್ರೀ ಎಮ್.ಎಸ್. ನಾಗರಾಜರಾವ್, ಶ್ರೀ ಎಮ್.ಎಸ್.ಲಕ್ಷ್ಮೀನಾರಾಯಣರಾವ್ ಮತ್ತು ಶ್ರೀ ಆರ್. ಗಣೇಶ ಪ್ರಸಾದ್‌ರವರೊಂದಿಗೆ ಹೋಗಿ ಅವರ ಪುತ್ರ ಶ್ರೀ ಶಂಕರ್‌ಅಶ್ವತ್ಥ್ ಮತ್ತು ಪುತ್ರಿ ಶ್ರೀಮತಿ ವಿಜಯರವರೊಂದಿಗೆ ಮಾತನ್ನಾಡುತ್ತಿದ್ದಾಗ ಶ್ರೀ ಶಂಕರ್ ಅಶ್ವತ್ಥ್‌ರವರು ೨೦೦೩ರಲ್ಲಿ ನಡೆದ ಘಟನೆಯ ವಿವರವೊಂದನ್ನು ಹೇಳಿದರು.

ಅದು ಅಶ್ವತ್ಥ್‌ರವರು ಚಿತ್ರರಂಗಕ್ಕೆ ವಿದಾಯ ಘೋಷಿಸಿ ನಿವೃತ್ತ ಜೀವನ ನಡೆಸುತ್ತಿದ್ದ ಸಮಯ. ಆರ್ಥಿಕವಾಗಿ ಹಾಗೂ ಮಾನಸಿಕವಾಗಿ ಕುಗ್ಗಿ ಹೋಗಿದ್ದರು. ಆರೋಗ್ಯ ಸ್ಥಿತಿಯೂ ಹದ ಗೆಟ್ಟಿತ್ತು. ದುರ್ಭಿಕ್ಷದಲ್ಲಿ ಅಧಿಕಮಾಸವೆಂಬಂತೆ ಬ್ಯಾಂಕಿನಲ್ಲಿ ಠೇವಣಿ ಇಟ್ಟಿದ್ದ ಅಲ್ಪ ಸ್ವಲ್ಪ ಹಣಕ್ಕೆ ಬರುತ್ತಿದ್ದ ಬಡ್ಡಿಯೂ ಸಹ ಬಹಳಷ್ಟು ಕಡಿಮೆಯಾಗತೊಡಗಿತ್ತು. ಆಗ ಜೀವನ ನಡೆಸುವುದೇ ಕಷ್ಟಕರವಾಗಿತ್ತು. ಅಂತಹ ಸಮಯದಲ್ಲಿ ಅವರು ತಮ್ಮ ಸೊಸೆ ಸುಧಾಗೆ ಹೇಳಿದ್ದು, "ನೋಡಮ್ಮಾ ದಿನೇ ದಿನೇ ಆದಾಯ ಕಡಿಮೆಯಾಗುತ್ತಿದೆ. ಹಾಗಾಗಿ ಇನ್ನು ಮುಂದೆ ನಾವು ಹಾಸಿಗೆ ಇದ್ದಷ್ಟು ಕಾಲು ಚಾಚಬೇಕು. ನಾವು ಖರ್ಚು ಕಡಿಮೆ ಮಾಡಬೇಕು ಆದ್ದರಿಂದ ಇನ್ನು ಮುಂದೆ ದಿನಕ್ಕೆ ಎರಡೇ ಊಟ ಸಾಕು." ಇಂತಹ ಪರಿಸ್ಥಿತಿಯಲ್ಲಿದ್ದಾಗಲೇ, ಆಪದ್ಬಾಂಧವರಂತೆ ಬಂದ ಶ್ರೀ ಗಣೇಶ್ ಕಾಸರಗೋಡು ರವರು ಅಪ್ಪನ ಬಗ್ಗೆ ವಿಜಯಕರ್ನಾಟಕ ಪತ್ರಿಕೆಯಲ್ಲಿ ಚದುರಿದ ಚಿತ್ರಗಳು ಅಂಕಣದಲ್ಲಿ ಲೇಖನವೊಂದನ್ನು ಬರೆದರು.

ಈ ಲೇಖನ ಎಂತಹ ಪರಿಣಾಮ ಬೀರಿತು ಎಂದರೆ ಅದು ನಮ್ಮ ಊಹೆಗೂ ನಿಲುಕದಂತಹುದಾಗಿತ್ತು. ಅಪ್ಪನ ಸ್ಥಿತಿಯ ಬಗ್ಗೆ ಪತ್ರಿಕೆಯಲ್ಲಿ ಓದಿದ ಕರ್ನಾಟಕದ ಇಡೀ ಅವರ ಅಭಿಮಾನಿಗಳು ಹಣ ಕಳಿಸಲು ಆರಂಭಿಸಿದರು. ಹಣ ಕಳಿಸಿದವರೆಲ್ಲ ಶ್ರೀಮಂತರೇನಲ್ಲ, ಹೇಳಬೇಕೆಂದರೆ ರದ್ದಿ (scrap) ಮಾರಾಟ ಮಾಡುವ ಒಬ್ಬ ಸಾಮಾನ್ಯ ಮನುಷ್ಯ ತನ್ನ ಹೆಂಡತಿಯೊಡನೆ ನಮ್ಮ ಮನೆ ಬಾಗಿಲವರೆಗೆ ಬಂದು ಒಂದಷ್ಟು ಹಣವನ್ನು ಕೊಟ್ಟು ಹೋದ. ಸನ್ಮಾನ ಮಾಡುತ್ತೇವೆಂದು ಹೇಳಿ ಹಣ ಕೊಡಲು ಆರಂಭಿಸಿದರು. ಹೊರ ದೇಶಗಳಲ್ಲಿದ್ದ, ಅವರ ಚಿತ್ರಗಳನ್ನು ನೋಡಿದ್ದ, ಅವರ ಅಭಿಮಾನಿಗಳು ಹಣ ಕಳಿಸಿದರು. ಸರ್ಕಾರವು ಸಹ ತಂದೆಯವರ ಆಸ್ಪತ್ರೆಯ ಖರ್ಚನ್ನು ವಹಿಸಿಕೊಂಡಿತು. ಆಗ ಅವರ ಪರಿಸ್ಥಿತಿ ಸ್ವಲ್ಪ ಮಟ್ಟಿಗೆ ಸುಧಾರಿಸಹತ್ತಿತು. ಆಗ ನಮಗೆ ಅರಿವಾಯಿತು ತಂದೆಯವರ ಚಿತ್ರಗಳಲ್ಲಿನ ಪಾತ್ರಗಳು ಎಷ್ಟರ ಮಟ್ಟಿಗೆ ಜನಸಾಮಾನ್ಯರ ಮೇಲೆ ತನ್ನ ಪ್ರಭಾವವನ್ನು ಬೀರಿದೆ, ಅವರು ಎಷ್ಟೊಂದು ಅಭಿಮಾನಿಗಳನ್ನು ಸಂಪಾದಿಸಿದ್ದಾರೆ ಎಂದು. ಇದಕ್ಕೆಲ್ಲ ಕಾರಣವಾಗಿದ್ದು "ವಿಜಯ ಕರ್ನಾಟಕ" ಪತ್ರಿಕೆ ಲೇಖನದ ಪ್ರಭಾವ ಎಂದು ಶಂಕರ್ ಅಶ್ವತ್ಥ್‌ರವರು ಸ್ಮರಿಸಿಕೊಂಡರು.

ಹೇಗೆ ಒಂದು ಪತ್ರಿಕೆಯಲ್ಲಿ ಜನಸಾಮಾನ್ಯರ ಹಾಗೂ ಕಲಾವಿದನ ಬಗ್ಗೆ ಬರೆದ ಲೇಖನವು ಪರಿಣಾಮ ಬೀರುತ್ತದೆ ಎನ್ನುವುದಕ್ಕೆ ಇದು ಒಂದು ಉದಾಹರಣೆಯಾಗಿದೆ.

ಕಾಶೀ ಯಾತ್ರೆ

ಕಾಶಿ ವಿಶ್ವನಾಥ ಅಶ್ವತ್ಥ್‌ರವರ ಇಷ್ಟದೈವ. ಆ ದೇವರಲ್ಲಿ ಅಪಾರ ಭಕ್ತಿಯನ್ನು ಇಟ್ಟುಕೊಂಡಿದ್ದರು. ಜೀವನದ ಮುಸ್ಸಂಜೆಯಲ್ಲಿ ಒಮ್ಮೆ ಕಾಶಿಗೆ ಹೋಗಿ ತನ್ನ ಆರಾಧ್ಯ ದೈವವನ್ನು ಕಣ್ತುಂಬಾ ನೋಡಿ ಬರಬೇಕೆಂಬ ಮಹದಾಸೆಯನ್ನು ಹೊಂದಿದ್ದರು. ಮಕ್ಕಳು ತಂದೆಯ ಈ ಆಸೆಯನ್ನು ಪೂರೈಸಲು ಅವರನ್ನು ಕಾಶಿಗೆ ಕರೆದುಕೊಂಡು ಹೋಗುತ್ತೇವೆಂದಾಗ, ತನ್ನ ಹಣವಲ್ಲಿ

ಕರೆದುಕೊಂಡು ಹೋಗುವುದಾದರೆ ಮಾತ್ರ ಕರೆದುಕೊಂಡು ಹೋಗಿ, ಇಲ್ಲದಿದ್ದರೆ ಸುತರಾಂ ಬೇಡವೆ ಬೇಡ ಎಂದು ಹೇಳಿಬಿಟ್ಟರು. ಅಂತಹ ಸ್ವಾಭಿಮಾನಿ ಅವರು.

ಅದಾಗಲೇ ಅವರಿಗೆ ಅನಾರೋಗ್ಯ ಆವರಿಸಿತ್ತು. ನಡೆಯಲೂ ಕಷ್ಟವಾಗುತ್ತಿತ್ತು. ಅಂತಹ ಸ್ಥಿತಿಯಲ್ಲಿಯೂ ಅವರನ್ನು ಮನೆಯವರು ವಿಮಾನದಲ್ಲಿ ಕಾಶಿಗೆ ಕರೆದುಕೊಂಡು ಹೋದರು. ಕಾಶಿ ವಿಶ್ವನಾಥನ ದರ್ಶನ ಮಾಡಿಸಿದರು. ಅವರು ಕೊಟ್ಟ ಹಣದಲ್ಲಿಯೇ ಪೂಜೆಯನ್ನು ಮಾಡಿಸಿದರು. ಆದರೆ ವಿಚಿತ್ರವೆಂದರೆ, ಅವರಿಗೆ ಅವರ ಇಷ್ಟ ದೇವರ ಮುಂದೆಯೇ ನಿಂತಿದ್ದರೂ ಆ ದೇವನ ಹೆಸರೇ ಮರೆತುಹೋಗಿತ್ತು. ವಿಶ್ವನಾಥನ ಹೆಸರನ್ನು ಹೇಳಿಸಲು ಮನೆಯವರು ಎಷ್ಟೇ ಪ್ರಯತ್ನ ಪಟ್ಟರೂ ಅವರಿಗೆ ದೇವರ ಹೆಸರನ್ನು ಹೇಳಲೇ ಆಗಲಿಲ್ಲ. ಅವರ ಬಾಯಿಯಲ್ಲಿ ಬರುತ್ತಿದ್ದ ಮಾತೆಂದರೆ ದೇವರು ದೇವರು ಎಂದಷ್ಟು ಮಾತ್ರ. ಅಶ್ವತ್ಥ್‌ರವರಿಗೆ ಈ ಪ್ರವಾಸದಿಂದ ದೇವರನ್ನು ನೋಡಿದ ತೃಪ್ತಿ ದೊರಕಿತೋ ಇಲ್ಲವೋ, ಆದರೆ ಅವರ ಮಕ್ಕಳಿಗೆ ಮಾತ್ರ ತಂದೆಗೆ ಕಾಶಿ ಯಾತ್ರೆ ಮಾಡಿಸಿದ ಸಮಾಧಾನ ಮಾತ್ರ ಸಿಕ್ಕಿತು.

ಕಲಾಜಗತ್ತಿಗೆ ಅಂತಿಮ ವಿದಾಯ

೧೮.೦೧.೨೦೧೦, ಸೋಮವಾರ ಬೆಳಿಗ್ಗೆ ಟಿವಿ. ನೋಡುತ್ತಿದ್ದವರಿಗೆ ಒಂದು ಆಘಾತಕರ ಸುದ್ದಿ ಪ್ರಸಾರವಾಗುತ್ತಿತ್ತು.

ಸುಮಾರು ಐದು ದಶಕಗಳ ಕಾಲ ಕನ್ನಡ ಚಿತ್ರ ಜಗತ್ತಿನಲ್ಲಿ ಪೋಷಕ ನಟನಾಗಿ, ಮರ್ಯಾದಾ ಪುರುಷೋತ್ತಮನಾಗಿ, ಚಿತ್ರರಸಿಕರ ಮನೆ ಮನಗಳನ್ನು ಗೆದ್ದಿದ್ದ, ಭಾವುಕಜೀವಿ ಕೆ.ಎಸ್. ಅಶ್ವತ್ಥ್‌ರವರು ಕಲಾಜಗತ್ತಿಗೆ ಅಂತಿಮ ವಿದಾಯ ಹೇಳಿ ಹೋದರು.

ಅಂದಿಗೆ ಕೇವಲ ಇಪ್ಪತ್ತೇ ದಿನದ ಹಿಂದೆ ನಾಗರಹಾವು ಚಿತ್ರದ ಅವರ ಪ್ರೀತಿಯ ಶಿಷ್ಯ 'ರಾಮಾಚಾರಿ'ಯನ್ನು ಕಳೆದುಕೊಂಡು ಬಡವಾಗಿದ್ದ ಚಿತ್ರರಂಗ ಚಾಮಯ್ಯ ಮೇಷ್ಟ್ರನ್ನೂ ಕಳೆದುಕೊಂಡು ಮತ್ತಷ್ಟು ಬಡವಾಯಿತು. ಹೀಗೆ ಗುರು ಶಿಷ್ಯರಿಬ್ಬರನ್ನೂ ಕೇವಲ ಒಂದೆ ತಿಂಗಳಿನಲ್ಲಿ ಕಳೆದುಕೊಳ್ಳುವಂತಾಗಿದ್ದು ಚಿತ್ರರಂಗಕ್ಕೆ ತಡೆದುಕೊಳ್ಳಲಾಗದ ನಷ್ಟವೇ ಸರಿ.

ವಿಷ್ಣುವರ್ಧನ್‌ರವರ ಸಾವಿನ ನಂತರ ತೀರಾ ವಿಷಣ್ಣವದನರಾಗಿದ್ದ ಅಶ್ವತ್ಥ್‌ರವರಿಗೆ ಕಾಶಿ ಯಾತ್ರೆ ಮಾಡಬೇಕು, ವಿಶ್ವನಾಥನ ದರ್ಶನಮಾಡಬೇಕು ಎಂಬ ಆಸೆ ಉಂಟಾಯಿತು. ಅವರ ಈ ಆಸೆಗೆ ಸ್ಪಂದಿಸಿದ ಕುಟುಂಬದವರು ಅವರ ಅನಾರೋಗ್ಯದಲ್ಲಿಯೂ, ಅವರನ್ನು ಕಾಶಿಗೆ ಕರೆದೊಯ್ಯುವ ವ್ಯವಸ್ಥೆಯನ್ನು ತಕ್ಷಣವೇ ಮಾಡಿದರು. ಆದರೆ ಯಾರಿಗೆ ಗೊತ್ತಿತ್ತು ? ಅವರ ಕಾಶೀಯಾತ್ರೆಯ ನಂತರ ಅವರು ವೈಕುಂಠಯಾತ್ರೆಯನ್ನೂ ಮಾಡುವರೆಂದು?

ಜನವರಿ ೨ ರಿಂದಲೇ ಅವರ ಆರೋಗ್ಯ ಕೆಟ್ಟಿತ್ತು. ಆದರೂ ಅವರು ಜನವರಿ ೬ ರಿಂದ ಕಾಶೀ ಯಾತ್ರೆಗೆ ಹೋಗಿದ್ದು ೧೦ಕ್ಕೆ ಮೈಸೂರಿಗೆ ವಾಪಸಾಗಿದ್ದರು. ೧೧ರಂದು ಅವರನ್ನು

ಆಸ್ಪತ್ರೆಗೆ ಸೇರಿಸಲಾಗಿತ್ತು. ಗಲರಂದು ಅವರು ಶಾಶ್ವತವಾಗಿ ಈ ಲೋಕದಿಂದ ಅವರ ಕುಟುಂಬದವರನ್ನೂ ಅವರ ಅಭಿಮಾನಿಗಳನ್ನು ಬಿಟ್ಟು ಹೋದರು.

ಅವರ ಸಾವಿನ ಸುದ್ದಿ ಪ್ರಕಟವಾಗುತ್ತಿದ್ದಂತೆ ಮೈಸೂರಿಗೆ ಮೈಸೂರೇ ಅವರ ಮನೆ ಮುಂದೆ ಜಮಾಯಿಸತೊಡಗಿತು. ಅವರ ಮನೆ ಹತ್ತಿರವೇ ಇದ್ದ, ಅವರು ಪ್ರತಿನಿತ್ಯ ವಾಯುವಿಹಾರಕ್ಕಾಗಿ ಹೋಗುತ್ತಿದ್ದ, ಜವರೇಗೌಡ ಉದ್ಯಾನವನದಲ್ಲಿ ಜನ ಶಿಸ್ತಾಗಿ ಬಂದರು, ಸಾಲುಸಾಲಾಗಿ ಬಂದರು. ಚಿತ್ರ ಜಗತ್ತಿನಲ್ಲಿ ತಮ್ಮ ಭಾವಪೂರ್ಣ ಅಭಿನಯದಿಂದ ಪ್ರೇಕ್ಷಕರ ಮನಸೂರೆಗೊಂಡಿದ್ದ ತಮ್ಮ ನೆಚ್ಚಿನ ಕಲಾವಿದನ ಅಂತಿಮ ದರ್ಶನಕ್ಕಾಗಿ ಸಾಲಿನಲ್ಲಿ ಗಂಟೆಗಟ್ಟಲೆ ಶಾಂತಿ ಸಹನೆಯಿಂದ ಶಿಸ್ತಾಗಿ ನಿಂತರು. ಯಾವುದೇ ಗಲಭೆ ಗೊಂದಲಗಳಿಗೆ ಅವಕಾಶವಿಲ್ಲದೆ, ಶಿಸ್ತಿನ ಸಿಪಾಯಿಯಾಗಿ ಬಾಳಿ ಬದುಕಿದ ತಮ್ಮ ಅಚ್ಚು ಮೆಚ್ಚಿನ ನಟನಿಗೆ ಶಿಸ್ತಿನ ರೀತಿಯಲ್ಲಿಯೇ ಅಂತಿಮ ವಿದಾಯವನ್ನು ಹೇಳಿದ್ದು ಮೈಸೂರಿನ ಸಂಸ್ಕೃತಿಗೆ ಮಾದರಿಯಾಗಿತ್ತು.

ಅಂದು ಮೈಸೂರಿನ ಎಲ್ಲ ಶಾಲಾ ಕಾಲೇಜುಗಳಿಗೂ ರಜೆ ಘೋಷಿಸಲಾಗಿದ್ದರೆ ಸಾರ್ವಜನಿಕವಾಗಿ ಅಘೋಷಿತ ಬಂದ್ ಆಗಿ ಇಡೀ ಮೈಸೂರಿಗೆ ಮೈಸೂರೇ ತಮ್ಮ ಅಚ್ಚು ಮೆಚ್ಚಿನ ನಟರತ್ನನಿಗೆ ಅಂತಿಮ ವಿದಾಯ ಹೇಳಿತು.

ಅಶ್ವತ್ಥ್‌ರ ಕಣ್ಮರೆಯಿಂದ ಚಿತ್ರರಂಗದ ಸಭ್ಯ, ಸುಸಂಸ್ಕೃತ ಅಭಿನಯದ ಪರಂಪರೆಯೊಂದು ಮುಗಿದಂತಾಗಿದೆ.

ಅಜಾತ ಶತ್ರು, ಮರ್ಯಾದಾ ಪುರುಷ, ಚಿತ್ರ ರಸಿಕರ ಹೃನ್ಮನಗಳನ್ನು ಗೆದ್ದಿದ್ದ ಅಶ್ವತ್ಥ್‌ರವರು ಇನ್ನಿಲ್ಲ. ಆದರೆ ಇವರು ಮಾಡಿದ ಪಾತ್ರಗಳು ಇಂದಿಗೂ ಎಂದೆಂದಿಗೂ ಅವರನ್ನು ಜೀವಂತವಾಗಿರಿಸುತ್ತವೆ.

ಜಗತ್ತಿನಲ್ಲಿ ಯಾರೂ ಅನಿವಾರ್ಯವಲ್ಲ. "ಜಾತಸ್ಯ ಮರಣಂ ಧ್ರುವಂ" ಎಂಬುದೂ ಸತ್ಯ. ಈ ಸತ್ಯದ ಬೆನ್ನಲ್ಲೇ ಅಶ್ವತ್ಥ್‌ರವರ ಸಾವಿನ ನಂತರ ಚಿತ್ರರಂಗದಲ್ಲಿ ಒಂದು ದೊಡ್ಡ ಶೂನ್ಯವುಂಟಾಗಿದೆ ಎನ್ನುವುದೂ ಅಷ್ಟೇ ಸತ್ಯ.

ಅಶ್ವತ್ಥ್ ಬಗ್ಗೆ ಗಣ್ಯರು ಹೇಳಿದ್ದು

ಅಶ್ವತ್ಥ್ ಒಬ್ಬ ಪ್ರೌಢ ಕಲಾವಿದರಾಗಿದ್ದರು. ಒಬ್ಬ ವ್ಯಕ್ತಿಯಾಗಿ ಸಜ್ಜನಿಕೆ, ಸಚ್ಚಾರಿತ್ರ್ಯಕ್ಕೆ ಹೆಸರಾಗಿದ್ದರು. ಅವರ ನಿಧನದಿಂದ ಮುಗ್ಧ, ಪ್ರಾಮಾಣಿಕ ಮನಸ್ಸಿನ ಶ್ರೇಷ್ಠ ಕಲಾವಿದನನ್ನು ಕನ್ನಡ ಚಿತ್ರ ರಂಗ ಕಳೆದುಕೊಂಡಿದೆ.

– ಬಿ.ಎಸ್. ಯಡಿಯೂರಪ್ಪ
ಮುಖ್ಯಮಂತ್ರಿ

ನಮ್ಮೆಲ್ಲರ ತಂದೆಯಂತಿದ್ದ ಅಶ್ವತ್ಥ್ ಕನ್ನಡ ಚಿತ್ರರಂಗದ ಆಲದ ಮರದಂತಿದ್ದರು. ಅವರ ನೆರಳಲ್ಲಿ ನಾವೆಲ್ಲ ಬದುಕುತ್ತಿದ್ದೆವು. ಈಗ ಆಲದ ಮರವೇ ಧರೆಗುರುಳಿದೆ.

– ಶ್ರೀನಾಥ್
ನಟ, ಶಾಸಕ

ಅಂತಹ ಶ್ರೇಷ್ಠ ವ್ಯಕ್ತಿಯನ್ನು ಕಳೆದುಕೊಳ್ಳಬಾರದಿತ್ತು. ಹೊಸ ವರ್ಷ ನೋವಿನಿಂದ ಆರಂಭವಾಗುತ್ತಿದೆ.

– ಲೀಲಾವತಿ ಮತ್ತು ವಿನೋದರಾಜ್
ಚಿತ್ರ ನಟಿ ಮತ್ತು ಚಿತ್ರನಟ

ಲಕ್ಸುರಿ ಜೀವನ ನಡೆಸಲು ಇಚ್ಛಿಸದ ಅಶ್ವತ್ಥ್ ಸರಳವಾಗಿಯೇ ಜೀವಿಸಿದರು. ೪೯ ಚಿತ್ರಗಳಲ್ಲಿ ಅವರೊಡನೆ ಕಾಣಿಸಿಕೊಂಡಿದ್ದೇನೆ. ಅವರನ್ನು ಕಳೆದುಕೊಂಡ ನಾವು ದುರದೃಷ್ಟವಂತರು.

– ದ್ವಾರಕೀಶ್
ನಟ-ನಿರ್ಮಾಪಕ

ಅಶ್ವತ್ಥ್ ಅವರದು ಕಠಿಣ ಶಕ್ತಿ. ಅವರಷ್ಟು ನಿಷ್ಠೆ ಮತ್ತು ಪ್ರಾಮಾಣಿಕತೆಯಿಂದ ಇರಲು ಸಾಧ್ಯವೇ ಇಲ್ಲ. ಅವರ ನಿಧನದಿಂದ ಶೂನ್ಯ ಭಾವನೆ ಕಾಡುತ್ತಿದೆ.

– ಲೋಕನಾಥ್
ನಟ

ಆದರ್ಶನೀಯ ವ್ಯಕ್ತಿತ್ವದ ಅಶ್ವತ್ಥ್ - ಪೋಷಕ ಪಾತ್ರಗಳಿಗೆ ಜೀವ ತುಂಬಿದ್ದಾರೆ. ಚಾಮಯ್ಯ ಮೇಷ್ಟ್ರ ಪಾತ್ರಧಾರಿ ಅಶ್ವತ್ಥ್ ಅವರನ್ನು ನೋಡುವುದೇ ಒಂದು ಚಂದ.

- ಶಿವರಾಮ್
ಚಿತ್ರ ನಟ

ಈಗಿನ ಕಲಾವಿದರು ಅಶ್ವತ್ಥ್ ಅವರಿಂದ ಕಲಿಯಬೇಕಾದುದು ಬಹಳಷ್ಟಿದೆ. ಅವರ ಮಾರ್ಗ ದರ್ಶನದಲ್ಲಿ ನಡೆಯಬೇಕು. ಶಿಸ್ತು ಮತ್ತು ಪ್ರಾಮಾಣಿಕತೆಯಲ್ಲಿ ಅಶ್ವತ್ಥ್ ಅವರನ್ನು ಬಿಟ್ಟರೆ ಯಾರೂ ಸರಿಸಾಟಿಯಿಲ್ಲ. ೩೫೦ ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಸಿದ ಅವರು ನಾಯಕ ನಟರಿಗೆ ಸಮಾನವಾದ ಪೋಷಕ ಪಾತ್ರಗಳನ್ನು ನಿಭಾಯಿಸಿಕೊಂಡು ಬಂದರು.

- ಶೀನಿವಾಸ ಮೂರ್ತಿ
ಚಿತ್ರ ನಟ

ಚಿತ್ರರಂಗಕ್ಕೆ ಅಡಿಪಾಯ ಹಾಕಿಕೊಟ್ಟ ಅಶ್ವತ್ಥ್ ಅವರಂಥ ನಟರನ್ನು ಸ್ಮರಿಸಿಕೊಳ್ಳದಿದ್ದರೆ ಇಂದಿನ ಯುವ ನಟರು ತರಗೆಲೆಗಳಂತೆ ಉದರುತ್ತಾರೆ. ಅವರನ್ನು ನೆನೆಸಿಕೊಂಡು ಜೀವನ ನಡೆಸಿದರೆ ಅವರು ಶಿಖರದಷ್ಟು ಎತ್ತರಕ್ಕೆ ಬೆಳೆಯುತ್ತಾರೆ.

- ಬಿ. ರಾಮಮೂರ್ತಿ
ನಿರ್ದೇಶಕ

ಜೀವನ ಪರ್ಯಂತ ಸರಳತೆಯನ್ನೇ ಮೈಗೂಡಿಸಿಕೊಂಡ ಅಶ್ವತ್ಥ್ ಸಾವು ದೊಡ್ಡ ನೋವು ಉಂಟುಮಾಡಿದೆ. ಹೆಚ್ಚು ಸಂಭಾವನೆ ಪಡೆಯದೆ ಈ ಕಾಲದಲ್ಲೂ ಗಾಂಧಿಯಂತೆ ಸರಳ ಜೀವನ ನಡೆಸಿದ ಮೇರುನಟ.

- ಸಾಯಿಪ್ರಕಾಶ್
ನಿರ್ಮಾಪಕ

ಸಹೋದ್ಯೋಗಿಗಳ ಮೆಚ್ಚುಗೆ

ಅಮೂಲ್ಯ ರತ್ನ

- ಸಂಪತ್
ಹಿರಿಯ ಪೋಷಕ ನಟರು

ಕನ್ನಡ ಚಲನಚಿತ್ರರಂಗದ ಜನಪ್ರಿಯ ಕಲಾವಿದನೊಬ್ಬನ ಬಗ್ಗೆ, ಅದರಲ್ಲೂ ನನ್ನ ಬಾಳಿನಲ್ಲಿ ಒಡನಾಡಿಯಾಗಿ, ರಂಗಭೂಮಿಯಮೇಲೆ ಒಂದೊಮ್ಮೆ ಹಲವು ಬಾರಿ ತಮ್ಮ ಅಭಿನಯ ಪ್ರೌಢಿಮೆಯಿಂದ ನನ್ನ ಮೆಚ್ಚುಗೆಗೂ ಆಶ್ಚರ್ಯಕ್ಕೂ ಪಾತ್ರರಾದ, ಚಲನಚಿತ್ರ ಕಲಾವಿದನೊಬ್ಬನ ಬಗ್ಗೆ ಬರೆಯಲು, ಲೇಖಕನಾಗಿ ಬರೆಯಬಲ್ಲ ಶಕ್ತಿ, ಚೈತನ್ಯ ನನ್ನಲ್ಲಿ ಬೆಳೆದುಬಾರದಿದ್ದರೂ ಬರೆಯಬೇಕಾದ್ದು ನನ್ನ ಕರ್ತವ್ಯವಾದ ಕಾರಣ, ಅತಿ ಉತ್ಸಾಹ ಹಾಗೂ ಹರ್ಷದಿಂದ ಈ ಲೇಖನ ಬರೆಯಲು ಬೆಂಗಳೂರಿನ "ಅಶ್ವತ್ಥ್ ಸನ್ಮಾನ ಸಮಿತಿ" ಯವರ ಒತ್ತಾಯಕ್ಕೆ ಸಹಜವಾಗಿಯೇ ಸಮ್ಮತಿಸಿದೆ. ಆ ಕಲಾವಿದ ಇಂದು ಎಲ್ಲೆಲ್ಲೂ ಮನೆ ಮಾತಾಗಿರುವ ಕನ್ನಡ ಚಲನಚಿತ್ರರಂಗದ ಶತಚಿತ್ರಗಳ ನಟ ಅಶ್ವತ್ಥ್.

ಆಕಾಶವಾಣಿಯಲ್ಲಿ

ಅಶ್ವತ್ಥ್ ಹಾಗೂ ನನ್ನ ಗೆಳೆತನದ ಆತ್ಮೀಯತೆ, ವಿಶ್ವಾಸದ ಬಾಂಧವ್ಯ ನೆನ್ನೆ ಮೊನ್ನೆಯದಲ್ಲ. ಬಹು ಹಿಂದಿನದು. ಬಹಳ ಹಳೆಯದು. ಮೈಸೂರಿನ ಆಕಾಶವಾಣಿಯಲ್ಲಿ ನಾವಿಬ್ಬರೂ ಒಟ್ಟಿಗೆ ಕಲಾವಿದರಾಗಿ, ಹಲವಾರು ಚಾರಿತ್ರಿಕ ಸಾಮಾಜಿಕ, ಪ್ರಸಾರ ನಾಟಕಗಳಲ್ಲಿ ಭಾಗವಹಿಸಿದ ಸಂದರ್ಭವು ಬಹು ಚಿರಸ್ಮರಣೀಯವಾದ ನೆನಪು. ಕನ್ನಡನಾಡಿನ ಹಿರಿಯ ಸಾಹಿತಿಗಳಾದ ಮಾನ್ಯ ಶ್ರೀ ಕೆ.ವಿ. ಅಯ್ಯರ್‌ರವರ ಅಮರ ಕೃತಿ "ರೂಪದರ್ಶಿ" ಕಾದಂಬರಿಯನ್ನು, ಕನ್ನಡ ಸಾಹಿತ್ಯರಂಗದ ಹಿರಿಯ ಸಾಹಿತಿಗಳೂ, ಕವಿಗಳೂ ಆದ ಶ್ರೀ ಜಿ.ಪಿ.ರಾಜರತ್ನಂರವರು ಪ್ರಸಾರ ನಾಟಕವಾಗಿ ಅಳವಡಿಸಿ ನಾಲ್ಕು ವಾರ ಪ್ರಸಾರವಾದ ಆ ನಾಟಕದಲ್ಲಿ ನಾನೂ ಹಾಗೂ ಮಿತ್ರ ಅಶ್ವತ್ಥ್‌ರವರು ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದೆವು. ಅಶ್ವತ್ಥ್‌ರವರು ದೊರೆತ ಪಾತ್ರವನ್ನು ಭಾವಪೂರ್ಣವಾಗಿ ಅಭಿನಯಿಸಿ, ನಾಟಕದ ಘನತೆ ಗೌರವಗಳಿಗೂ ಮನ್ನಣೆ ತಂದುಕೊಟ್ಟು, ನಿಲಯದ ನಿರ್ದೇಶಕರ, ವ್ಯವಸ್ಥಾಪಕರ ಹಾಗೂ ಆಲಿಸಿಕೊಂಡ ಶ್ರೋತೃಗಳ ಅಭಿಮಾನ ಪ್ರಶಂಸೆಗೆ ಪಾತ್ರರಾದರು. ಮೆಚ್ಚುಗೆಯ ನುಡಿಗಳೂ ಹಲವಾರು ಪತ್ರಗಳು ಪ್ರಾಪ್ತವಾದುವು ಅಶ್ವತ್ಥ್‌ರವರ ಪಾಲಿಗೆ.

ಅಶ್ವತ್ಥ್‌ರವರ ಅಸಾಧಾರಣ ಅಭಿನಯ ಕಲೆ, ಪ್ರೌಢಿಮೆ ಮಿಗಿಲಾಗಿ ದೊರೆತ ಪಾತ್ರವನ್ನು ಆಳವಾಗಿ ಅಭ್ಯಾಸ ಮಾಡಿ ಅನಂತರ ಬಲು ಸಹಜವಾಗಿ ಅಭಿನಯಿಸುವ ಇವರ ಸಹಜ ಅಭಿನಯ ಕಂಡು ನಾನು ಮುಗ್ಧನಾಗಿ ಆಕರ್ಷಿತನಾದೆ. ಕಲಾವಿದನೊಬ್ಬನಿಗೆ ಈ ಸಾಕ್ಷಾತ್ಕಾರದ

ಪ್ರಾಪ್ತಿಗಿಂತ ಮಿಗಿಲಾದ ಭಾಗ್ಯವೇನಿದೆ? ಆ ಭಾಗ್ಯದ ಪ್ರಾಪ್ತಿಯನ್ನು ಪರಮಾತ್ಮ ಕೈಗೆಟುಕಿಸಿದ - ಇವರ ಸ್ನೇಹ, ಸಹವಾಸದಿಂದ ಪ್ರಸಾರ ನಾಟಕಗಳೆಂದರೆ ಅಷ್ಟು ಸುಲಭವೇನಲ್ಲ. ಅಭಿನಯಿಸುವುದು ಅಥವಾ ಅಷ್ಟು ಬೇಗ ಪ್ರಯೋಗಕ್ಕೆ ತರುವುದು! ಬೇಗನೆ ಕಲಾವಿದನಿಗೆ ಕರಗತವಾಗುವ ಕಲೆಯೂ ಅಲ್ಲ, ಇದು. ಪ್ರಸಾರ ನಾಟಕಗಳಲ್ಲಿ ಭಾವಹಿಸುವ ಕಲಾವಿದನಿಗುತ್ತೂ, ಸಂಭಾಷಣೆ ಹಾಗೂ ಸನ್ನಿವೇಶಗಳ ಹಂತಹಂತಕ್ಕೂ ತನ್ನ ದನಿಯಲ್ಲಿ ಸಾಮ್ಯತೆ ಹಿಡಿತ, ಆಲಿಸುತ್ತಿರುವ ಶ್ರೋತೃಗಳ ಮೈ-ಮನಮರೆಯಿಸಿ ಅವರುಗಳನ್ನು ಭಾವನಾ ಪ್ರಪಂಚಕ್ಕೆ ಸೆಳೆದರೇನೇ ಅಂತಹ ಕಲಾವಿದ, ಪ್ರಸಾರ ನಾಟಕದ ಕಲಾವಿದನಾಗುವ ಸಾಮರ್ಥ್ಯ, ಲಕ್ಷಣ, ಅರ್ಹತೆ ಪಡೆದಂತೆ. ಅಂತಹ ಸಾಮರ್ಥ್ಯ, ದನಿಯ ಮೇಲಿನ ಹಿಡಿತ ಅಶ್ವತ್ಥ್‌ರವರಿಗಿದ್ದುದು, ಪ್ರಸಾರ ನಾಟಕಗಳಲ್ಲಿ ಇವರ ವಿಜಯ ದುಂದುಭಿ ಮೊಳಗಲು ಕಾರಣವಾಯಿತು.

ಈ ಸಂದರ್ಭದಲ್ಲಿ ಕನ್ನಡ ಪ್ರಸಾರ ನಾಟಕಗಳಲ್ಲಿ ಪರಿಣತರಾದ ಪ್ರತಿಭಾವಂತರಾದ ಡಾ|| ಹೆಚ್. ಕೆ. ರಂಗನಾಥ್ ಹಾಗೂ ಶ್ರೀ ವಾಮನರಾವ್ ಮಿತ್ರರುಗಳನ್ನು ಸ್ಮರಿಸುವುದು ಅನಿವಾರ್ಯ. ಅಚೇತನವಾಗಿ ಮೂಲೆಯಲ್ಲಿ ಬಿದ್ದಿರುವ ಜಡವಾದ ಶಿಲೆಯೊಂದು ಶಿಲ್ಪಿಯ ಚಾಣದ ಪೆಟ್ಟಿಗೆ ಸಿಕ್ಕಿ, ಅದು ಸುಂದರ ವಿಗ್ರಹದ ರೂಪತಾಳಿದಾಗ, ಮನಸೆಳೆಯುವ ಸಾಧನವಾಗಬಹುದು. ಸುಪ್ತವಾಗಿ ಅಶ್ವತ್ಥ್‌ರವರಲ್ಲಿ ಅಡಗಿದ್ದ ಅಂತಹ ಕಲಾ ಚೈತನ್ಯವನ್ನು, ಪ್ರತಿಭೆಯನ್ನು ಗುರುತಿಸಿದವರಲ್ಲಿ ಬಾನುಲಿಯ ಮಿತ್ರರಾದ ಮೇಲ್ಕಂಡ ಪರಿಣತರು ಮೊದಲಿಗರು. ಇವರುಗಳು ಅಶ್ವತ್ಥ್‌ರವರಲ್ಲಿ ಅಡಗಿದ್ದ ಅಂತಹ ಕಲಾ ಚೈತನ್ಯವನ್ನು ಸಚೇತನಗೊಳಿಸಿ ಕನ್ನಡ ರಂಗಭೂಮಿಗೂ, ಕನ್ನಡ ಚಲನ ಚಿತ್ರರಂಗಕ್ಕೂ ಮಹೋನ್ನತವಾದ ಅಮೂಲ್ಯ ರತ್ನವೊಂದನ್ನು ಒದಗಿಸಿಕೊಟ್ಟಿದ್ದಾರೆ. ಈ ಗೆಳೆಯರ ಮಾರ್ಗದರ್ಶನ ಸಹಕಾರ, ಬೆಂಬಲದಿಂದ ಅಶ್ವತ್ಥ್‌ರವರು ಒಬ್ಬ ಕಲಾವಿದನಾಗಿ ಪಳಗಿ ಕನ್ನಡ ರಂಗಭೂಮಿಗೆ ಸೇವೆ ಸಲ್ಲಿಸುವ ಸಾಮರ್ಥ್ಯ ಪಡೆಯುವಂತಾಯಿತು.

ಇಲ್ಲಿಂದ ಕಲಾವಿಲಾಸಿ ರಂಗಭೂಮಿಗೆ ಪಾದ ಊರಿದ ಅಶ್ವತ್ಥ್‌ರವರ ಪ್ರತಿಭೆ ಅಗಾಧವಾಗಿ ಬೆಳೆದು ಶಾಲಾ ಕಾಲೇಜುಗಳ ವಾರ್ಷಿಕೋತ್ಸವ ಹಾಗೂ ಇತರ ಸಮಾರಂಭಗಳ ಅಂಗವಾಗಿ ಪ್ರಯೋಗಕ್ಕೆ ತಂದ ನಾಟಕಗಳಲ್ಲಿ ಅಭಿನಯಿಸಿ ಅಭಿನಯ ಕಲೆ ಕರಗತವಾಯಿತು. ಹಲವರಿಗೆ ಅಭಿನಯ ಕಲಿತು ಬಂದದ್ದು ಅಥವಾ ನೋಡಿ ಬಂದದ್ದು ಅಥವಾ ಹೇಳಿಕೊಟ್ಟು ಬಂದದ್ದು. ಆದರೆ ಅಶ್ವತ್ಥ್‌ರವರ ಅಭಿನಯ ಕಲೆ ರಕ್ತಗತವಾಗಿ ಹರಿದು ಬಂದ ಕಲಾವಾಹಿನಿಯಂತೆ. ಕಲಾವಿದನ ಶಕ್ತಿಗಾಗಲೀ. ಪ್ರತಿಭೆಗಾಗಲೀ ಸೀಮೆಯೊಂದಿರುವುದಿಲ್ಲ. ಆತನಲ್ಲಿ ಸುಪ್ತವಾಗಿ ಅಡಗಿರುವ ಕಲಾ ಶಕ್ತಿ ಸೀಮಾತೀತವಾಗಿರುವುದು. ಅದು ಅವಕಾಶ ದೊರೆತಾಗ ಅದರ ಕ್ಷೇತ್ರವನ್ನು ಆರಿಸಿಕೊಂಡು ನಿರರ್ಗಳವಾಗಿ ನದಿಯ ನೀರಿನಂತೆ ಮುನ್ನಡೆಯುತ್ತಿರುತ್ತದೆ. ಕಲಾವಿದನ ಪ್ರತಿಭೆ ಅತೀತವಾದದ್ದು. ರಂಗಭೂಮಿಯಿಂದ ಚಲನಚಿತ್ರ ಕ್ಷೇತ್ರಕ್ಕೆ ಇವರಲ್ಲಿದ್ದ ಕಲಾಪ್ರತಿಭೆ ಎಳೆದುಕೊಂಡು ಹೋಯಿತು.

ಕಛೇರಿಯಿಂದ ಕಲಾಲೋಕಕ್ಕೆ

ಕಛೇರಿಯ ಕೋಣೆಯಲ್ಲಿ ಕಡತಗಳ ಮೇಲೆ ಕೈ ಆಡಿಸುತ್ತಿರುವಾಗ ಕೈ ಬೀಸಿ ಕರೆಯಿತು, ಕರ್ನಾಟಕದ ಚಲನ ಚಿತ್ರರಂಗ. ವ್ಯಕ್ತಿ ಜೀವನದ ನಿರ್ವಹಣೆಗಾಗಿ ಹೆಗಲ ಮೇಲೆ ಸಂಸಾರದ ನೊಗ ಹೇರಿಕೊಂಡು ಸರ್ಕಾರದ ಕೆಲಸವನ್ನು ಆಶ್ರಯಿಸಬೇಕಾಗುತ್ತದೆ. ಬೆಳಗ್ಗೆಯಿಂದ ಸಂಜೆಯವರೆಗೂ ಗಾಣದ ಎತ್ತಿನಂತೆ ದುಡಿದು, ದಣಿಯುತ್ತಿರುವಾಗ ಕಾಲಪುರುಷನ ಕಣ್ಣು ಬಿತ್ತು. ಕಲಾವಿದ ಅಶ್ವತ್ಥ್‌ರವರ ಮೇಲೆ. ಇಂತಹ ಪ್ರತಿಭಾವಂತ ಹೀಗೆ ಮೂಲೆಯಲ್ಲಿ ಕೊಳೆಯುವುದು ಸಹಜವಲ್ಲವೆನಿಸಿತೋ ಏನೋ, ಭಾಗ್ಯ ರೇಖೆ ಬರೆಯುವ ಆ ಬ್ರಹ್ಮನಿಗೆ. ಥಟ್ಟನೆ ಬ್ರಹ್ಮ ಸರ್ಕಾರಿ ಇಲಾಖೆಯಿಂದ ಚಲನಚಿತ್ರ ಇಲಾಖೆಗೆ ವರ್ಗಾಯಿಸಿದ. ಮುಂದೆ ಚಲನಚಿತ್ರರಂಗವೇ ಜೀವನ ಹಾಗೂ ಕಲಾಸಾಧನೆಯ ಕ್ಷೇತ್ರವಾಯಿತು, ಈ ಕಲಾರಾಧಕನಿಗೆ, ಈ ತಪಸ್ವಿಗೆ. ದಾಕ್ಷಿಣಾತ್ಯ ಚಲನ ಚಿತ್ರರಂಗದ ಹಿರಿಯ ನಿರ್ಮಾಪಕರೂ - ನಿರ್ದೇಶಕರೂ ಆದ ಶ್ರೀ ಕೆ. ಸುಬ್ರಮಣ್ಯಂರವರು ಒಮ್ಮೆ ರಂಗಭೂಮಿಯ ಮೇಲೆ ಕಂಡ ಅಶ್ವತ್ಥ್‌ರವರನ್ನು, ಇವರಲ್ಲಿ ಅಭಿನಯ ಕಲೆ ಚಾತುರ್ಯವನ್ನು ಗುರುತಿಸಿ ಅಂದು ಈಗಿನ ಪ್ರೀಮಿಯರ್ ಸ್ಟುಡಿಯೋ ಮಾಲೀಕರಾದ ಶ್ರೀ ಎಮ್.ಎನ್. ಬಸವರಾಜಯ್ಯನವರು ನಿರ್ಮಿಸುತ್ತಿದ್ದ, ತಾವು ನಿರ್ದೇಶಿಸುತ್ತಿದ್ದ "ಸ್ತ್ರೀರತ್ನ" ಕನ್ನಡ ಚಿತ್ರಕ್ಕಾಗಿ ಕಥಾ ನಾಯಕನ ಪಾತ್ರಕ್ಕೆ ಆಯ್ಕೆ ಮಾಡಿಕೊಂಡರು. ಇದು ಅಶ್ವತ್ಥ್‌ರವರ ಪ್ರಪ್ರಥಮ ಹೆಜ್ಜೆ ಚಲನಚಿತ್ರರಂಗಕ್ಕೆ. ಮತ್ತೆ ನಾವಿಬ್ಬರೂ ಸಂಧಿಸಿದ್ದು ಶ್ರೀ ಕೆ. ಸುಬ್ರಮಣ್ಯಂರವರ ಮೇಲ್ವಿಚಾರಣೆಯಲ್ಲಿ ನಿರ್ಮಿತವಾದ "ಕಚದೇವಯಾನಿ" ಎಂಬ ಕನ್ನಡ ಪೌರಾಣಿಕ ಚಿತ್ರದಲ್ಲಿ. ಹೀಗೆ ತಳವೂರಿದ ಈ ಕಲಾವಿದ ಮುಂದೆ ತ್ರಿವಿಕ್ರಮನಂತೆ ಬೆಳೆದು, ಇಂದಿನ ಕನ್ನಡ ಕುಲಕೋಟಿಯ ಆದರ, ಅಭಿಮಾನಗಳಿಗೆ ಪಾತ್ರರಾಗಿ, ಕನ್ನಡನಾಡಿನ ಮನೆಮನೆಯ ಮಾತಾಗಿರುವ ಜನಪ್ರಿಯ ನಟನಾಗಿ, ನೂರು ಚಿತ್ರಗಳ ನಟನಾಗಿ ಯಶಸ್ವಿಯಾಗಿದ್ದಾರೆ. ಇವರು ಅಭಿನಯಿಸಿರುವ ಹಲವಾರು ಚಿತ್ರಗಳು ನೂರು ದಿನಗಳು ನಡೆದು ಕಲಾತ್ಮಕವಾಗಿ ಮಾರುಕಟ್ಟೆಯ ದೃಷ್ಟಿಯಿಂದ ಅಪಾರ ಯಶಸ್ಸು, ಮನ್ನಣೆ ಗಳಿಸಿವೆ.

ಕೀರ್ತಿ ತಂದ ಕಲಾವಿದ

ಅಶ್ವತ್ಥ್‌ರವರು ಅಭಿನಯಿಸಿದ ಶ್ರೇಷ್ಠ ಚಿತ್ರಗಳಾದ ನಂದಾದೀಪ, ಮಿಸ್ ಲೀಲಾವತಿ, ಜೇನುಗೂಡು, ಬೆಳ್ಳಿ ಮೋಡ, ರಣಧೀರ ಕಂಠೀರವ ಮುಂತಾದ ಚಿತ್ರಗಳು ಅತ್ಯಂತ ಯಶಸ್ವಿಯಾಗಿ, ಇವರಿಗೆ ಯಶಸ್ಸು, ಕೀರ್ತಿ ತಂದು ಮದರಾಸಿನ ಚಲನಚಿತ್ರ ಪ್ರೇಮಿಗಳ ಸಂಘದವರಿಂದ ವರ್ಷದ ಶ್ರೇಷ್ಠ ಅಭಿನಯಕ್ಕಾಗಿ ಪಾರಿತೋಷಕ ಪಡೆಯುವ ಭಾಗ್ಯ ಪಡೆದು ಕನ್ನಡ ನಾಡಿಗೂ, ಕನ್ನಡ ಕುಲಕೋಟಿಗೂ ಅತ್ಯಂತ ಮನ್ನಣೆ, ಗೌರವ ತಂದುಕೊಟ್ಟಿದ್ದಾರೆ.

ಇವರ ಅಭಿನಯ ಕಲಾಚಾತುರ್ಯ ಮಾತ್ರಕ್ಕೇ ಮುಗ್ಧನಾದ ಅಥವಾ ಮಾರು ಹೋದವನಲ್ಲ, ನಾನು. ತಮ್ಮ ಕಲಾಶಕ್ತಿಯೊಂದಿಗೆ ದಿನೇ ದಿನೇ ಬೆಳೆಯಿಸಿಕೊಂಡ ಕೀರ್ತಿಯೊಂದಿಗೆ

ಸರಳವಾದ ನಡೆ ನುಡಿ, ನಡವಳಿಕೆ, ಸ್ನೇಹಪರತೆಯಿಂದ, ಒಡನಾಡಿಗಳೊಂದಿಗೆ ಕಲೆತು ಹಾಗೂ ಸಹಕಾರ ಮನೋಭಾವದಿಂದ, ವಿಶ್ವಾಸದಿಂದ ಅಣ್ಣ ತಮ್ಮಂದಿರಿಗಿಂತ ಮಿಗಿಲಾದ ಪ್ರೀತಿ, ಸ್ನೇಹದಿಂದ ಬೆರೆಯುವ ಇವರ ಉದಾತ್ತ ಗುಣ ಕಂಡು ಮುಗ್ಧನಾದವನು ನಾನು. ಅಷ್ಟು ಸರಳ ವ್ಯಕ್ತಿ ನಮ್ಮ ಅಶ್ವತ್ಥ್. ನಾನು ಸದಾ ಕಂಡುಕೊಂಡಿದ್ದು ಆತನಲ್ಲಿದ್ದ ಸರಳತನ. ಇವರು ಇಂದು ಕೀರ್ತಿಯ ಶಿಖರಕ್ಕೆ ಏರುತ್ತಿದ್ದರೂ, ಇವರಲ್ಲಿ ಸ್ವಲ್ಪವಾದರೂ ಏರಿಳಿತಗಳ ಏರುಪೇರು ಕಂಡವನಲ್ಲ, ಅಂತಹ ನಿಗರ್ವಿ, ಮೇಧಾವಿ, ಸರಳ ವ್ಯಕ್ತಿ ನಮ್ಮ ಅಶ್ವತ್ಥ್.

ವ್ಯಕ್ತಿಯು ತನ್ನ ಕಲಾಕ್ಷೇತ್ರದಲ್ಲಿ ಸೇವೆ ಸಲ್ಲಿಸಿ, ದುಡಿದು. ನೂರುಚಿತ್ರಗಳ ಕಲಾವಿದನಾದಾಗ. ಅಂತಹ ಕಲಾವಿದನಿಗೊಂದು ಪುರಸ್ಕಾರ ರೂಪದಲ್ಲಿ ಶತಮಾನೋತ್ಸವ ಸಮಾರಂಭ ಆಚರಿಸುವುದು, ಅಭಿಮಾನಿಗಳ ಹಾಗೂ ಸರ್ಕಾರದ ಹೊಣೆ. ಅಂತಹ ಶತಮಾನೋತ್ಸವ ಭಾಗ್ಯ ಪಡೆದ ಕನ್ನಡನಾಡಿನ ಚಲನಚಿತ್ರ ರಂಗದ ಹಲವಾರು ಹಿರಿಯ ಹಾಗೂ ಕಿರಿಯ ಕಲಾವಿದ, ಕಲಾವಿದೆಯರಿಗೆ ಮತ್ತು ಆ ಭಾಗ್ಯ ಪಡೆದ ನಮ್ಮ ಅಶ್ವತ್ಥ್‌ರವರಿಗೂ ಕನ್ನಡ ನಾಡಿನ ಪರವಾಗಿ ನನ್ನ ಅನಂತ ಧನ್ಯವಾದಗಳು.

ಇಂದು ನೂರು ಚಿತ್ರಗಳ ಹಂತ ಏರಿರುವ ಅಶ್ವತ್ಥ್‌ರವರಿಗೆ ಪರಮಾತ್ಮನು ನೂರುವರ್ಷ ಆಯುಸ್ಸು ಕೊಡಲೆಂದು ನನ್ನ ಹಾರೈಕೆ.

(ಈ ಲೇಖನವು ನವೆಂಬರ್ ೨, ೧೯೬೯ ರಂದು ಶ್ರೀ ಕೆ.ಎಸ್. ಅಶ್ವತ್ಥ್‌ರವರು ನಟಿಸಿದ ಚಿತ್ರಗಳ ಶತಮಾನೋತ್ಸವ ಸಮಾರಂಭದಲ್ಲಿ ನಟರತ್ನ ಪ್ರಶಸ್ತಿ ನೀಡಿದಾಗ ಪ್ರಕಟವಾದ ಸ್ಮರಣಸಂಚಿಕೆಯಲ್ಲಿ ಪ್ರಕಟವಾದ ಲೇಖನ).

ನಿಷ್ಠಾವಂತ

– ಎಂ. ಪಂಡರಿಬಾಯಿ
ಹಿರಿಯ ನಟಿ

ಸಾಹಿತ್ಯವಾಗಲಿ, ಕಲೆಯಾಗಲಿ, ಪೂರ್ವಜನ್ಮ ಸುಕೃತದಿಂದ ದೈವದತ್ತವಾಗಿ ತಾನಾಗಿ ಮೂಡಿಬರುವಂಥಾದ್ದು. ಸೂರ್ಯಪ್ರತಿಭೆಯಂತೆ ಬೇಕಾದ್ದಲ್ಲಿ ತನ್ನ ಪ್ರಭಾವದ ಪ್ರಭೆ ಬೀರುತ್ತದೆ. ಇದು ಸರ್ವರಿಗೂ ತಿಳಿದ ವಿಚಾರವಾಗಿದ್ದರೂ ಭಾರತೀಯರಾದ ನಾವು ಈ ಕಲೆಯನ್ನು ಬಹು ಮರ್ಯಾದಿತ ಸ್ಥಳಗಳಲ್ಲಿ ಪದೇ ಪದೇ ಕಾಣುತ್ತಿದ್ದೇವೆ. ಆಸ್ತಿಕತೆಯ ಮೇಲ್ಪಟ್ಟದಲ್ಲಿ ವಿದ್ಯಾಧಿದೇವತೆ ಸರಸ್ವತಿಯನ್ನು ವೀಣಾಪಾಣಿಯಾಗಿ ಕಾಣುತ್ತೇವೆ. ಸಂಗೀತ ಸಾಹಿತ್ಯಗಳಿಗೆ ಅಧಿದೇವತೆ ಶಾರದೆ. ಪರಶಿವಮೂರ್ತಿ ನಟರಾಜನನ್ನಾಗಿ ಕಂಡು ನಾಟ್ಯಕಲೆಗೆ ಇಂಬುಕೊಡುತ್ತೇವೆ. ಹೀಗೆ ದೇವಾಧಿ ದೇವತೆಗಳನ್ನೆಲ್ಲ ಒಂದೊಂದು ಕಲೆಗೆ ಪ್ರಮುಖರೆಂದು ಕೊಂಡಾಡುತ್ತಾರೆ. ಬೇಲೂರು,

ಹಳೇಬೀಡು, ಶ್ರವಣಬೆಳಗೊಳ, ತಾಜಮಹಲ್ ಮುಂತಾದ ಸ್ಥಳಗಳನ್ನು ನೋಡಿ ಯಾರಿಗೆ ಆನಂದವಾಗುವುದಿಲ್ಲ? ಸಾವಿರಾರು ವರ್ಷಗಳ ಹಿಂದಿನ ಶಿಲ್ಪಕಲೆಯನ್ನು ನೋಡಿ ಬೆರಗಾಗದವರು ಯಾರು? ಯುಗ ಯುಗಾಂತರಗಳ ಸಂಗೀತ, ಸಾಹಿತ್ಯ, ಚಿತ್ರಕಲೆ ಇವುಗಳಿಗೆ ಇಂದೂ ಮರ್ಯಾದೆಯಿದೆ. ಮಹಾನ್ ಕವಿಗಳೂ ಸಹ ಕಾವ್ಯವನ್ನು ಸಂಗೀತದ ಅಂತರ್ಗತವಾಗಿಟ್ಟಿದ್ದಾರೆ. ಗೀತ-ತಾಳ-ಲಯ ಇವುಗಳೆಲ್ಲವೂ ಗತಿ ರೂಪದಲ್ಲಿರುತ್ತವೆ. ಇದರ ಭಾಷೆಯು ಸಾರ್ವಜನಿಕ ಭಾವನೆಗಳನ್ನು ಉತ್ತೇಜಿತವಾಗಿಸುವಂಥಾದ್ದು ಸಂಗೀತ. ಕೇವಲ ಮಾನವರಿಗೆ ಮಾತ್ರವಲ್ಲ, ಪಶು ಪಕ್ಷಿಗಳೂ ತನ್ಮಯಗೊಳಿಸುವ ಚೇತನ ಶಕ್ತಿ ಅದರಲ್ಲಿ ಅಡಕವಾಗಿರುತ್ತದೆ. ಇನ್ನು ಮಾನಸಿಕ ಭಾವನೆಗಳನ್ನು ಚಿತ್ರರೂಪದಲ್ಲಿ ಕಾಣುತ್ತೇವೆ. ಅದರಲ್ಲಿಯೂ ಅಪೂರ್ವ ಆಕರ್ಷಣೆಯ ಶಕ್ತಿ ತುಂಬಿರುತ್ತದೆ. ನಾಟಕ, ಕಾವ್ಯ, ಮತ್ತು ಇತರ ಕಲೆಗಳ ಸಂಯೋಗದ ಫಲವಾಗಿದೆ. ನಾಟಕದಲ್ಲಿ ಕಲೆಯು ಸ್ಥೂಲ ಮತ್ತು ಸೂಕ್ಷ್ಮ ಎರಡು ರೂಪಗಳಲ್ಲಿ ಕಾಣಸಿಗುತ್ತದೆ. ನವರಸಗಳ ಭಂಡಾರವೇ ನಾಟಕ. ನಾಟಕ ಜನಪ್ರಿಯ ವಸ್ತು. ಲೋಕಹಿತ, ಲೋಕರಂಜನ ಇವೆರಡೂ ನಾಟಕದಲ್ಲಿಯ ಮುಖ್ಯ ಅಂಶಗಳು. ಮನುಷ್ಯನ ಜೀವನವು ಪೂರ್ಣತೆ ಹೊಂದದೆ ಅವನು ಬೇರೊಬ್ಬರ ಜೀವನದಿಂದ ಪೂರ್ಣತ್ವವನ್ನು ಪಡೆಯಲು ಆಶಿಸುತ್ತಾನೆ. ನಾಟಕದಲ್ಲಿ ಈ ರೀತಿಯ ಪೂರ್ಣತ್ವವು ಅಭಿನಯಿಸುವವರಿಗೂ ಪ್ರೇಕ್ಷಕರಿಗೂ ದೊರಕುತ್ತದೆ. ಮನುಷ್ಯನ ಉದ್ದೇಶ ಯಾವುದಾದರೊಂದು ವ್ಯವಹಾರ ಕರ್ತವ್ಯದ ಆನಂದದಲ್ಲಿ ತಲ್ಲೀನನಾಗಬೇಕೆಂಬುದು. ಇತ್ತೀಚೆಗೆ ಚಿತ್ರ ಪ್ರಪಂಚ ನಾಟಕರಂಗದ ಸ್ಥಾನವನ್ನು ತೆಗೆದುಕೊಂಡಿದೆ. ನಾಟಕಕ್ಕಿಂತಲೂ ಚಿತ್ರಗಳಲ್ಲಿ ವಾಸ್ತವಿಕತೆಯನ್ನು ಅಧಿಕವಾಗಿ ತದ್ರೂಪವಾಗಿ ತೋರಿಸಲು ಸಾಧ್ಯವಾಗುತ್ತದೆ. ಅದರಿಂದ ಮನಸ್ಸಿನ ಮೇಲೆ ಹೆಚ್ಚು ಪರಿಮಾಣವನ್ನೂ ಉಂಟು ಮಾಡುತ್ತದೆ.

ಚಿತ್ರರಂಗಕ್ಕೂ ಮತ್ತು ಸಮಾಜಕ್ಕೂ ಅತ್ಯಂತ ನಿಕಟ ಸಂಬಂಧವಿದೆ. ಚಿತ್ರಗಳಲ್ಲಿ ಎದುರಿನಲ್ಲೇ ನೋಡಿ ಕೇಳಿ, ಕಣ್ಣು, ಕಿವಿಗಳನ್ನು ತಣಿಸುವುದಲ್ಲದೆ ಅಪ್ರತ್ಯಕ್ಷರೂಪದಿಂದ ಮನೋವಿಕಾರಗಳನ್ನು ತೆಗೆದುಹಾಕಿ ವ್ಯಕ್ತಿಗತ ಮತ್ತು ಸಾಮಾಜಿಕ ಜೀವನದಲ್ಲಿ ನಡೆದುಕೊಳ್ಳಬೇಕಾದ ಉತ್ತಮ ಗುಣಗಳು ಅದರಿಂದುಂಟಾಗುವ ಸುಖ ದುಃಖದ ಅನುಭವವನ್ನು ಸುಲಭವಾಗಿ ತಿಳಿದುಕೊಳ್ಳಲಾಗುತ್ತದೆ. ಕಲೆಯ ಸೌಂದರ್ಯದಲ್ಲಿ ಜೀವನದ ನೈಜತ್ವ, ಗಾಂಭೀರ್ಯ, ಚಿರಶಾಂತಿಯ ಸಂದೇಶವಿರುತ್ತದೆ. ಚಿತ್ರಕಲೆಯಿಂದ ಎಷ್ಟೋ ಉಪಯೋಗವಾಗುತ್ತದೆ.

ಸೇವೆ, ಆತ್ಮಾನುಭೂತಿ, ಆನಂದ, ವಿನೋದ, ಸ್ವಸುಖ, ಪರಸುಖ ಎಲ್ಲವೂ ಅದರಲ್ಲಿ ಅಡಗಿದೆ. ಇಂತಹ ಚಿತ್ರರಂಗದಲ್ಲಿ ಅಪರೂಪಕ್ಕೊಮ್ಮೆ ಕಾಣಿಸಿಕೊಳ್ಳುವ ಪ್ರತಿಭಾವಂತ ಕಲಾವಿದರಲ್ಲಿ ನಮ್ಮ ಕೆ.ಎಸ್.ಅಶ್ವತ್ಥ್‌ರವರು ಒಬ್ಬರು. ಅವರಿಂದು ನೂರು ಕನ್ನಡ ಚಿತ್ರಗಳಲ್ಲಿ ಅಭಿನಯಿಸಿದ್ದಾರೆಂದರೆ ಅದು ಅವರ ನಟನಾ ಕೌಶಲಕ್ಕೆ ಮಾತ್ರವಲ್ಲ, ಅವರು ಅದೆಷ್ಟು ಜನಪ್ರಿಯರಾಗಿದ್ದಾರೆ, ಹೇಗೆ ಎಲ್ಲರಿಗೂ ಬೇಕಾದ ವ್ಯಕ್ತಿಯಾಗಿದ್ದಾರೆ ಎನ್ನುವುದಕ್ಕೂ ಸಾಕ್ಷಿ. ಅವರ ದೃಷ್ಟಿಯಲ್ಲಿ ನಟಿಸುವುದು ಕೇವಲ ವೃತ್ತಿ ಮಾತ್ರವಲ್ಲ, ತಪಸ್ಸು, ಏಕಾಗ್ರ ಚಿತ್ತದಿಂದ

ನಿಷ್ಠೆಯಿಂದ ಸಾಧನೆ ನಡೆಸಿದರೆ ಅದ್ಭುತ ಸಿದ್ಧಿ ದೊರೆಯುವುದೆಂಬ ಅಚಲವಾದ ನಂಬಿಕೆ ಅವರ ಮನಸ್ಸಿನಲ್ಲಿ. ಯಾವ ಚಿತ್ರದಲ್ಲೇ ಆಗಲಿ, ಯಾವ ಪಾತ್ರವನ್ನೇ ಆಗಲಿ, ಅವರೆಂದೂ ಲಘುವಾಗಿ ತಿಳಿದವರಲ್ಲ. ಪ್ರತಿಯೊಂದು ಹಂತದಲ್ಲೂ , ಪ್ರತಿ ನಿಮಿಷದಲ್ಲೂ ತಮ್ಮ ಪಾತ್ರದ ಬಗ್ಗೆಯೇ ಚಿಂತಿಸುತ್ತ ದೊರೆಯುವ ಅವಕಾಶದಲ್ಲಿ ಚಿತ್ರವನ್ನು ಸಜೀವಗೊಳಿಸುವುದರಲ್ಲಿ ತಾವು ಎಷ್ಟರ ಮಟ್ಟಿಗೆ ಸಹಕಾರಿಯಾಗಲು ಸಾಧ್ಯ ಎಂಬುದನ್ನು ಕುರಿತೇ ಆಲೋಚಿಸುವ ಹವ್ಯಾಸ ಉಳ್ಳವರು. ಕರ್ತವ್ಯ ನಿರ್ವಹಣೆ ಮಾಡುವಾಗ ಯಾರಾದರೂ ಅಡ್ಡಿ ಬಂದರೆ ಅವರು ಸಹಿಸಲಾರರು. ಅಂತಹ ಸಮಯದಲ್ಲಿ ಅವರು ನಿರ್ದಾಕ್ಷಿಣ್ಯವಾಗಿ ಸ್ವಲ್ಪ ಕಟುವಾಗಿಯೇ ನುಡಿದು ಬಿಡುತ್ತಾರೆ.

ಒಮ್ಮೆ "ಜೇನುಗೂಡು" ಚಿತ್ರ ಅತ್ಯಂತ ದುಃಖಕರವಾದ ದೃಶ್ಯವನ್ನೊಂದು ಚಿತ್ರಿಸುತ್ತಿದ್ದ ಸಮಯ. ಅಶ್ವತ್ಥ್‌ರವರು ಆ ದಿನ ಚಿತ್ರೀಕರಿಸುತ್ತಿದ್ದ ದೃಶ್ಯದ ಚಿಂತನದಲ್ಲೇ ಮಗ್ನರಾಗಿ ಗಂಭೀರತೆಯಿಂದ ಸ್ವಲ್ಪ ದೂರದಲ್ಲಿ ಒಬ್ಬರೇ ಕುಳಿತಿದ್ದರು. ಅಷ್ಟರಲ್ಲಿ ಅವರ ಸ್ನೇಹಿತರು ಯಾರೋ ಒಬ್ಬರು ಅವರ ಹತ್ತಿರ ಮಾತನಾಡಬೇಕೆಂದು ಬಂದವರು ಅವರನ್ನು ಸಮೀಪಿಸುತ್ತಲೇ ಕೈ ಮುಗಿದು ನಮ್ರತೆಯಿಂದ "ದಯವಿಟ್ಟು ಈಗ ಮಾತನಾಡಿಸಿ ನನ್ನ ಮೂಡ್ ಕೆಡಿಸಬೇಡಿ" ಎಂದರು. ಬಂದವರು ಮರ್ಯಾದೆಯಿಂದ ಸುಮ್ಮನೆ ಹೋದರೆ ಸರಿ, ಇಲ್ಲದಿದ್ದರೆ ಕಡ್ಡಿ ಎರಡು ಮಾಡಿದಂತೆ ನುಡಿದು ಬಿಡುತ್ತಾರೆ. ಇದನ್ನು ಗಮನಿಸುತ್ತಿದ್ದ ನನಗೆ ಅವರ ಮೇಲೆ ಆ ದಿನ ನಿಜವಾಗಿಯೂ ಹೊಟ್ಟೆ ಕಿಚ್ಚೇ? ಯಾಕೆ ಗೊತ್ತೇ? ಆ ದೃಶ್ಯದಲ್ಲಿ ಅವರಷ್ಟೇ ಭಾಗವಹಿಸಬೇಕಾದವಳು ನಾಲ್ಕು ಜನರ ಮಧ್ಯೆ ಕುಳಿತು ನಗುತ್ತಾ ಹರಟೆ ಹೊಡೆಯುತ್ತಿದ್ದೇನೆ. ನಿಜವಾಗಿಯೂ ಅವರು ಈ ದೃಶ್ಯದಲ್ಲಿ ತುಂಬಾ ಚೆನ್ನಾಗಿ ಮಾಡುತ್ತಾರೆ. ನನಗೆ ಮಾರ್ಕು ಕಡಿಮೆಯಾಗುತ್ತೆ. ಅಂತ ಅನ್ನಿಸಿತು. ಆ ದಿನ ಅವರಿಂದ ನನಗೊಂದು ಒಳ್ಳೆಯ ಪಾಠ. ಇದು ತಮಾಷೇ ಅಂತ ಭಾವಿಸಬೇಡಿ. ಅವರು ನೂರು ಚಿತ್ರದಲ್ಲಿ ಮಾಡಿದ್ದೆಷ್ಟು ನಿಜವೋ ಈ ವಿಷಯಾನೂ ಅಷ್ಟೇ ನಿಜ. ಅಭಿನಯದಲ್ಲಿ ಅವರಿಗಿರುವ ಉತ್ಸಾಹ, ಶ್ರದ್ಧೆ, ತನ್ಮಯತೆ, ಇವುಗಳನ್ನು ಗಮನಿಸಿದರೆ ಜೊತೆಯಲ್ಲಿ ನಟಿಸುವ ನಮಗೂ ಇಮ್ಮಡಿ ಸ್ಫೂರ್ತಿ. ಅವರಿಗೊಪ್ಪಿಸಿದರೆ ಸಾಕು, ಈ ಪಾತ್ರ ಸೊಗಸಾಗಿರುತ್ತದೆ. ಎಂಬ ನಂಬಿಕೆ ನಿರ್ದೇಶಕರಿಗೆ. ಬರೆದಿರುವ ಸಂಭಾಷಣೆಯ ಪ್ರತಿ ಅಕ್ಷರವೂ ಜೀವಂತವಾಗಿರುತ್ತದೆ ಎಂಬ ನಿರ್ಧಾರ ಚಿತ್ರ ಸಾಹಿತಿಗಳಿಗೆ, ಸಹಜಾಭಿನಯವನ್ನು ಕಂಡೆವು ಎಂಬ ತೃಪ್ತಿ ರಸಿಕರಿಗೆ. ಇಂತಹ ಉತ್ತಮ ನಟರು ಚಿತ್ರರಂಗದಲ್ಲಿ, ನಾಟಕರಂಗದಲಿ ನಮ್ಮೊಡನಿರುವುದೇ ನಮಗೆ ಹೆಮ್ಮೆಯ ವಿಷಯ. ಅವರಂಥಾ ಕಲಾವಿದರು ನೂರು ಚಿತ್ರಗಳು ಮಾತ್ರವಲ್ಲ, ಸಾವಿರ ಚಿತ್ರಗಳನ್ನು ಪೂರೈಸುವ ಕಾಲ ಬರಲಿ, ಅವರಿಗೆ ಶ್ರೀ ಪಾಂಡುರಂಗನು ಆರೋಗ್ಯಭಾಗ್ಯವನ್ನು ಕೊಟ್ಟು ಧೀರ್ಘಾಯಸ್ಸನ್ನು ಕರುಣಿಸಿ ಕಾಪಾಡಲೆಂದು ಹೃತ್ಪೂರ್ವಕವಾಗಿ ಬೇಡುತ್ತೇನೆ.

(ಈ ಲೇಖನವು ನವೆಂಬರ್ ೨, ೧೯೬೯ ರಂದು ಶ್ರೀ ಕೆ.ಎಸ್ ಅಶ್ವತ್ಥ್‌ರವರು ನಟಿಸಿದ ಚಿತ್ರಗಳ ಶತಮಾನೋತ್ಸವ ಸಮಾರಂಭದ ದಲ್ಲಿ ನಟರತ್ನ ಪ್ರಶಸ್ತಿ ನೀಡಿದಾಗ ಪ್ರಕಟವಾದ ಸ್ಮರಣಸಂಚಿಕೆಯಲ್ಲಿ ಪ್ರಕಟವಾದ ಲೇಖನ).

ಕಲಾಸರಸ್ವತಿ ಕೈ ಬೀಸಿ ಕರೆದ ಅಶ್ವತ್ಥ್

- ಎನ್.ವಿ. ರಮೇಶ್
ಕಾರ್ಯಕ್ರಮ ನಿರ್ವಾಹಕರು, ಆಕಾಶವಾಣಿ, ಮಡಿಕೇರಿ

ನನ್ನ ತಂದೆ ಆಕಾಶವಾಣಿಯ ನಾಟಕದ ಎನ್.ಎಸ್. ವಾಮನ್ ಅವರು. ಮೈಸೂರಿನಲ್ಲಿ, ವಿಷ್ಣುವರ್ಧನ್ ಅವರ ತಂದೆ ಎಚ್. ಎಲ್. ನಾರಾಯಣರಾವ್ ಅವರೊಂದಿಗೆ ಎಮ್. ವಿ. ಗೋಪಾಲಸ್ವಾಮಿ ಅವರು ತಮ್ಮ ಮನೆಯಲ್ಲಿ ಸ್ಥಾಪಿಸಿದ್ದ 'ಟಾಯ್ ಟ್ರಾನ್ಸ್ ಮಿಟರ್' ಮೂಲಕ ಆರಂಭವಾದ ಮೈಸೂರು ಆಕಾಶವಾಣಿಯಲ್ಲಿ ತಮ್ಮ ನಾಟಕ ಆರಂಭಿಸಿದರು. ೧೯೩೫ ಸೆಪ್ಟೆಂಬರ್ ೧೦ನೇ ತಾರೀಖು ಮೈಸೂರು ಆಕಾಶವಾಣಿ ಖಾಸಗಿಯಾಗಿ ಆರಂಭವಾಯಿತು. ಆಗ ವಾಮನ್ ಎಂಟನೇ ತರಗತಿ ಓದುತ್ತಿದ್ದರು. ೧೬ ವರ್ಷ. ಅವರ ನಾಟಕ ಸೇವೆ ಆರಂಭವಾಗಿ ಮುಂದುವರೆಯಿತು. ವಾಮನ್ ಮಾಡಿದ ಮೊದಲ ಪಾತ್ರ ಎಚ್. ಎಲ್. ನಾರಾಯಣರಾವ್ ಬರೆದ 'ಭಕ್ತ ಧೃವ' ನಾಟಕದಲ್ಲಿ, ನಾರದನ ಪಾತ್ರ.

ಆಕಸ್ಮಿಕ ಹಾಗೂ ಆಶ್ಚರ್ಯಕರ ವಿಷಯವೆಂದರೆ ವಾಮನ್‌ರವರ ಪಟ್ಟ ಶಿಷ್ಯ ಕೆ.ಎಸ್. ಅಶ್ವತ್ಥ್. ತಮ್ಮ ಸಿನಿಮಾ ಸೇವೆಯ ಪ್ರಾರಂಭಿಕ ಪೌರಾಣಿಕ ಚಿತ್ರಗಳಲ್ಲಿ ಹಾಗೂ ೬೦ರ ದಶಕದಲ್ಲಿ ಹಲವಾರು ಚಿತ್ರಗಳಲ್ಲಿ ನಾರದನಾಗಿ ಅಭಿನಯಿಸಿದ್ದಾರೆ.

ಎನ್. ಎಸ್. ವಾಮನ್, ೪೦ರ ದಶಕದಲ್ಲಿ ೧೯೪೪ರಲ್ಲಿ, ಮೈಸೂರಿನಲ್ಲಿ ಸ್ಟೂಡೆಂಟ್ಸ್ ಡ್ರಮಾಟಿಕ್ ಅಸೋಸಿಯೇಷನ್ (ಹವ್ಯಾಸಿ ಸಂಸ್ಥೆ) ಸ್ಥಾಪಿಸಿ ಸಾವಿರಾರು ವಿದ್ಯಾರ್ಥಿಗಳಿಗೆ ನಾಟಕ ದೀಕ್ಷೆ ಕೊಟ್ಟರು. ಇವರಿಂದ ಕಲಾದೀಕ್ಷೆ ಪಡೆದು, ಗುರುಗಳು ತಾಳ್ಮೆ ಕಾಳಜಿ ಪ್ರೀತಿಯಿಂದ ಕೊಟ್ಟ ಸತತ ವಿಶೇಷ ಸಮಗ್ರ ತರಬೇತಿಯಿಂದ ಕಲಾಸರಸ್ವತಿಯ ನವರತ್ನ ಕಿರೀಟದಲ್ಲಿಯ ಅಮೂಲ್ಯ ರತ್ನವಾಗಿ ಪರಿವರ್ತಿತರಾದರು - ಅಶ್ವತ್ಥ್. ಇದನ್ನು ವಾಮನ್ ಎನ್ನುವ ಪರುಷಮಣಿ ಪ್ರಯೋಗ ಎನ್ನಲೂ ಬಹುದು. ಅಶ್ವತ್ಥ್ ಅವರ ಅತ್ಯಂತ ಶ್ರದ್ಧೆ, ಭಕ್ತಿ, ತಾಳ್ಮೆ ಕಠಿಣ ಪರಿಶ್ರಮದ ಪ್ರಯತ್ನ ಹಾಗೂ ಅವರಲ್ಲಿದ್ದ ಸ್ವಾಭಿಮಾನ, ಛಲ ಇವುಗಳಿಂದ ಅಶ್ವತ್ಥ್ ಸಾಧಿಸಿದ ಕಲಾತಪಸ್ಸಿನ ಫಲವೆಂದು ತಿಳಿಯಬಹುದು.

ಕ್ಷಣಕಾಲ ಯೋಚಿಸಿ. ಇದನ್ನು ಕೆಲವರು ಪೂರ್ವ ಜನ್ಮದ ಪ್ರಾಪ್ತಿ ಎಂದೋ, ಇನ್ನೂ ಕೆಲವರು ಈ ಜನ್ಮದ ಅದೃಷ್ಟವೆಂದೋ ಅಥವಾ ಈ ಜನ್ಮದಲ್ಲಿ ಕಲಾದೇವತೆಯ ಸಾಕ್ಷಾತ್ಕರವಾಯಿತು ಎಂದೂ ಹೇಳಬಹುದು. ನನ್ನ ಅನಿಸಿಕೆಯಂತೆ ಎಲ್ಲರಲ್ಲಿ ಆ ಭಗವಂತ ಕಲೆಯನ್ನು ಅಲ್ಪ ಸ್ವಲ್ಪ ಕೊಟ್ಟಿರುತ್ತಾನೆ. ಆದರೆ ಇದರಲ್ಲಿ ಆ ವ್ಯಕ್ತಿಗೆ ಆಸಕ್ತಿ ಬರಬೇಕು - ಅದು ಪ್ರಕಟವಾಗಲು. ಇದನ್ನು ಶೋಧಿಸಿ ಹುಡುಕುವ ತರಬೇತಿ ಕೊಡುವ ಗುರು ಸಿಗಬೇಕು. ಕಾಲಕಾಲಕ್ಕೆ ಪ್ರೋತ್ಸಾಹ ಸಿಗಬೇಕು. ಅವಕಾಶ ದೊರೆಯಬೇಕು. ಆ ಸಿಕ್ಕ ಅವಕಾಶವನ್ನು ತಕ್ಷಣ ಬಳಸಿಕೊಳ್ಳುವ ಬುದ್ಧಿ, ಅನುಕೂಲ ಇವರಿಗಿರಬೇಕು. ಅವಕಾಶ ಮತ್ತು ಅದೃಷ್ಟ ಒಮ್ಮೆ

ಮಾತ್ರ ಬಾಗಿಲು ತಟ್ಟುತ್ತದೆ. ಬಾಗಿಲು ತೆರೆದು ಸ್ವಾಗತಿಸಿ, ಆದರಿಸಿ, ಅದನ್ನು ಸರಿಯಾಗಿ ಗ್ರಹಿಸಿ ತಕ್ಷಣ ಗಮನ ಕೊಟ್ಟರೆ ಅದು ಸಾರ್ಥಕವಾಗುತ್ತದೆ.

ಈ ಪೀಠಿಕೆಗೆ ಕಾರಣ ಅಶ್ವತ್ಥ್ ಅವರ ಮನೆತನದಲ್ಲಿ ಹಿಂದೆ ಯಾರೂ ಕಲಾವಿದರಿರಲಿಲ್ಲ. ಅರ್ಚಕರಾದ ತಂದೆ ದೇವತಾರ್ಚನೆ ಕಲಿಸಿದ್ದರು. ಆದರೆ ಈತ ಕಲಾವಿದನಾಗಲು ಕಲಾಸರಸ್ವತಿಯ ಕಲಾರ್ಚನೆ ಮಾಡುವಂತೆ ಕಲಾಕೋವಿದನಾದದ್ದು ಮಹದಾಶ್ಚರ್ಯ ಹಾಗೂ ಕಲಾಗುರು ವಾಮನ್ 'ಟಚ್' ಇದಕ್ಕೆ ಕಾರಣ ಎಂದು ಅಶ್ವತ್ಥ್, ಸಂಪತ್, ಹಾಗೂ ಸ್ವತಃ ಡಾ. ರಾಜ್ ನಂಬಿದ್ದನ್ನು ತಮ್ಮ ಸಂದರ್ಶನ ಹಾಗೂ ಲೇಖನದಲ್ಲಿ ಇವರೇ ಬಾರಿ ಬಾರಿ ಹೇಳಿಕೊಂಡಿದ್ದಾರೆ. ನನಗೆ ಸ್ವತಃ ಅಶ್ವತ್ಥ್‌ಅವರು ಹಲವಾರು ಬಾರಿ ಹೇಳಿದ್ದಂತೆ ಹಾಗೂ ನಾನು ಮಾಡಿರುವ ಅವರ ವಿವರವಾದ ವೀಡಿಯೋ ಹಾಗೂ ರೇಡಿಯೋ ಸಂದರ್ಶನಗಳಲ್ಲಿ ಅವರು ಹೇಳಿರುವುದನ್ನು ನಾನು ಕೇಳಿರುವ ಹಲವಾರು ವಿಷಯಗಳನ್ನು ನನ್ನ ತಂದೆ ವಾಮನ್ ಹೇಳಿರುವುದನ್ನು ಓದುಗರಿಗೆ ಇಲ್ಲಿ ನೀಡುತ್ತಿದ್ದೇನೆ.

ಮೈಸೂರಿನಲ್ಲಿ ಹುಟ್ಟಿದ ಅಶ್ವತ್ಥ್ ಅಮ್ಮನ ಮಡಿಲಲ್ಲಿ ಬೆಳೆಯಲಿಲ್ಲ. ತಂದೆ ತಾಯಿಯರ ಪ್ರೀತಿ ಪಡೆಯಲಿಲ್ಲ. ಸೋದರತ್ತೆ ತಿಪ್ಪಮ್ಮ ಇವರು ಎರಡು ವರ್ಷದ ಬಾಲಕನಾಗಿದ್ದಾಗಲೇ ದತ್ತು ತರಹ ತೆಗೆದುಕೊಂಡು ಇವರನ್ನು ಪ್ರೀತಿಯಿಂದ ಸಾಕಿದರು. ತಿಪ್ಪಮ್ಮನವರಿಗೆ ಮಕ್ಕಳಿರಲಿಲ್ಲ. ಅವರೇ ಇವರಿಗೆ ವಿದ್ಯಾಭ್ಯಾಸ ನೀಡಿದರು. ಅಶ್ವತ್ಥ್ ಓದಿದ್ದು ಮೈಸೂರಿನ ಯುವರಾಜ ಕಾಲೇಜಿನಲ್ಲಿ. ೧೯೪೨ನೇ ಇಸವಿಯಲ್ಲಿ ಇವರಿನ್ನೂ ಓದುತ್ತಿರುವಾಗಲೇ ಅತ್ತೆ ತೀರಿಕೊಂಡರು. ಅದು ಕ್ವಿಟ್ ಇಂಡಿಯಾ ಚಳುವಳಿಯ ಕಾಲ. ಅಶ್ವತ್ಥ್ ವಿದ್ಯಾಭ್ಯಾಸ ಅಲ್ಲಿಗೆ ನಿಂತು ಹೋಯಿತು. ಆಗ ಕೃಷ್ಣ ಬೇಕರಿ ಪಕ್ಕ ಡಿ. ಸುಬ್ಬಯ್ಯ ರಸ್ತೆಯಲ್ಲಿದ್ದರು ಅಶ್ವತ್ಥ್. ತಿಪ್ಪಮ್ಮನವರ ನಿಧನಾನಂತರ ಅವರನ್ನು ಅನಾಥ ಪ್ರಜ್ಞೆ ಕಾಡಿತು. ದಾರಿ ಕಾಣದೆ ಮೈಸೂರಿನ ಶಿವರಾಂ ಪೇಟೆಯಲ್ಲಿದ್ದ ಭಾವನವರ ಮನೆಗೆ ಹೋದರು. ೧೯೪೩ರಲ್ಲಿ ಅಕ್ಕನ ಮಗಳು ಶಾರದಮ್ಮನೊಂದಿಗೆ ಇವರ ವಿವಾಹವಾಯಿತು. ಕೆಲಸ ಇಲ್ಲ. ಬದುಕಿಲ್ಲ. ೧೮ ವರ್ಷ. ಹೆಂಡತಿ ಬೇರೆ ಜೊತೆಗೆ. ಕೆಲಸಕ್ಕಾಗಿ ಹುಡುಕಾಡಿದರು. ಇವರ ಭಾವ -ಕಂ- ಮಾವ ಇವರಿಗೆ ಚಾಮರಾಜಪುರಂ ಕೊ ಆಪರೇಟಿವ್ ಸೊಸೈಟಿಯಲ್ಲಿ, ಕೆಲಸ ಸಿಗುವ ಹಾಗೆ ಪ್ರಯತ್ನಿಸಿದರು. ಚಾಮರಾಜಪುರಂ ಎಕ್ಸ್‌ಟೆನ್ಶನ್ ಶಾಖೆಗೆ ಇವರನ್ನು ಹಾಕಿದರು. ಕೇವಲ ೪-೫ ತಿಂಗಳು ಮಾತ್ರ ಕೆಲಸ ಮಾಡಿದರು. ಇವರಿಗೆ ಲೆಕ್ಕಾಚಾರ (ಅಕೌಂಟ್ಸ್) ಗೊತ್ತಿರಲಿಲ್ಲ. ಅಲ್ಲಿ ಕೆಲಸ ಮಾಡುತ್ತಿದ್ದ ಒಬ್ಬ ಮುದುಕರು ಬೆಳಗಿನಿಂದ ಸಂಜೆವರೆಗೆ ಎಲ್ಲರೆದರುರು ಇವರನ್ನು ಬೈಯುತ್ತಿದ್ದರು.

ಇಲ್ಲಿ ಎರಡು ವಿಶೇಷ ಸಂಗತಿಗಳನ್ನು ನೆನೆಯಬೇಕು. ಒಂದು ವೇಳೆ ಆ ಮುದುಕರು ದಿನಾ ಬೆಳಗಿನಿಂದ ಸಂಜೆ ಇವರನ್ನು ಬಯ್ಯದೆ ಆದರಿಸಿ ಕೆಲಸ ಹೇಳಿ ಕೊಟ್ಟಿದ್ದರೆ ಅಥವಾ ಅವರಿಗೆ ಲೆಕ್ಕಾಚಾರ ಬಂದಿದ್ದರೆ ಅವರು ಬಹುಶಃ ಒಬ್ಬ ಅತ್ಯಂತ ಸಾಮಾನ್ಯ ಲೆಕ್ಕಿಗನಾಗಿ ಮುಂದುವರಿಯುತ್ತಿದ್ದರೇನೋ! ಆಗ ಕನ್ನಡಕ್ಕೆ, ಆಕಾಶವಾಣಿಗೆ, ಹವ್ಯಾಸಿ ಹಾಗೂ ವೃತ್ತಿ

ರಂಗಭೂಮಿಗಳಿಗೆ, ಎಲ್ಲಕ್ಕೂ ಮಿಗಿಲಾಗಿ ಕನ್ನಡ ಸಿನಿಮಾಗೆ ದೊಡ್ಡ ನಷ್ಟವಾಗುತ್ತಿತ್ತು. ಸದ್ಯ, ಹಾಗಾಗಲಿಲ್ಲ. ಇದಕ್ಕೆ ಕನ್ನಡ ಕಲಾಸರಸ್ವತಿ, ಆ ಶಾರದೆಯ ಕೃಪೆಯೂ ಇತ್ತೇನೋ!

ಎರಡನೆಯದಾಗಿ ಲೆಕ್ಕದಲ್ಲಿ ಬೇಸರ ಹೊಂದಿ ಆ ಕೆಲಸ ಬಿಟ್ಟ ಅಶ್ವತ್ಥ್ ಮುಂದಿನ ತಮ್ಮ ಇಡೀ ಜೀವನದಲ್ಲಿ ಲೆಕ್ಕಾಚಾರಕ್ಕೆ ಬಹಳ ಬೆಲೆ ಕೊಟ್ಟರು ಅನ್ನೋದು ಆಶ್ಚರ್ಯ. ಆದರೆ ನಿಜ. ವೈಯಕ್ತಿಕ ಜೀವನದಲ್ಲಿ ವಾಕಿಂಗ್, ಜಾಗಿಂಗ್, ಶೌಚ-ಸ್ನಾನ, ತಿಂಡಿ, ಊಟ, ಪ್ರವಾಸ, ವಿಶ್ರಾಂತಿ, ನಿದ್ದೆ, ಮಾತು - ಹೀಗೆ ಎಲ್ಲದರಲ್ಲಿಯೂ ಅತ್ಯಂತ ಕರಾರುವಾಕ್ಕಾದ ಶಿಸ್ತಿನ ಲೆಕ್ಕದ ಮೇಷ್ಟ್ರಾದರು. ತಮಗೆ ತಾವೇ ದುಂದು ವೆಚ್ಚ ಮಾಡದೆ, ಒಣ ಆಡಂಬರದ ಜೀವನ ನಡೆಸದೆ, ಪ್ರತಿ ಪೈಸೆಯ ಮಹತ್ವ ತಿಳಿದು ಪ್ರತಿ ದಿನವೂ ಖರ್ಚಿನ ಲೆಕ್ಕ ಬರೆಯೋದು, ತಿಂಗಳ ಖರ್ಚಿನ ಬಜೆಟ್ ಮಾಡೋದು ಇದನ್ನು ಕಲಾಗುರು ವಾಮನ್ ಅವರಿಂದ ಬಳುವಳಿ ಪಡೆದರು.

ಡಿ. ಸುಬ್ಬಯ್ಯ ರಸ್ತೆಯ ಮಿತ್ರ ಕಿಟ್ಟಣ್ಣ ಇವರ ಆಪ್ತ ಸ್ನೇಹಿತ ಹಾಗೂ ಆಟದ ಜೋಡಿ. ಒಮ್ಮೆ ಆತ ಎಡತೊರೆ ದೇವಸ್ಥಾನದ ಸಹಾಯಾರ್ಥ ನಾಟಕದಲ್ಲಿ ತಾನೂ ಪಾತ್ರ ವಹಿಸುತ್ತಿರುವೆ, ನೀನೂ ಜೊತೆಗೆ ಬಾ ಎಂದು ಕರೆದ. "ನಿನ್ನ ನಾಟಕಾನೂ ಬೇಡ, ನನಗೆ ಪಾರ್ಟೂ ಬೇಡ. ನಂಗೆ ಇದರಲ್ಲಿ ಆಸಕ್ತಿ ಇಲ್ಲ. ನಾ ಬರೋಲ್ಲ" ಅಂತ ಅಶ್ವತ್ಥ್ ಹಟ. ಗೆಳೆಯ ಗಟ್ಟಿ. ಪಟ್ಟು ಬಿಡಲಿಲ್ಲ. "ಪಾರ್ಟು ಮಾಡದಿದ್ದರೂ ಸರಿ. ಕಂಪನಿ ಕೊಡು. ಅವರಿವರು, ನಾನು ಮಾಡೋದನ್ನು ನೋಡು. ೪-೫ ದಿನಕ್ಕೆ ಸ್ನೇಹಿತರು ಒಟ್ಟಾಗಿ ಸೇರಲು ಅವಕಾಶ ಸಿಕ್ಕಿದೆ, ಬಿಡಬೇಡ." ಅಂತ ಬಲವಂತದಿಂದ ಸೆಳೆದ. ಅಂತೂ ಕೊನೆಗೆ ಅಶ್ವತ್ಥ್ ಕಿಟ್ಟಣ್ಣನ ಕಾಟ ತಡೆಯಲಾರದೆ ನಾಟಕಕ್ಕೆ ಹೋದರು. ನಾಟಕಕ್ಕೆ ೩ ದಿನ ಮೊದಲು ನಾಟಕದ ವಾಲ್ ಪೋಸ್ಟರ್ಸ್‌ಗಳನ್ನು ರಾತ್ರಿ ಗೋಡೆಗಳಿಗೆ ಅಂಟಿಸಿದರು. ಅಂತೂ ನಾಟಕ ಕಲೆ ಅವರ ಬೆನ್ನಿಗೆ ಅಂಟಿಕೊಂಡಿತು. ಚಿಕ್ಕ ಪಾರ್ಟೂ ಮಾಡಿದರು.

ಮುಂದೆ ಹೀಗೆ ನಡೆದು ಮೈಸೂರಿನ ಟೌನ್ ಹಾಲಿನಲ್ಲಿ ಅನೇಕ ಗೆಳೆಯರು ಸೇರಿ ಒಂದು ನಾಟಕ ಆಡಲು ಸೇರಿದರು. ನಾಟಕ - "ನಿರ್ಭಾಗ್ಯ ಭಾರತಿ". ಬರೆದವರು ವಿಷ್ಣುವರ್ಧನ್ ಅವರ ತಂದೆ, ಲೇಖಕ, ನಟ, ಹಾಗೂ ವಾಮನ್ ಅವರ ಆಪ್ತಮಿತ್ರ. ಎಚ್.ಎಲ್. ನಾರಾಯಣರಾವ್. ಆ ನಾಟಕಕ್ಕೆ ಸರಿಯಾದ ನಿರ್ದೇಶನ ಇರಲಿಲ್ಲ. ಅವಸರದ ಶೋ. ಜನ ಮೆಚ್ಚಲಿಲ್ಲ. ಇಲ್ಲಿ ವಾಮನ್-ಅಶ್ವತ್ಥ್ ಸೇರಿದ ಸಂದರ್ಭ. ಕಾಲಾನಂತರದಲ್ಲಿ ಇವರಿಬ್ಬರ ಕಲೆಯನ್ನು ಜನ ಮೆಚ್ಚಿದರು. ಹುಚ್ಚೆದ್ದು ಪ್ರೀತಿಸಿದರು. ನೋಡಿ, ಎಂತಹ ಸೋಜಿಗ! ಆಗ ಪುಟ್ಟ ಬಿಂದುಗಳಾಗಿದ್ದ ಆ ಇಬ್ಬರೂ ಮುಂದೆ ಎರಡು ಮಹಾ ನದಿಗಳಾಗಿ ಪ್ರವಹಿಸಿ ಕಲಾಸಂಗಮದಲ್ಲಿ ಒಂದಾಗಲಿದ್ದ ಮಹಾ ಚೇತನಗಳಾಗಲಿವೆ ಎಂಬ ಸುಳಿವು ಬಹುಶಃ ಕಾಲಪುರುಷನ ಒಡಲಾಳದಲ್ಲಿ ಗುಪ್ತವಾಗಿ ಸುಪ್ತವಾಗಿ ಅಡಗಿತ್ತು.

ಅಲ್ಲಿಂದ ಪ್ರತಿದಿನ ಅಶ್ವತ್ಥ್ ವಾಮನ್ ಮನೆಗೆ ಹೋಗುತ್ತಿದ್ದರು. ವಾಮನ್ ಆಗ ಮೈಸೂರಿನ ಹಾರ್ಡ್‌ವಿಕ್ ಪ್ರೌಢಶಾಲೆಯುಲ್ಲಿ ಮೇಷ್ಟು. ಮೈಸೂರಿನ ಕಾಲೇಜು ರಸ್ತೆಯಲ್ಲಿ ಅವರ ಮನೆ. ತಾಯಿ ತಂಗಮ್ಮ ದೊಡ್ಡ ಸಂಸಾರವನ್ನು ಬಹಳ ಕಷ್ಟ ಪಟ್ಟು ನಡೆಸುತ್ತಿದ್ದರು. ವಾಮನ್ ತಂದೆ, ತಾತ, ಹಾಗೂ ಮನೆಯ ಇನ್ನಾರಿಗೂ ಕಲೆಯ ಬಗ್ಗೆ ಆಸಕ್ತಿಯಿರಲಿಲ್ಲ. ಹಾಗೂ ಕಲಾವಿದರೆಂದರೆ ಒಂದು ರೀತಿಯ ತಿರಸ್ಕಾರ. ಅದು ಸಂಪ್ರದಾಯದ ವಿರುದ್ಧವೆಂದೇ ಭಾವಿಸಿದ್ದರು.

ಅಶ್ವತ್ಥ್ ನಿರುದ್ಯೋಗಿ. ಒಮ್ಮೆ ವಾಮನ್ ಅವರನ್ನು ತಮ್ಮ ಸ್ಟೂಡೆಂಟ್ಸ್ ಡ್ರಮಾಟಿಕ್ ಅಸೋಸಿಯೇಷನ್‌ಗೆ ಸೇರಲು ಆಹ್ವಾನಿಸಿದರು. ಅಶ್ವತ್ಥ್ ಅವರು ಹೇಳಿದ ಮಾತು ಕೇಳಿದರೆ ನಿಮಗೆಲ್ಲ ಷಾಕ್ ಆಗಬಹುದು. "ವಾಮನರಾಯರೇ, ನನಗೆ ಕಲೆ ಅನ್ನೋದು ಏನು ಅಂತಾನೇ ಗೊತ್ತಿಲ್ಲ, ಮೇಲಾಗಿ ನನಗೆ ಆಸಕ್ತಿ ಇಲ್ಲ. ನನಗೆ ಪಾತ್ರ ಮಾಡೋಕೆ ಬರೋಲ್ಲ." ವಾಮನ್ ಹಠ. "ನಾನು ನಿಮಗೆ ಎಲ್ಲ ಕಲಿಸ್ತೀನಿ. ತರಬೇತಿ ಕೊಡ್ತೀನಿ" ವಾಮನ್ ಒತ್ತಾಸೆಯಿಂದ ಅಶ್ವತ್ ಬಣ್ಣದ ಲೋಕಕ್ಕೆ ಕಾಲಿಟ್ಟರು.

ವಾಮನ್ ಆಕಾಶವಾಣಿಗೆ ಸೇರುವ ಮೊದಲೇ ಒಂದು ಹವ್ಯಾಸಿ ಕಲಾವಿದರ ನಾಟಕ ಸ್ಪರ್ಧೆ ಮೈಸೂರಿನಲ್ಲಿ ಏರ್ಪಾಡಾಗಿತ್ತು. ನಂಜನಗೂಡು ಶ್ರೀಕಂಠಶಾಸ್ತ್ರಿಗಳೂಂತ ವಿದ್ವಾಂಸರು. ಅವರ ಮಗ ಆಗ ಶಾರದಾ ವಿಲಾಸ ಕಾಲೇಜಿನಲ್ಲಿ ಅಧ್ಯಾಪಕರು. ಈ ನಾಟಕ ಸ್ಪರ್ಧೆಯಲ್ಲಿ ಅಶ್ವತ್ಥ್ - ವಾಮನ್ ಭಾಗವಹಿಸಿ ಆಷಾಢಭೂತಿ ಆಡಿದರು. ಈ ನಾಟಕಕ್ಕೆ ಆಗ ಮೂರನೆಯ ಬಹುಮಾನ ಸಿಕ್ಕಿತು. ಹೀಗಾಗಿ ಅಶ್ವತ್ಥ್ ಅವರಿಗೆ ಸ್ಪೂರ್ತಿ ಹೆಚ್ಚಿತು. ಕಲೆಯ ಬಗ್ಗೆ ಆಸಕ್ತಿ ಹೆಚ್ಚಿತು. ಆಗ ಅಶ್ವತ್ಥ್ ಮಾಡಿದ್ದು "ರಾಮು" ಪಾತ್ರ.

ಆರಂಭದಲ್ಲಿ ಗುರು ವಾಮನ್ ಹೇಳಿಕೊಟ್ಟಂತೆ ಅಶ್ವತ್ಥ್ ನಾಟಕದಲ್ಲಿ ಆಗಾಗ ಪಾರ್ಟು ಮಾಡ್ತಿದ್ದರು. ಸ್ಕೂಲು ಕಾಲೇಜುಗಳಲ್ಲೇ ಹೆಚ್ಚಿನ ಶೋಗಳು. ಆಗ ಆಡಿದ ನಾಟಕಗಳೆಂದರೆ ಎ.ಎನ್. ಮೂರ್ತಿರಾಯರ "ಆಷಾಢಭೂತಿ", ನಾ ಕಸ್ತೂರಿಅವರ "ಗಗ್ಗಯ್ಯನ ಗಡಿಬಡಿ" ಕ್ಷೀರಸಾಗರರ "ಶಾಮಣ್ಣನ ಸಾಹಸ" ಪರ್ವತವಾಣಿ ಅವರ "ಮೀನಾ ಮದುವೆ", "ವಾರ್ಷಿಕೋತ್ಸವ" ಹಾಗೂ "ಸುಂದ್ರೋಪಸುಂದ್ರು". ಇವುಗಳ ನೂರಾರು ಪ್ರಯೋಗಗಳು ನಡೆದುವು.

"ಆಷಾಢಭೂತಿ" - ವಾಮನ್ ಹಾಗೂ ಅಶ್ವತ್ಥ್ ಜೋಡಿಯ ಅತ್ಯಂತ ಜನಪ್ರಿಯ ಹಾಗೂ ಇವರಿಬ್ಬರಿಗೂ ಬಲು ಹಿಡಿಸಿದ ನಾಟಕ. ಆರಂಭದಲ್ಲಿ ಅಶ್ವತ್ಥ್ ಮಗ ರಾಮು ಪಾತ್ರ ಮಾಡುತ್ತಿದ್ದರು. ಸದಾ ನಿರ್ದೇಶನ ಹಾಗೂ ಸುಬ್ಬಾ ಶಾಸ್ತ್ರಿ ಪಾತ್ರ ವಾಮನ್ ಅವರದು. ಮುಂದೆ ಅಶ್ವತ್ಥ್ ಮನೆ ಯಜಮಾನ ಶಂಕರಪ್ಪನ ಪಾತ್ರಕ್ಕೆ ಪ್ರಮೋಶನ್ ಪಡೆದರು. ಈ ನಾಟಕ ರೇಡಿಯೋದಲ್ಲಿ ಅನೇಕ ಬಾರಿ ಪ್ರಸಾರವಾಗಿದೆ. ಮೈಸೂರಿನಲ್ಲಿ, ಧಾರವಾಡದಲ್ಲಿ ಈ

ನಾಟಕ ಪ್ರಸಾರವಾದಾಗ ಅಶ್ವತ್ಥ್, ಪಂಡರೀಬಾಯಿ, ಮೈನಾವತಿ, ರಮಾದೇವಿ ವಾಮನ್ ಜೊತೆಗೆ ಹಾಗೂ ಅವರ ನಿರ್ದೇಶನದಲ್ಲಿ ಭಾಗವಹಿಸಿದ್ದರು.

೬೦ರ ದಶಕದಲ್ಲಿ ಧಾರವಾಡ-ಹುಬ್ಬಳ್ಳಿ ಗಳಲ್ಲಿ ಈ ನಾಟಕದ ಬೆನಿಫಿಟ್ ಶೋಗಳು ನಡೆದುವು.

ಆಕಾಶವಾಣಿ ವಾರ್ತಾವಾಚಕ ಲಕ್ಷ್ಮಣ ಜೋಷಿ ಅಪಘಾತದಲ್ಲಿ ಮಡಿದಾಗ, ಅವರ ಸಹಾಯಾರ್ಥ ನಡೆದ ಈ ನಾಟಕದ ಪ್ರಯೋಗಗಳಲ್ಲಿ ಅಶ್ವತ್ಥ್-ಶಂಕರಪ್ಪ ಅವರ ಜೊತೆ ನಾನೂ ರಾಮು ಪಾತ್ರ ಮಾಡಿದ್ದೆ. ಅವರೊಂದಿಗೆ ವಾದ ಮಾಡಿ ಜಗಳವಾಡುವ ಪಾತ್ರ. ನನ್ನ ಹಾಗೂ ಅಶ್ವತ್ಥ್ ಅವರ ಆ ದೃಶ್ಯಗಳ ರಿಹರ್ಸಲ್ ಹಾಗೂ ಆ ನಾಟಕಗಳ ಶೋ - ಅವುಗಳಿಗೆ ಒಟ್ಟಾರೆ ಸಿಕ್ಕಿದ ಜನಮನ್ನಣೆ ಚಪ್ಪಾಳೆ ಈಗಲೂ ನನ್ನ ಕಣ್ಣೆದುರು ಕಾಣುವಂತಿದೆ ಹಾಗೂ ಕಿವಿಗೆ ಕೇಳಿಸುವಂತಿದೆ. ಈ ನಾಟಕದ ಸುಬ್ಬಾ ಶಾಸ್ತ್ರಿ ಪಾತ್ರ ವಹಿಸಿ ನಿರ್ದೇಶಿಸಿದ ಎನ್. ಎಸ್. ವಾಮನ್ ನನ್ನ ಪೂಜ್ಯ ತಂದೆ ಹಾಗೂ ಅಶ್ವತ್ಥ್ ಅವರ ಕಲಾಗುರು ಎಂದು ನೆನೆದಾಗ ಹಾಗೂ ಅದೇ ಕಲಾಗುರುವಿನ ಮುಂದುವರಿಕೆ ಅಂಶ ನಾನು ಎಂದು ಸ್ಮರಿಸಿದಾಗ ಈ ನಾಟಕ ಕಲೆಯನ್ನು ಕೊನೆಯವರೆಗೆ ಮುಂದುವರಿಸಬೇಕೆಂಬ ಮನೋಭಿಲಾಷೆ ಗಟ್ಟಿ ಹಾಗೂ ದಟ್ಟವಾಗುತ್ತದೆ.

ಕಲಾಜೀವನದ ಪ್ರಾರಂಭದಲ್ಲಿ ಅಶ್ವತ್ಥ್ ಅವರಿಗೆ ಒಂದು ಪಾತ್ರ ಕೊಟ್ಟ ಪಾತ್ರವಷ್ಟೇ ಯಾಕೆ ಅದೇ ತರಹ ಮಾತಾಡಬೇಕು ಎಂಬ ಅನುಭವ ಅವರಿಗಿರಲಿಲ್ಲ. ಗುರು ಹೇಳಿಕೊಟ್ಟಂತೆ ಗಿಣಿ ಪಾಠ ಒಪ್ಪಿಸುತ್ತಿದ್ದರು. ನಾಟಕ ಆಡುವಾಗ ಜನಗಳನ್ನು ಕಂಡರೆ ಅಶ್ವತ್ಥ್ ಅವರಿಗೆ ಭಯ ಆಗುತ್ತಿತ್ತಂತೆ. ನಾಟಕಗಳ ಡೈಲಾಗು ಆಗ ಮರೆತು ಹೋಗುತ್ತಿತ್ತಂತೆ. ಹೇಗೋ ಅಡ್ಜಸ್ಟ್ ಮಾಡಿಕೊಳ್ಳುತ್ತಿದ್ದರು. ಸ್ಟೇಜ್‌ನಲ್ಲಿ ಆಗ ಈಗಿನ ತರಹ ಯಾವುದೇ ತಾಂತ್ರಿಕ ಸೌಲಭ್ಯಗಳಿರಲಿಲ್ಲ. ಕೈಲಿ ದುಡ್ಡಿರಲಿಲ್ಲ. ದುಡ್ಡು ಕೊಟ್ಟರೂ ಎಲ್ಲ ವಸ್ತುಗಳು ರಂಗ ಸಾಮಗ್ರಿ ಹಾಗೂ ಸೇವೆ ಸಿಗುತ್ತಿರಲಿಲ್ಲ.

ಒಂದು ಸ್ಥಾನ ಗಳಿಸಿದ ಮೇಲೆ, ಗುರು ಶಿಷ್ಯ ಇಬ್ಬರೂ ತಮ್ಮ ಜೀವನದ ಸಿಂಹಾವಲೋಕನ ಮಾಡಿದಾಗ ಇಬ್ಬರಿಗೂ ಅನ್ನಿಸುತ್ತಿತ್ತು - ತಾವು ಹಿಂದೆ ಮಾಡುತ್ತಿದ್ದ ಪ್ರಯೋಗಗಳಲ್ಲಿ ಎಷ್ಟೊಂದು ಕೃತಕತೆ, ಕೊರತೆ ಇರುತ್ತಿತ್ತು ಎಂದು.

೧೯೪೪ರಲ್ಲಿ ವಾಮನ್ ಶಿಕ್ಷಕ ವೃತ್ತಿಗೆ ನಮಸ್ಕಾರ ಹಾಕಿದರು. ಅಚ್ಚರಿ ನೋಡಿ - ಈ ಕಲಾಗುರು ಅಶ್ವತ್ಥ್‌ರವರಿಗೆ ಕೊಟ್ಟ ಕಲೆ, ಮುಂದೆ ಅಶ್ವತ್ಥ್‌ರವರನ್ನು "ನಾಗರಹಾವು" ಚಿತ್ರದ ಅಮರ ಪಾತ್ರ ಚಾಮಯ್ಯ ಮೇಷ್ಟನ್ನಾಗಿಸಿ ದಾಖಲೆಯ ಪಾತ್ರವಾಗಿ ಸೃಷ್ಟಿಸಿತು. ೧೯೪೪ರಲ್ಲಿ ವಾಮನ್ ಆಕಾಶವಾಣಿ ಸೇರಿದರು. ನಾಟಕ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ ಅವರು ಅಶ್ವತ್ಥ್‌ರವರನ್ನು ಆಕಾಶವಾಣಿ ನಾಟಕಗಳಿಗೆ ಕರೆ ತಂದರು. ಹೀಗಾಗ ಅಶ್ವತ್ಥ್ ಪ್ರಸಾರ

ನಾಟಕಕ್ಕೆ (ಈ ಹಿಂದೆ ಹವ್ಯಾಸಿ ನಾಟಕಕ್ಷೇತ್ರಕ್ಕೂ ಸಹ) ಬರಲು ವಾಮನ್‌ರವರೇ ಕಾರಣೀಭೂತರಾದರು.

ಈ ಮಧ್ಯೆ ಅಶ್ವತ್ಥ್ ಅವರಿಗೆ ಆಹಾರ ಇಲಾಖೆಯಲ್ಲಿ ಸರಕಾರೀ ನೌಕರಿ ಸಿಕ್ಕಿತು. ಬಿಡುವಿನ ಟೈಮ್‌ನಲ್ಲಿ ಅಶ್ವತ್ಥ್ ಪ್ರಸಾರ ನಾಟಕಗಳಿಗೆ ಹೋಗುತ್ತಿದ್ದರು. ಆದರೆ ಆ ಮಾಧ್ಯಮದ ಶಕ್ತಿ ಬಗ್ಗೆ ಅವರಿಗಿನ್ನೂ ತಿಳಿದಿರಲಿಲ್ಲ.

ರಿಹರ್ಸಲ್ ವೇಳೆಯಲ್ಲಿ ಆಕಾಶವಾಣಿಯ ಇತರ ನಾಟಕ ನಿರ್ದೇಶಕರು "ಅಶ್ವತ್ಥ್‌ನಾರಾಯಣ ಅವರೇ ನೀವೀಗ ಡೈಲಾಗ್ ಹೇಳಿ - ನೀವು ಹೀಗೆ ಹೇಳಿ" ಅಂತ ಪ್ರತಿ ಬಾರಿಯೂ ಅಂತಿದ್ದರಂತೆ. ಆಗ ಇತರ ಅಧಿಕಾರಿಗಳೂ ದಿನಾ ಬಂದು ನಾಟಕದ ರಿಹರ್ಸಲ್ ನೋಡುತ್ತಿದ್ದರು. ಪ್ರತೀ ಬಾರಿ ಬಂದಾಗ ಬಹಳ ನ್ಯಾಚುರಲ್ ಆಗಿ ಮಾತಾಡಬೇಕು ಅಂತ ಸೂಚನೆ ನೀಡುತ್ತಿದ್ದರು. ಆದರೆ ಅವರು ಹೇಳಿದಂತೆ ಮಾಡಲು ಅವರಿಗೆ ಆಗುತ್ತಿರಲಿಲ್ಲ. ಯಾತಕ್ಕೆ ಈ ತರಹಾನೇ ಹೇಳಬೇಕು? ಯಾವ ಪದ ಒತ್ತಬೇಕು? ಯಾವುದನ್ನು ಬೇಗ ಬೇಗ ಹೇಳಬೇಕು? ಯಾವುದನ್ನು ತಗ್ಗಿಸಿ ಹೇಳಬೇಕು? ಇವು ಯಾವುದೂ ತಿಳಿದಿರಲಿಲ್ಲವಂತೆ. ಪೂರ್ಣ ಅರ್ಥವಾಗದೆ ಸುಮ್ಮನೆ ಅವರು ಹೇಳಿದಂತೆ ಮಾಡುತ್ತಿದ್ದರಂತೆ. ಪ್ರತಿ ಬಾರಿ ಎಲ್ಲರೆದುರು ಇತರ ನಿರ್ದೇಶಕರು ತಿದ್ದಿ ತಿದ್ದಿ ಇವರಿಗೆ ಹೇಳುತ್ತಿದ್ದರಂತೆ "ಏನ್ರೀ ಅಶ್ವತ್ಥ್‌ನಾರಾಯಣ್, ಎಷ್ಟು ಸಲ ಹೇಳಿಕೊಟ್ರೂ ಕೂಡ ನಿಮ್ಮ ತಲೆಗೇ ಹೋಗುತ್ತಿಲ್ಲವಲ್ಲ?" ಎಲ್ಲರೆದುರೂ ಅವಮಾನ. ಏನೂ ಮಾಡೋ ಹಾಗಿರಲಿಲ್ಲ. ಕೆಲಕಾಲ ಅನುಭವಿಸಿದರು - ಈ ಯಾತನೆ. ಸ್ವಾಭಿಮಾನ ಚುಚ್ಚುತ್ತಿದ್ದರೂ ಆ ಕಾಲದಲ್ಲಿ ಆಕಾಶವಾಣಿ ಕೊಡುತ್ತಿದ್ದ ೫ ರೂಪಾಯಿ ಹಾಗೂ ಜನಮನ್ನಣೆಗಾಗಿ ಸುಮ್ಮನಿರುತ್ತಿದ್ದರಂತೆ. ಗುರು ವಾಮನ್ ನಾಟಕ ವಿಭಾಗ ವಹಿಸಿಕೊಂಡ ಮೇಲೆ ಅಶ್ವತ್ಥ್‌ಗೆ ಹಗುರವಾಯಿತು. ವಾಮನ್ ಇವರ ವೀಕ್‌ನೆಸ್ ಏನೂಂತ ತಿಳಿದುಕೊಂಡು ಇವರಿಗೆ ಸರಿಯಾಗಿ ಮಾರ್ಗದರ್ಶನ ಮಾಡಿದರು. ಗುರು ಹೇಳಿಕೊಡುತ್ತಾ ಹೋದರು. ಹೆಚ್ಚಿನ ಭಕ್ತಿ ಶ್ರದ್ದೆ, ಆಸಕ್ತಿಯಿಂದ ಶಿಷ್ಯ ಕಲಿಯುತ್ತಾ ಹೋದ. ಎಲ್ಲ ಅಂಶಗಳನ್ನೂ ಮೊಗೆ ಮೊಗೆದು ಸುರಿದರು. ಅಶ್ವತ್ಥ್ ದಾಹ ತೀರಲಿಲ್ಲ. ಕಾರಣ ಗುರುಗಳು ಹೇಳಿಕೊಟ್ಟದ್ದನ್ನು ಕಲಿತರು. ಯಾವ ಶಬ್ದಗಳನ್ನು ಒತ್ತಿ ಹೇಳಬೇಕು, ಯಾವುದನ್ನು ತೇಲಿಸಬೇಕು ಎಂದು ವಾಮನ್ ಹೇಳಿಕೊಟ್ಟಂತೆ ನಾಟಕದ ಹಸ್ತಪ್ರತಿ ಮೇಲೆ ಪೆನ್ಸಿಲ್‌ನಿಂದ ಗುರುತು ಹಾಕಿಕೊಳ್ಳುತ್ತಿದ್ದರು. ಗಿಳಿಪಾಠದಂತೆ ಮನೆಯಲ್ಲಿ ಓದಿ ಓದಿ ಮನನ ಮಾಡಿದರು. ಆದು ಯಾಕೆ ಹಾಗೆ ಮಾಡಬೇಕು, ಅದರರ್ಥವೇನು ಎಂದು ಅವರಿಗೆ ತಿಳಿಯಲಿಲ್ಲ.

ಕ್ರಮೇಣ ಅವರ ಹೆಚ್ಚಿನ ಪ್ರಯತ್ನ ಗುರುಗಳ ಹೆಚ್ಚಿನ ಬೆಂಬಲ ಇವುಗಳಿಂದ ಅಭ್ಯಾಸ ಅನುಭವಗಳಿಂದ ಸ್ವಲ್ಪ ಸ್ವಲ್ಪ ಎಲ್ಲಾ ತಿಳಿಯುತ್ತಾ ಹೋಯಿತು. ಹೀಗಾಗಿ ಗುರುಗಳಿಂದ ಪಾಸ್ ಅನಿಸಿಕೊಳ್ಳುತ್ತಾ ಹೋದರು. ಪಾಸಿಂಗ್ ಮಾರ್ಕ್ಸ್, ಫೇಲ್ ಅಲ್ಲ. ಮಿನಿಮಮ್ ಬಂತು. ವಾಮನ್ ಬೆನ್ನು ಹತ್ತಿದ್ದರು. ಅ.ನ.ಕೃ., ತ.ರಾ.ಸು. ಅವರು ಬರೆದುಕೊಟ್ಟ ನಾಟಕಗಳು,

ಹುಣಸೂರು ಕೃಷ್ಣಮೂರ್ತಿಗಳು ಬರೆದ ಪೌರಾಣಿಕ ನಾಟಕಗಳು, ರಾಜಪ್ಪ ಶೆಟ್ಟಿ ಬರೆದ ಐತಿಹಾಸಿಕ ನಾಟಕಗಳು. ಕ್ರಮೇಣ ಅಶ್ವತ್ಥ್ ಅವರಿಗೆ ಮುಖ್ಯ ಪಾತ್ರಗಳು ಸಿಕ್ಕವು. ನಂತರ ಅಶ್ವತ್ಥ್ ಅವರಿಲ್ಲದೆ ಮುಖ್ಯ ಪಾತ್ರಗಳಿಲ್ಲ. ಹೆಚ್ಚಿನ ಎಲ್ಲ ರೇಡಿಯೋ ನಾಟಕಗಳಿಗೆ ಅಶ್ವತ್ಥ್ ಹೀರೋ ಆದರು. ಮುಂದೆ ಆ ಪರಂಪರೆ ಮುಂದುವರೆಯಿತು.

೧೯೫೨ರಲ್ಲಿ ವಾಮನ್ ಅವರಿಗೆ ಮೈಸೂರಿನಿಂದ ದೆಹಲಿಗೆ ವರ್ಗವಾಯಿತು. ಮೈಸೂರಿನ ನಾಟಕ ವಿಭಾಗದಿಂದ ದೆಹಲಿಯ ಕನ್ನಡ ವಾರ್ತಾ ವಿಭಾಗಕ್ಕೆ ವಾರ್ತಾ ವಾಚಕರಾಗಿ ಹೋದರು. ಆಗ ಅಶ್ವತ್ಥ್ ಅವರು ವಾಮನ್ ಅವರನ್ನು ಕಳಿಸಲು ಬೆಂಗಳೂರವರೆಗೆ ಬರ್ತೀನಿ ಎಂದರು. ಗುರುಗಳು ಹಾಗೂ ಶಿಷ್ಯ ಇಬ್ಬರೂ ಮೈಸೂರಲ್ಲಿ ಇರುವ ತನಕ ಮೈಸೂರಿನಲ್ಲಿ ಶಿವರಾಂ ಪೇಟೆಯಲ್ಲೋ ಸುಬ್ರಾಯನ ಕೆರೆಯಲ್ಲೋ ಪ್ರತಿ ದಿನ ಹಗಲೇ, ರಾತ್ರಿಯೇ ಮಧ್ಯರಾತ್ರಿಯೇ ಕೂತು ಹರಟೆ ಹೊಡೀತಿದ್ದರು. ಶಿವರಾಂ ಪೇಟೆಯಲ್ಲಿ ಅಂಬಾ ಭವನದಲ್ಲಿ ಶ್ರೀ ನೀಲಕಂಠರಾಯರು ಮ್ಯಾನೇಜರ್ ಆಗಿದ್ದರು. ಅವರು ಪ್ರತೀ ನಾಟಕ ಕೇಳೋವ್ರು, ನೋಡೋವ್ರು. ಅಲ್ಲಿಗೆ ಹೋದಾಗ ಅವರು ನಾಟಕದ ಬಗ್ಗೆ ತಮ್ಮ ಅಭಿಪ್ರಾಯ ಹೇಳುತ್ತಿದ್ದರು. ಹೋಟಲಲ್ಲಿ ತಿಂಡಿ ಮಿಕ್ಕಿದ್ದರೆ ಪ್ರೀತಿಯಿಂದ ಇಬ್ಬರಿಗೂ ತಂದು ಕೊಡುತ್ತಿದ್ದರು. ಒಂದು ದಿನವೂ ಗುರುಗಳನ್ನು ಸಂಧಿಸದೇ ಇರುತ್ತಿರಲಿಲ್ಲ ಅಶ್ವತ್ಥ್. ಟ್ರಾನ್ಸ್‌ಫರ್ ಆದಾಗ "ಮುಂದೆ ಹೇಗಪ್ಪಾ? ಮುಂದೆ ಕಾಲ ಕಳೆಯೋದು ಹೇಗೆ?" ಅಂತ ಯೋಚನೆ. ಬೆಂಗಳೂರಿನವರೆಗೆ ರೈಲಿನಲ್ಲಿ ಹೋದ ಅಶ್ವತ್ಥ್ ಕಿಟಕಿ ಪಕ್ಕ ಕುಳಿತಿದ್ದರು. ಬೆಂಗಳೂರು ಹತ್ತಿರ ಬಂತು. "ಇನ್ನು ನಮ್ಮ ಗುರುಗಳು ದೆಹಲಿಗೆ ಹೊರಟು ಹೋಗುತ್ತಾರಲ್ಲಾ" ಎಂದು ದುಃಖ. ಕಣ್ಣೀರ ಕೋಡಿ ಹರಿಯಿತು. ಗುರು ವಾಮನ್ ತಿರುಗಿ ಪ್ರೀತಿ ಸ್ನೇಹದಿಂದ ಅಶ್ವತ್ಥ್ ತಲೆ ಮೇಲೆ ಹೊಡೆದರು. "ಯಾಕ್ರೀ ಇಷ್ಟು ಎಮೋಷನಲ್ ಆಗಿದ್ದೀರಿ? ನಾನೇನೂ ವಿದೇಶಕ್ಕೆ ಹೊರಟಿದ್ದೀನಾ? ದೆಹಲಿಗೆ ತಾನೇ? ಮೈಸೂರಿಗೆ ಬರ್ತಾನೆ ಇರುತ್ತೀನಿ." ಅಂತ ಅಶ್ವತ್ಥ್‌ರ ಕಣ್ಣೀರು ಒರೆಸಿದರು. ಸತತವಾಗಿ ವಾಮನ್ ಮತ್ತು ಅಶ್ವತ್ಥ್‌ರವರುಗಳು ಪರಸ್ಪರ ಪತ್ರ ಸೇತುವಿನ ಮೂಲಕ ಬಹಳ ವರ್ಷ ನಿರಂತರ ಸಂಪರ್ಕವನ್ನಿಟ್ಟುಕೊಂಡಿದ್ದರು.

೧೯೫೪ ರಲ್ಲಿ ದೆಹಲಿಯಲ್ಲಿ ಕರ್ನಾಟಕ ಸಂಘದ ಮನರಂಜನಾ ಕಾರ್ಯದರ್ಶಿಯಾಗಿ ಅಂದಿನ ರಾಷ್ಟ್ರಾಧ್ಯಕ್ಷರಾಗಿದ್ದ ಡಾ. ರಾಜೇಂದ್ರ ಪ್ರಸಾದ್ ಅವರ ಸಮ್ಮುಖದಲ್ಲಿ ವಾಮನ್ ನಾಲ್ಕು ನಾಟಕಗಳನ್ನು ಆಡಿಸಿದರು. ಅವರ ನಿರ್ದೇಶನ ಹಾಗೂ ಪಾತ್ರದಲ್ಲಿ ಬಿ.ಎಮ್. ಶ್ರೀ ಅವರ "ಗದಾಯುದ್ಧ", ಜಿ.ಪಿ. ರಾಜರತ್ನಂ ಅವರ "ಗಂಡುಗೊಡಲಿ" ಸಂಸ ಅವರ "ವಿಗಡ ವಿಕ್ರಮರಾಯ" ಹಾಗೂ ಎ.ಎನ್. ಮೂರ್ತಿರಾಯರ "ಆಷಾಢಭೂತಿ". ಈ ನಾಲ್ಕೂ ನಾಟಕಗಳಲ್ಲಿ ಅಶ್ವತ್ಥ್ ಹಾಗೂ ಮೈಸೂರಿನ ಬಹಳಷ್ಟು ಕಲಾವಿದರು ಅಭಿನಯಿಸಿದರು. ಮುಂದೆ ಅಶ್ವತ್ಥ್ ಸಿನಿಮಾ ಕ್ಷೇತ್ರಕ್ಕೆ ಹೋಗಿ ಮಿಂಚಿದರು.

ನಂತರ ವಾಮನ್ ಬೆಂಗಳೂರು ಆಕಾಶವಾಣಿಗೆ ಬಂದಾಗ, ಮುಂದೆ ಧಾರವಾಡಕ್ಕೆ ಹೋದಾಗ ಅಲ್ಲಿಯ ಪ್ರಸಾರ ನಾಟಕಗಳಿಗೆ ಅಶ್ವತ್ಥ್‌ರನ್ನು ಕರೆಯುತ್ತಿದ್ದರು. ಮೈಸೂರಿಗೆ ವಾಮನ್ ಬಂದಾಗಲೆಲ್ಲ ಅಶ್ವತ್ಥ್ ಅವರ ಬಿಡುವಿನ ಸಮಯ ನಾಟಕ, ಸಿನಿಮಾ ಬಗ್ಗೆ ಹರಟೆ. ಮುಂದೆ ವೃತ್ತಿ ರಂಗಭೂಮಿಯ ನಾಟಕಗಳಲ್ಲಿ ವಾಮನ್ ಅವರ ಕರೆಯಂತೆ ಅಶ್ವತ್ಥ್ ಬಂದರು. ಉತ್ತರ ಕರ್ನಾಟಕದ ಎಲ್ಲ ಊರುಗಳಲ್ಲಿ ನಾಟಕದ ಸಾವಿರಾರು ಪ್ರದರ್ಶನ.

ಎಲ್ಲರೂ ಅವರ ರೇಡಿಯೋ, ರಂಗ, ಹಾಗೂ ಸಿನಿಮಾ ಪಾತ್ರಗಳನ್ನು ಅಪಾರವಾಗಿ ಮೆಚ್ಚಿಕೊಂಡಾಗ ಅವರು ಹೇಳುತ್ತಿದ್ದುದು "ಪ್ರಸಾರ ನಾಟಕದಲ್ಲಿ ನನಗೆ ಸಿಕ್ಕಿದ ಒಟ್ಟೂ ತರಬೇತಿಯಿಂದ ಎಷ್ಟರ ಮಟ್ಟಿಗಿನ ಉಪಯೋಗ ಆಯಿತೆಂದರೆ ಒಬ್ಬ ಕಲಾವಿದ ಕೇವಲ ಸನ್ನಿವೇಶ ಅರ್ಥ ಮಾಡಿಕೊಂಡರೆ ಸಾಲದು. ಆ ಸನ್ನಿವೇಶ ನಿಜವಾಗಿಯೂ ನಡೆಯುತ್ತಿದೆ ಅನ್ನುವ ಒಂದು ಭಾವನೆ, ಕಲ್ಪನೆ ಆತನಿಗೆ ಬರಬೇಕು. ಆತ ಈ ಕಲ್ಪನೆಯನ್ನು ಎಷ್ಟು ಚೆನ್ನಾಗಿ ತಂದುಕೊಳ್ಳಬಲ್ಲ ಅಷ್ಟು ಚೆನ್ನಾಗಿ ಮಾಡಬಲ್ಲ. ಎಲ್ಲಿ ಮಾತು ವಿಸ್ತರಿಸಿ ಹೇಳಬೇಕು, ಎಲ್ಲಿ ತಗ್ಗಿಸಬೇಕು, ಯಾವ ಪದ ಒತ್ತಿ ಹೇಳಬೇಕು, ಯಾವ ಪದ ಒತ್ತಿ ಹೇಳಬಾರದು, ಯಾವ ಪದವನ್ನು ನಿಧಾನವಾಗಿ ಹೇಳಬೇಕು, ಎಲ್ಲಿ ಬರೀ ಉಸಿರು ಕೊಟ್ಟು ಅದರೊಳಗೇ ಸೂಚನೆ ಮಾಡಬೇಕು ಇವೆಲ್ಲ ಕಲಿತುಕೊಳ್ಳಬೇಕು. ಇವೆಲ್ಲವನ್ನೂ ನಾನು ಪ್ರಸಾರ ನಾಟಕಗಳಿಂದ ಹಾಗೂ ನನ್ನ ಗುರು ವಾಮನ್ ಅವರಿಂದ ಕಲಿತೆ. ಹೀಗಾಗಿ ಇದು ಚಿತ್ರರಂಗದಲ್ಲಿ ಬಹಳಷ್ಟು ಸಹಾಯ ಮಾಡಿವೆ".

ಇಂದು ಅಶ್ವತ್ಥ್ ಮತ್ತು ವಾಮನ್ ಇಬ್ಬರೂ ಭೌತಿಕವಾಗಿ ನಮ್ಮೊಂದಿಗೆ ಇಲ್ಲದಿದ್ದರೂ ಕನ್ನಡನಾಡಿನ ಕಲಾಕ್ಷೇತ್ರದಲ್ಲಿ, ರೇಡಿಯೋ, ರಂಗಭೂಮಿ ಹಾಗೂ ಸಿನಿಮಾ ಇರುವ ತನಕ ಇವರ ಹೆಸರು ಅಜರಾಮರ. ಎಂದು ನನ್ನ ಸ್ಪಷ್ಟ ಅನಿಸಿಕೆ.



ಪತ್ನಿ ಶಾರದಾರೊಂದಿಗೆ



ಕಲಾಗುರು ಶ್ರೀ ವಾಮನ್‌ರೊಂದಿಗೆ



ಪ್ರಧಾನಿ ಶ್ರೀಮತಿ ಇಂದಿರಾಗಾಂಧಿಯವರಿಂದ ಪ್ರಶಸ್ತಿ ಸ್ವೀಕಾರ



ತುಮಕೂರು ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪ್ರಶಸ್ತಿ



ಕನ್ನಡ ಚಿತ್ರರಂಗದ ಮೇರುಪ್ರತಿಭೆಗಳು - ಪಂಡರಿಬಾಯಿ ಮತ್ತು ರಾಜ್‌ಕುಮಾರ್‌ರೊಂದಿಗೆ




ತೆರೆಯ ಮೇಲಿನ ಅಪರೂಪದ ದಾಂಪತ್ಯ ಜೋಡಿ

ವಿವಿಧ ಪಾತ್ರಗಳಲ್ಲಿ ನಟರತ್ನ ಕೆ.ಎಸ್. ಅಶ್ವತ್ಥ್








ವಿವಿಧ ಪಾತ್ರಗಳಲ್ಲಿ ನಟರತ್ನ ಕೆ.ಎಸ್. ಅಶ್ವತ್ಥ್









ಉಲುಚುಕಮ್ಮೆ ಬ್ರಾಹ್ಮಣ ಮಹಾಸಭಾ ಪ್ರಾರ್ಥನಾ ಮಂದಿರ




ಉಲುಚುಕಮ್ಮೆ ಬ್ರಾಹ್ಮಣ ಮಹಾಸಭಾ ಕಾರ್ಯಕಾರಿ ಸಮಿತಿ

ಗೌ॥ ಅಧ್ಯಕ್ಷರು	ಶ್ರೀ ಪಿ.ಎನ್. ಅಶ್ವತ್ಥ ನಾರಾಯಣರಾವ್
ಗೌ॥ ಉಪಾಧ್ಯಕ್ಷರು	ಶ್ರೀ ಜಿ.ವಿ. ಪ್ರಭಾಕರ್
ಗೌ॥ ಕಾರ್ಯದರ್ಶಿಗಳು	ಶ್ರೀ ವಿ. ಮಂಜುನಾಥ್
ಗೌ॥ ಸಹಕಾರ್ಯದರ್ಶಿಗಳು	ಶ್ರೀ ಎಸ್. ಮುರಳೀಧರ ಶಾಸ್ತ್ರಿ
ಗೌ॥ ಖಜಾಂಚಿಗಳು	ಡಾ. ಕೆ. ಲಕ್ಷ್ಮೀಕಾಂತ್
ಗೌ॥ ಆಂತರಿಕ ಲೆಕ್ಕಪರಿಶೋಧಕರು	ಶ್ರೀ ಎಂ. ನರಸಿಂಹ ಮೂರ್ತಿ

ಸದಸ್ಯರು

ಶ್ರೀ ಎಂ.ಎಸ್. ನಾಗರಾಜರಾವ್	ಶ್ರೀ ಕೆ.ಎಸ್. ಶಿವರಾಮ್
ಶ್ರೀ ಪಿ.ಎಸ್. ಭಾನುಪ್ರಕಾಶ್	ಶ್ರೀ ಎಸ್. ಮಂಜುನಾಥ್
ಶ್ರೀ ಎಸ್.ಆರ್. ನಾಗರಾಜ್	ಶ್ರೀ ಆರ್. ಗಣೇಶ್ ಪ್ರಸಾದ್
ಶ್ರೀ ಕೆ.ವಿ. ಗೋಪಾಲರಾವ್	ಶ್ರೀ ಡಿ.ಎಸ್. ನಾಗರಾಜ
ಶ್ರೀಮತಿ ಎ.ಎಸ್. ಕಲಾವತಿ	ಶ್ರೀಮತಿ ಎ. ಅನುರಾಧ ಕುಮಾರ್



ಎನ್. ಆನಂದ ರಾಮರಾವ್

ಬೆಂಗಳೂರಿನ ಭಾರತ್ ಎಲೆಕ್ಟ್ರಾನಿಕ್ಸ್ ಕಾರ್ಖಾನೆಯ ಲೆಕ್ಕಾಧಿಕಾರಿಯಾಗಿ ನಿವೃತ್ತರಾಗಿರುವ ಶ್ರೀ ಎನ್. ಆನಂದ ರಾಮರಾವ್ ಅವರು ಕನ್ನಡ ನಾಡು ನುಡಿಯ ಬಗ್ಗೆ ಅಪಾರ ಅಭಿಮಾನವುಳ್ಳವರು. ಅನೇಕ ಕನ್ನಡ ಪರ ಹೋರಾಟಗಳಲ್ಲಿ ಭಾಗವಹಿಸಿರುವ ಅವರು ಉತ್ತಮ ಲೇಖಕರೂ ಹೌದು. ನಾಡಿನ ಪ್ರಸಿದ್ಧ ಪತ್ರಿಕೆಗಳಾದ ಪ್ರಜಾವಾಣಿ, ಉದಯವಾಣಿ, ಸುಧಾ ಮುಂತಾದವುಗಳಲ್ಲಿ ಇವರ ಹಲವಾರು ಲೇಖನಗಳು ಪ್ರಕಟವಾಗಿ ಓದುಗರ ಮೆಚ್ಚುಗೆ ಗಳಿಸಿವೆ.

“ನಿವೃತ್ತಿಗಾಗಿ ಯೋಜನೆ” (Planning for Retirement) ಎಂಬ ವಿಷಯದ ಬಗ್ಗೆ ಹಲವಾರು ಉದ್ದಿಮೆಗಳು ಹಾಗೂ ಕಛೇರಿಗಳಲ್ಲಿ ಇವರು ನೀಡುತ್ತಿರುವ ಉಪನ್ಯಾಸಗಳು ನಿವೃತ್ತರಾಗಲಿರುವ ಉದ್ಯೋಗಿಗಳಿಗೆ ಉತ್ತಮ ಮಾರ್ಗದರ್ಶಕವಾಗುತ್ತಿವೆ. “ನಿವೃತ್ತಿ ನೆಮ್ಮದಿ” ಲೇಖನಮಾಲೆಯು ‘ಉದಯವಾಣಿ’ ಪತ್ರಿಕೆಯಲ್ಲಿ ೫೨ ವಾರಗಳ ಅಂಕಣ ಮಾಲೆಯಾಗಿ ಪ್ರಕಟವಾಗಿರುವುದೇ ಅಲ್ಲದೆ ಇವರು ಬರೆದಿರುವ: “ನಿವೃತ್ತಿಗೆ ಚಿಂತೆ ಏಕೆ?” ಎಂಬ ಪುಸ್ತಕವು ಬಿ.ಇ.ಎಲ್. ಕಾರ್ಮಿಕ ಸಂಘಟನೆ - ಭಾರತ್ ಎಲೆಕ್ಟ್ರಾನಿಕ್ಸ್ ವರ್ಕರ್ಸ್ ಯೂನಿಟಿ ಫೋರಂ ನಿಂದ ಪ್ರಕಟವಾಗಿದೆ.

“ಕನ್ನಡ ಚಿತ್ರರಂಗ - ಚಳುವಳಿ” ಮತ್ತು “ನಿವೃತ್ತಿ-ನೆಮ್ಮದಿ” ಪುಸ್ತಕಗಳು ಸುಂದರ ಪ್ರಕಾಶನದಿಂದ ಪ್ರಕಟಗೊಂಡು ಬಹಳ ಜನಪ್ರಿಯವಾಗಿವೆ.

“ವಿಶಾಲ ಉಲುಚುಕಮ್ಮೆ” ತ್ರೈಮಾಸಿಕದ ಸಂಪಾದಕರಾದ ಶ್ರೀಯುತರಿಂದ ರಚಿತವಾದ “ನಟರತ್ನ ಕೆ.ಎಸ್. ಅಶ್ವತ್ಥ್” ಎಂಬ ಪುಸ್ತಕವು, ಉಲುಚುಕಮ್ಮೆ ಸಾಧಕರ ಮಾಲೆಯಲ್ಲಿ ಪ್ರಕಟವಾಗುತ್ತಿದೆ.

₹ 50/-

ಉಲುಚುಕಮ್ಮೆ ಸಾಧಕರ ಮಾಲೆ